ಪ್ರೇಮವಿಜಯ



ಶಿರಿಯುರ

ಪ್ರಪಂಚ

ತೊದಲ್ನುಡಿ ಗ್ರಂಥಮಾಲೆ— ನುಡಿ ೧೪

ಪ್ರೇಮ ವಿಜಯ

ಸಾಮಾಜಿಕ ನಾಟಕ

ಕೆ. ಕೆ. ಶೆಟ್ಟಿ.

ಕಿರಿಯರ ಪ್ರಪಂಚ, ಉಡುಪಿ.

1 0 0

ಮುದ್ರಕರು:
ನವಯುಗ ಪ್ರೆಸ್,
ಉಡುಪಿ.

ವಿಕ್ರಯಾಧಿಕಾರಿಗಳು:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಪ್ರಕಾಶಕರ ಮಾತು

ಪ್ರೇಮ ವಿಜಯ ನಾಟಕವು 'ಕಿರಿಯರ ಪ್ರಪಂಚ'ದ ೧೪ನೆಯ ಕಾಣಿಕೆ. ಪ್ರಪಂಚದಲ್ಲಿ ಹದಿನಾಲ್ಕು ಲೋಕಗಳೆಂದು ಪುರಾಣಗಳನ್ನುತ್ತವೆ. ನಾವೂ ಈ ರೀತಿ ಹದಿನಾಲ್ಕನ್ನು ನಿರ್ಮಿಸಿ 'ಪ್ರಪಂಚ'ಕ್ಕೊಂದು ನಿಜವಾದ ಸ್ಥಾನ ಗಳಿಸಿಕೊಂಡೆವೆಂದು ನಮಗೆ ಸಂತೋಷ. ಈ ಮಾತಿಗೆ, ಪ್ರಪಂಚವು ಮುಂದಿನ ಸೇವೆಗಾಗಿ ತನ್ನ ಯೋಗ್ಯತೆಯನ್ನು ತುಂಬಿಸಿಕೊಂಡಿತೆಂದು ಮಾತ್ರ ಅರ್ಥ--ಅದರ ಕಾರ್ಯ ಪೂರ್ತಿಯಾಯಿತೆಂದಲ್ಲ. ಕನ್ನಡಿಗರ ಪ್ರೋತ್ಸಾಹದಿಂದ ಅದು ಮೈಗೂಡಿಸಿಗೊಂಡ ಶಕ್ತಿಯನ್ನು ಮುಂದಕ್ಕೂ ಕನ್ನಡಿಗರ ಸೇವೆಗಾಗಿ ವ್ಯಯಿಸಲಿದೆ.

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮಪ್ರವಾಹದ ಸೆಳೆತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ-ಎಂಬುದು ಪ್ರೇಮ ವಿಜಯದಲ್ಲಿ ಬಂದಿದೆ. ಇದು ಅಭಿನಯಕ್ಕನುಕೂಲವಾಗುವಂತೆ ಬರೆದ ನಾಟಕ. ಅಂತೆಯೇ ಒಂದು ಜೀವನ ನಾಟಕ. ಸುಧಾರಿಸಿಕೊಳ್ಳುವವರಿಗೂ ಬೇಸರ ಕಳೆದುಕೊಳ್ಳುವವರಿಗೂ ಎಲ್ಲ ವಿಧದ ಭಾವನೆಗಳಿಗೂ ಇವೆರಡು ಸ್ಥಿತಿಗಳು ಹೊರಸುತ್ತುಗಳಾಗಿರುವದರಿಂದ ಇದು ಎಲ್ಲರಿಗೂ ಉಪಯೋಗಕ್ಕೆ ಬೀಳುವಂತಿದೆ. ಕನ್ನಡಿಗರು ನಮ್ಮ ಈ ಪ್ರಯತ್ನವನ್ನು ಪ್ರೋತ್ಸಾಹಿಸುವರೆಂದು ನಂಬಿದ್ದೇವೆ.

ಈ ನಾಟಕವನ್ನು ಬರೆದ ಶ್ರೀ. ಕೆ. ಕೆ. ಸೆಟ್ಟರ ಉಪಕಾರವನ್ನು ಸ್ಮರಿಸುತ್ತೇವೆ.

ಉಡುಪಿ,
23-6-1941.

ಕಾರ್ಯದರ್ಶಿ,
ಕಿರಿಯರ ಪ್ರಪಂಚ, ಉಡುಪಿ.

ಪ್ರೇಮ ವಿಜಯ

ಪಾತ್ರವರ್ಗ

ಪುರುಷ—

ರಾಮು ಭಟ್ಟ—ಬಿ. ಎ. ಕಲಿತ ನವತರುಣ.
ವೆಂಕಟರಮಣ ಭಟ್ಟ—ರಾಮು ಭಟ್ಟನ ತಂದೆ.
ದುಗ್ಗಪ್ಪ ಶೆಟ್ಟಿ—ಪಟೇಲ.
ಸೋಮ—ಸುಂದರಿಯ ಅಣ್ಣ.
ಸುಬ್ಬ—ಸುಂದರಿಯ ತಮ್ಮ.
ಲಕ್ಷ್ಮೀನಾರಾಯಣ ರಾವ್—ಇನ್ಶ್ಯೂರೆನ್ಸ್ ಏಜಂಟ್.
ಬಂಟಪ್ಪ, ದೂಮಪ್ಪ } ದುಗ್ಗಪ್ಪ ಶೆಟ್ಟಿಯ ಕೆಲಸದವರು.
ಮೆನೇಜರ್—ಪಿಯರ್ಸ್ ಲೆಸ್ಲಿ ಕಂಪೆನಿಯ ಮೆನೇಜರ್.
ರಮೇಶರಾವ್—„ „ „ ಹೆಡ್ ಕ್ಲಾರ್ಕ್.

ಸ್ತ್ರೀ—

ಸುಂದರಿ—ಕೀಳ್ಜಾತಿಯ ನವತರುಣಿ
ಲಕ್ಷ್ಮಿ—ಸೋಮನ ಹೆಂಡತಿ.
ಕಿಟ್ಟು—ಸುಂದರಿಯ ತಾಯಿ.
ನಾಗಮ್ಮ—ದುಗ್ಗಪ್ಪ ಶೆಟ್ಟಿಯ ಹೆಂಡತಿ.

ಪ್ರೇಮ ವಿಜಯ

ಅಂಕ ೧

ನೋಟ ೧

(ಶಿವಪುರದ ದುರ್ಗಾದೇವಸ್ಥಾನದ ಸಮೀಪ, ತೋಟದ ರೆಂಜೆ ಮರದಡಿಯಲ್ಲಿ ಮುಂಜಾನೆಯ ನಸುಬೆಳಕಿನಲ್ಲಿ ನವಯುವತಿ ಸುಂದರಿಯು, ಹೊಸತಾಗಿ ಬಿದ್ದ ರೆಂಜೆ ಹೂಗಳನ್ನು ಹೆಕ್ಕಿ, ಮಡಿಲಲ್ಲಿ ತುಂಬುತ್ತಾ ದೇವಸ್ಥಾನದ ಕಡೆಗೆ ಆಗಾಗ ನೋಡುತ್ತಾ ಮಧುರಕಂಠದಿಂದ ಮೆಲ್ಲಗೆ ಹಾಡುತ್ತಿರುವಳು.)

(ಪ್ರೇಮಕೆ ಹೈ ಇಸ ಜಗಮೆ—ಎಂಬಂತೆ)

ಸುಂದರಿ:–ಪ್ರೇಮವೆ ಇಹ ಜೀವನದ–ಮೂಲಾಧಾರ ।
ಪ್ರೇಮವೆ ಸಂಸಾರ-ಜೀವನದೆರಕ ।
ಪ್ರೇಮಿಾ ಜೀವನ–ಸುಮ ಮಕರಂದ ।
ಪ್ರೇಮ ಸುಧಾಂಶು ವಿಕಾಸ–ಹೃದಯೋಲ್ಲಾಸ ।
ಪ್ರೇಮ ವಸಂತ ವಿರಹಿತ–ಜೀವನ ವಿರಸ ।
ಪ್ರೇಮವೆ ದಂಪತಿ ಜೀವನ–ಚಾಲಕ ಸೂತ್ರ ।
ಘೋಷಿಸುತಿದೆ ಜಗವೆಲ್ಲ-ಪ್ರೇಮ ಸಂದೇಶ ॥

ರಾಮ ಭಟ್ಟ:–(ಪೊದೆಯ ಮರೆಯಿಂದ) ಸುಂದರಿ (ಎಂದು ಕರೆಯುವನು. ಈ ಸುಪರಿಚಿತ ಸ್ವರದಿಂದ ಸುಂದರಿಯ ಹೃದಯಪಂಜರದೊಳಗೆ ಸೆರೆಯಾಗಿದ್ದ ಸ್ವಾಭಾವಿಕ ಪ್ರೇಮಪ್ರವಾಹವು ಕಟ್ಟೊಡೆದು, ಉಕ್ಕೇರಿ ಮುಖ ಕಂಗಳ ಮೂಲಕ ಥಕ್ಕನೆ ಹೊರಹರಿಯುವುದು. ಸುಂದರಿಯು ಪುಳಕಿತಳಾಗಿ ಕದಲಲಾರದೆ ನಿಂತಲ್ಲಿಯೇ ನಿಂತುಬಿಡುವಳು. ಆಗ ರಾಮಭಟ್ಟನು ಪೊದೆಯ ಮರೆಯಿಂದ ಹೊರಬಂದು) ಸುಂದರಿ, ಆ ಪ್ರೇಮಗೀತೆಯನ್ನು ನಿನ್ನ ಕೋಕಿಲಕಂಠದಿಂದ ಇನ್ನೊಮ್ಮೆ ಹಾಡುವೆಯಾ?

ಸುಂದರಿ:—(ಥಕ್ಕನೆ ಪ್ರಜ್ಞೆ ಬಂದಂತೆ ಕೂದಲು, ಸೆರಗನ್ನೆಲ್ಲಾ ಕಳ್ಳ ಕೈಚಾಲಕಿನಿಂದ ಸರಿಪಡಿಸಿ) ಓಹೋ ರಾಮಭಟ್ರೇ? ನಿನ್ನೆ ನೀವು ಹೇಳಿದುದೇನು, ಇಂದು ಮಾಡಿದುದೇನು?

ರಾಮ:—ಇಂದು ಬರುವುದಿಲ್ಲೆಂದು ನಿನ್ನೆ ಹೇಳಿದುದೇನೋ ನಿಜ ಸುಂದರಿ. ಆದರೆ........(ಸುಮ್ಮನಾಗುವನು).

ಸು:—ಆದರೆ ಏನು?

ರಾ:—ಹೃದಯ ಕೇಳಬೇಕಲ್ಲವೆ? ಇಡೀ ರಾತ್ರಿ ನಿದ್ದೆಯೇ ಬಾರದು. ಸೆಕೆಯೂ ವಿಪರೀತ. ಎಂದು ಬೆಳಗಾಗುವುದೆಂಬೊಂದೇ ನಿರೀಕ್ಷೆಯಿಂದ ಸುದೀರ್ಘ ರಾತ್ರಿಯನ್ನು ಹೇಗಾದರೂ ದೂಡಿ ಮುಂಬೆಳಕು ಹರಿಯುವಷ್ಟರಲ್ಲೇ ಎದ್ದು ಇತ್ತ ಬಂದೆನು. ನಿನಗೇನು ಇಂದು ಬರಲು ಇಷ್ಟೊಂದು ವಿಳಂಬ? ನಾನು ಎಷ್ಟು ಹೊತ್ತಾಯಿತು ಎದ್ದು ಬಂದು!

ಸು:—ವಿಳಂಬವೇ? ನಾನು ಇಂದು ಎಂದಿಗಿಂತಲೂ ಬೇಗ ಎದ್ದು ಬಂದಿರುವೆನು. ಮನೆಯವರಾರೂ ಎದ್ದಿಲ್ಲ. ನೀವೀವರೆಗೆ ಎಲ್ಲಿದ್ದೀರಿ?

ರಾ:—ಈ ಮರದಡಿಗೆ ಬಂದು ಬಹಳ ಹೊತ್ತು ಕಾದೆನು. ಕೊನೆಗೆ ಕಾದುಕಾದು ಬೇಸತ್ತು ನೀನಿನ್ನು ಬರಲಾರೆಯೆಂದು ನಿರಾಶೆಗೊಂಡು ಮನಬಂದತ್ತ ಅಡ್ಡಾಡಿದೆನು. ಹಿಂದಿರುಗಿ ಬರುವಾಗ ನೀನು ಹೂ ಹೆಕ್ಕುತ್ತಿದ್ದೆ. ನಿನ್ನನ್ನೊಮ್ಮೆ ಕಂಡೊಡನೆಯೇ ನನ್ನ ಹೃದಯವು ಆನಂದೋತ್ಕರ್ಷತೆಯಿಂದ ಪುಟಿಸಹತ್ತಿತು. ಮನಸ್ಸನ್ನೊತ್ತಿ ಹಿಡಿದು ಪೊದೆಯ ಮರೆಯಲ್ಲಿ ನಿಂತು ನಿನ್ನನ್ನು ಪರೀಕ್ಷಿಸುತ್ತಿದ್ದೆನು.

ಸು:—ನನ್ನನ್ನೇನು ಪರೀಕ್ಷಿಸುವುದು?

ರಾ:—ನೀನೇಕೆ ಆ ಮಧುರ ಪ್ರೇಮಗೀತೆ ಹಾಡುತ್ತಾ ದೇವಸ್ಥಾನದ ಕಡೆಗೆ ಆಗಾಗ ನೋಡುತ್ತಿದ್ದುದು ಸುಂದರಿ? ಯಾರು ಬರುವರೆಂದು? ನಾನು ಬರಬಾರದೆಂದು ನಿನ್ನೆಯೇ ಕಟ್ಟಾಜ್ಞೆ ಕೊಟ್ಟಿದ್ದೆಯಲ್ಲ?

ಸು:—(ನಾಚಿ ತಲೆಬಾಗುವಳು)

ರಾ:—ನಿನ್ನ ಹೃದಯವೂ ನನ್ನನ್ನೇ ನಿರೀಕ್ಷಿಸುತ್ತಿದ್ದಿತಲ್ಲವೆ ಸುಂದರಿ? ಹೇಳು, ಸತ್ಯ ಹೇಳು.

ಸು:—ಸ್ತ್ರೀ ಹೃದಯವಲ್ಲವೆ ನನ್ನದು? ಆದರೆ–

ರಾ:—ಮಾತುಮಾತಿಗೆ ತೊಡಕಾಗಿ ಬರುವ ಈ 'ಆದರೆ'ಯನ್ನು ಶಬ್ದ ನಿಘಂಟಿಗಾರು ಸೇರಿಸಿದರೋ! ಸುಂದರಿ, ಇದೋ ನನ್ನ ಪ್ರೇಮ

ಕಾಣಿಕೆಯಾಗಿ ಈ ಸುಗಂಧಿ ಪುಷ್ಪಗಳನ್ನು ಸ್ವೀಕರಿಸು. ಶುಷ್ಕ ರೆಂಜೆ ಹೂವಿನಲ್ಲೇನಿದೆ ರಂಜನೆ?

ಸು:....ಬೇಡ, ಬೇಡ. ನಾವು ಬಡವರು, ರೆಂಜೆ ಹೂವಿನ ರಂಜನೆಯಿಂದಲೇ ತೃಪ್ತಿಗೊಳ್ಳಬೇಕು ನಾವು. ಸುಗಂಧಿಯು ಸೊಗಸೇಕೆ ನಮಗೆ?

ರಾ:—ಪ್ರಕೃತಿಮಾತೆಯ ರಮಣೀಯ ಸುಮಸಂಪತ್ತಿನ ಅನುಭೋಗಕ್ಕೆ ಬಡವ ಧನಿಕರೆಂಬ ಭೇದವಿದೆಯೇ ಸುಂದರಿ? ಇದೋ, ಈ ಗಮಗಮಿಸುವ ಸುಗಂಧಿಗಳನ್ನು ಸ್ವೀಕರಿಸಿ, ಬೇಸರಗೊಂಡಿರುವ ನನ್ನ ಹೃದಯಕ್ಕೆ ನಿನ್ನ ಪ್ರೇಮ ಸುಗಂಧವನ್ನೊಮ್ಮೆ ಲೇಪಿಸು.

ಸು:—ನೀವು ಶ್ರೀಮಂತರು, ನಾನು ಬಡವೆ; ನೀವು ಮೇಲ್ಜಾತಿಯವರು, ನಾನು ಕೀಳ್ಜಾತಿಯವಳು; ನೀವು ಸನ್ಮಾನಿತರು, ನಾನು ದೀನಳು; ನಾನೆಂತು ನಿಮ್ಮನ್ನು ಪ್ರೀತಿಸಲಿ? ನಿಮ್ಮ ಪ್ರೇಮಸುಧೆಯನ್ನೆಂತು ಸೇವಿಸಲಿ?

ರಾ:—ನಿಸರ್ಗ ಪ್ರೇರಣೆಯ ಸರಳ ಪ್ರೇಮಪ್ರವಾಹವನ್ನು ಮಾನವನು, ಜಾತಿಮತ ಸ್ಥಾನಮಾನಾದಿ ಭಿನ್ನಭೇದಗಳ ಕಟ್ಟುಗಳಿಂದ ತಡೆಗಟ್ಟಿ ಅಸ್ವಾಭಾವಿಕವಾಗಿಯೂ ಕೃತಕವಾಗಿಯೂ ಮಾಡಿರುವನು. ಸುಂದರಿ, ನಿನ್ನ ಮೇಲಿನ ಸ್ವಾಭಾವಿಕ ಪ್ರೇಮಸ್ಫೂರ್ತಿಯು ಆ ಕ್ಷುಲ್ಲಕ ಕಟ್ಟುಗಳನ್ನೆಲ್ಲಾ ಮುರಿದೊಗೆಯುವ ಬಂಡಾಯಗಾರನಾಗಿ ಮಾಡಿಟ್ಟಿದೆ ನನ್ನನ್ನು. ಇದೋ ಈ ಸುಗಂಧಿಗಳನ್ನು ಸ್ವೀಕರಿಸು. ನನ್ನ ಹೃದಯಾನಲವನ್ನೊಮ್ಮೆ ತಣಿಸು (ಆವೇಗಭರದಿಂದ ಸುಂದರಿಯ ಬಲಗೈ ಹಿಡಿದು ಅದರ ಮೇಲೆ ಸುಗಂಧಿಗಳನ್ನು ಹಾಕಿಬಿಡುವನು).

ಸು:—(ಪ್ರಣಯಾವೇಗದ ಹೊಯ್ಲಿನಿಂದೆಳೆದೊಯ್ಯಲ್ಪಟ್ಟು ಸುಗಂಧಿಗಳನ್ನು ಹಿಡಿದು ಮೂಸಿ) ಅಹ, ಈ ಸುಗಂಧಿಗಳು ಅದೆಷ್ಟು ಕೋಮಲ! ಎಷ್ಟು ಪರಿಮಳ!! ಆದರೆ-(ನಿಟ್ಟುಸಿರಿಟ್ಟು) ಆದರೆ–

ರಾ:—ಸುಂದರಿ, ಇನ್ನೂ ನೀನು ಈ 'ಆದರೆ'ಗಳನ್ನು ಬಿಡಲಾರೆಯಾ? ಇದೇ ದುರ್ಗಾಮಂದಿರದಲ್ಲಿ, ತಂದೆಯವರೆಷ್ಟು ಬೈದು ಭಂಗಿಸಿದರೂ ಕೇಳದೆ, ನಿನ್ನೊಡನೆ ಒಲಿದುನಲಿದು ಅಂಕುರಿಸಿ ಬೆಳೆದ

ಪ್ರೇಮಲತೆ ನನ್ನದು. ಚಾಕರಿಯವಳ ಮಗಳೆಂದು, ನೀಚ ಜಾತಿಯ ವಳೆಂದು ಜನರೆಷ್ಟು ಹೀಯಾಳಿಸಿ ದೂಷಿಸಿದರೂ ಮತ್ತಷ್ಟು ಬಲ ವಾಗಿಯೇ ಬೆಳೆದಿರುವದದು. ಸುಂದರಿ, ನನ್ನ ಹೃದಯವು ನಿನ್ನ ನಿರ್ಮಲ ಪ್ರೇಮಕ್ಕೆ, ಸರಳ ಮನಸ್ಸಿಗೆ, ಸ್ಫುರದ್ರೂಪಕ್ಕೆ ಚಿಕ್ಕಂದಿ ನಿಂದಲೇ ಎರವಾಗಿ ಹೋಗಿರುವುದು. ನೀನು ಕೂಡ, ನಿನ್ನ ಮಾವ, ಅಣ್ಣಂದಿರು ಎಷ್ಟು ಬೈದು ಹೊಡೆದರೂ, ಕಳ್ಳಾಟಿಕೆಯಿಂದಾದರೂ ದೇವಸ್ಥಾನದ ಅಂಗಣದೊಂದು ಮೂಲೆಗೆ ಬಂದು ನನ್ನೊಂದಿಗೆ ನಾನಾ ಆಟವಾಡಿ ಆನಂದಿಸುತ್ತಿದ್ದೆ. ಆ ನಿರ್ಮಲ ಬಾಲಸ್ನೇಹವನ್ನು, ಸ್ವಾಭಾ ವಿಕ ತರುಣ ಪ್ರೇಮವನ್ನು, ದಾಂಪತ್ಯಜೀವನದಿಂದ ಸಾರ್ಥಕಗೊಳಿಸ ಬಾರದೇಕೆ ಸುಂದರಿ?

ಸು:—(ಕಂಬನಿದುಂಬಿ ಬಂದು ಮಾತಾಡಲಾರದೆ ರಾಮಭಟ್ಟ ನನ್ನೇ ನೋಡುತ್ತಾ ನಿಲ್ಲುವಳು).

ರಾ:—ನಿನ್ನ ಸರಳ ಹೃದಯದ ಪ್ರೇಮರಸವು ಕಣ್ಣಾಲಿಗಳಲ್ಲಿ ತುಂಬಿ ಹರಿಯುತ್ತಿರುವುದು ಸುಂದರಿ. ಕಣ್ಣೀರಿಡಬೇಡ; ನಾನ ದನ್ನು ತಾಳಲಾರೆ. ನನ್ನ ಮಾತಿನ ಮೇಲೆ ಭರವಸೆಯಿಡು. ಎಂದೆಂದಿಗೂ ನಿನ್ನನ್ನು ಬಿಟ್ಟು ಹಾಕಲಾರೆ.

ಸು:—(ಸೆರಗಿಂದ ಕಣ್ಣೀರೊರಸಿ) ನೀವು ವಂಚಿಸುವಿರೆಂಬ ಬೆದ ರಿಕೆಯಲ್ಲ ನನಗೆ. ನನ್ನ ಹೆಣ್ಣು ಹೃದಯವು ನಿಮ್ಮಲ್ಲೆಷ್ಟು ಅನುರಕ್ತ ವಿರುವುದೆಂದು ನಿಮ್ಮಂತೆ ಮಾತುಗಳಿಂದ ಬಣ್ಣಿಸಲು ನನ್ನಿಂದ ಸಾಧ್ಯ ವಿಲ್ಲ.

ರಾ:—ಬಲ್ಲೆ, ಬಲ್ಲೆ; ಸ್ತ್ರೀಯ ಪ್ರೇಮದ ಅಂತರಾಳವನ್ನು ಚೆನ್ನಾಗಿ ಬಲ್ಲೆ ಸುಂದರಿ. ಸ್ತ್ರೀಯ ಮೌನ ಅಶ್ರುಬಿಂದುವೊಂದರಲ್ಲಿ ಗಂಡಸಿನ ಶಬ್ದಕೋಶವೇ ಅರಿಯದ ಪ್ರಣಯ ಸಂದೇಶವು ಅಡಕ ವಾಗಿರುವುದೆಂಬುದನ್ನು ನಾನರಿಯೆನೆ?

ಸು:—(ಯೋಚಿಸಿ) ಭಟ್ರೇ, ಕ್ಷಮಿಸಿರಿ. ಚಿಕ್ಕಂದಿನಲ್ಲಿ ಅಕ್ಕರೆ ಯಿಂದ ಆಡುತ್ತಿದ್ದ ನಮ್ಮಿಬ್ಬರೊಳಗೆ ಸ್ವಾಭಾವಿಕವಾಗಿ ಪ್ರೇಮವು ಬೆಳೆದುಬಂದಿರುವುದೇನೋ ನಿಜ. ನನ್ನ ಹೃದಯವು ನಿಮ್ಮ ಹೊರತು

ಅನ್ಯ ಪ್ರೇಮವನ್ನೆ ಅರಿತಿಲ್ಲ. ನನ್ನಿಂದಾಗಿ ನೀವು ಪಟ್ಟ ಕಷ್ಟವೆಷ್ಟು! ಅವಮಾನವೆಷ್ಟು! ಜನ್ಮಜನ್ಮಕ್ಕೂ ನಾನು ನಿಮಗೆ ಋಣಿ. ದೇವತಾ ಸ್ವರೂಪಿಣಿಯಂತಿದ್ದ ನಿಮ್ಮ ಮಾತೆಯ ಸದ್ಗುಣಗಳನ್ನು ಇಂದೂ ತಾಯಿಯು ಹೇಳಿಹೇಳಿ ಕಣ್ಣೀರಿಡುವಳು. ಅವರು ತನ್ನ ಅಂತ್ಯಕಾಲದಲ್ಲಿಯೂ, "ಕಿಟ್ಟು, ನೀನು ರಾತ್ರಿಹಗಲು ನಿನ್ನ ಮಗಳಂತೆ ನನ್ನ ಸೇವೆ ಮಾಡಿದೆ. ನನ್ನ ಮಗನನ್ನು ಅತ್ಯಂತ ಪ್ರಿತಿಯಿಂದ ಸಲಹಿದೆ. ನಿನ್ನೀ ಪರೋಪಕಾರಕ್ಕೆ ನನ್ನಿಂದೇನೂ ಪ್ರತಿಫಲವೀಯಲು ಸಾಧ್ಯವಿಲ್ಲ. ನೀನೂ, ನಿನ್ನ ಮುದ್ದು ಮಗಳೂ ಚಿರಕಾಲ ಸುಖ ಸಂತೋಷದಿಂದ ಬಾಳುವಂತಾಗಲೆಂದಿಷ್ಟೇ ನನ್ನ ಅಂತ್ಯಕಾಲದ ಆಶೆ. ಇನ್ನೂ ಚಿಕ್ಕವನಾದ ನನ್ನೀ ಮುದ್ದು ಕುವರನನ್ನು ಮುಂದಕ್ಕೂ ನಿನ್ನ ಮಗುವೆಂದೇ ಪಾಲಿಸುವ ಭಾರ ನಿನ್ನದು ಕಿಟ್ಟು" ಎಂದು ನಿಮ್ಮನ್ನು ತಾಯಿಗೊಪ್ಪಿಸಿ ಕೊಟ್ಟು, ನನ್ನ ತಲೆಯ ಮೇಲೆ ಕೈಯಿಟ್ಟು ಹರಸಿದ್ದರಂತೆ. ಸರ್ವ ವಿಧದಲ್ಲಿಯೂ ನೀವು ನಿಮ್ಮ ತಾಯಿಯನ್ನೇ ಹೋಲುವಿರಂತೆ. ನಿಮ್ಮನ್ನು ಕಂಡಾಕ್ಷಣ ತಾಯಿಗೆ ನಿಮ್ಮಮ್ಮನ ನೆನಪಾಗಿ ಕಣ್ಣೀರು ತುಂಬಿಬರುವುದಂತೆ.

ರಾ:—(ಕಂಬನಿ ತುಂಬಿಬರಲು ತುಸುಹೊತ್ತು ಮೌನವಾಗಿದ್ದು ಆ ಮೇಲೆ) ಹೌದು ಸುಂದರಿ. ನಿನ್ನ ತಾಯಿಯು ನನ್ನ ಮಾತೆಗೆ ಮತ್ತು ನನಗೆ ಮಾಡಿದ ಉಪಕಾರವನ್ನು ನಾನೆಂದಿಗೂ ಮರೆಯಲಾರೆ. ನನ್ನ ತಾಯಿಯ ಪ್ರತಿಮೂರ್ತಿ ನಾನು. ನಿನ್ನ ತಾಯಿಯ ಪ್ರತಿರೂಪಿ ನೀನು. ಪ್ರೇಮದೆರಕದಿಂದ ನಮ್ಮ ಹೃದಯಗಳನ್ನೊಂದುಗೂಡಿಸಿ ನಮ್ಮ ತಾಯಂದಿರೊಳಗಣ ಅಚಲಪ್ರೇಮಕ್ಕೆ ದಿವ್ಯ ಸ್ಮಾರಕವನ್ನೇರ್ಪಡಿಸಬಾರದೇಕೆ ಸುಂದರಿ?

(ಸುಂದರಿಯ ಅಣ್ಣ ಸೋಮಪ್ಪನ ಹೆಂಡತಿ ಲಕ್ಷ್ಮಿಯು ಪ್ರವೇಶಿಸಿ ಸುಂದರಿ ಮತ್ತು ರಾಮಭಟ್ಟರಿಗಿಂತ ತುಸು ದೂರದಲ್ಲಿ ಸ್ವಲ್ಪಹೊತ್ತು ನಿಂತು ಆ ಮೇಲೆ ಸಿಟ್ಟಿನ ನಟನೆಯಿಂದ ಮುನ್ನಡೆದು)

ಲಕ್ಷ್ಮಿ:—ಏನಿದು ಮಾತುಕತೆ ನಿಮ್ಮದು ಸುಂದರಿ ಈ ಬಟ್ಟಬಯಲಲ್ಲಿ? ಯಾರಾದರೂ ನೋಡಿದರೆ ಏನು ಹೇಳಿಯಾರು?

ಸು:—(ಥಕ್ಕನೆ ಸುಖಸ್ವಪ್ನದಿಂದೆಚ್ಚತ್ತವಳಂತಾಗಿ ಅಪ್ರತಿಭಳಾಗಿ ಹೋಗುವಳು).

ರಾ:—(ಪ್ರಸಂಗಾವಧಾನತೆಯಿಂದ) ನಾವು ಚಿಕ್ಕಂದಿನ ಗೆಳೆಯರು. ಸುಂದರಿಯು ಈಗ ಟ್ರೈನಿಂಗ್ ಕಲಿತಾಯಿತು. ಇಲ್ಲಿಯ ಹುಡುಗಿಯರ ಬೋರ್ಡು ಶಾಲೆಯಲ್ಲಿ ಕೆಲಸ ಸಿಗುವಂತೆ ಮಾಡಬಹುದೋ ಎಂದು ನನ್ನೊಡನೆ ಕೇಳುತ್ತಿದ್ದಳು.

ಲಕ್ಷ್ಮಿ:—ಸಾಕು ಸಾಕು, ಸುಳ್ಳು ಹೇಳಬೇಡಿ! (ಸುಂದರಿಯ ಕೈಯಿಂದ ಸುಗಂಧಿ ಪುಷ್ಪಗಳನ್ನು ಕಿತ್ತುಕೊಂಡು) ರೆಂಜೆ ಹೂ ಹೆಕ್ಕಬಂದ ಇವಳ ಕೈಯಲ್ಲಿ ಈ ಸುಗಂಧಿ ಹೂವೆಲ್ಲಿಂದ ಬಂತು? ರೆಂಜೆ ಮರದಿಂದ ಸುಗಂಧಿ ಉದುರುವುದೇ? (ಸುಂದರಿಯು ಮತ್ತಷ್ಟು ತಳಮಳಗೊಂಡು ಕೈಯಲ್ಲಿದ್ದ ಸುಗಂಧಿಗಳನ್ನೆಲ್ಲಾ ಕೆಳಗೆ ಹಾಕಿಬಿಡುವಳು).

ರಾ:—(ನಸುನಕ್ಕು) ರೆಂಜೆ ಮರದಿಂದ ಸುಗಂಧಿ ಬಿದ್ದುದಲ್ಲ. ಸುಗಂಧಿಯೂ ರೆಂಜೆಯೂ ಒಟ್ಟಾದುದು. ನಾನು ಮುಂಜಾನೆ ತಿರುಗಾಡಹೋದವನು ಮೇಲ್ಮನೆ ದಾಸಭಟ್ಟರ ಮನೆಗೆಹೋದೆ. ಅಲ್ಲಿ ಅವರ ಹೂದೋಟದಿಂದ ಕೆಲವು ಸುಗಂಧಿಗಳನ್ನು ಕೊಯ್ದು ತಂದೆ. ಮನೆಗೆ ಹಿಂದಿರುಗಿ ಬರುವಾಗ ಇಲ್ಲಿ ಸುಂದರಿಯು ರೆಂಜೆ ಹೂ ಹೆಕ್ಕುತ್ತಿದ್ದಳು ಅವಳೊಡನೆ ಮಾತಾಡಿ ಬಹಳ ದಿನವಾಗಿತ್ತು. ಆದುದರಿಂದ ಇಲ್ಲಿ ಸ್ವಲ್ಪ ನಿಂತು ಸುಂದರಿಯ ಕ್ಷೇಮಸಮಾಚಾರ ಕೇಳಿ, ಹಳೆಯ ಪ್ರೀತಿಯನ್ನು ನವೀಕರಿಸಲು ಪ್ರೀತಿಪೂರ್ವಕವಾಗಿ ಕೆಲವು ಸುಗಂಧಿಗಳನ್ನು ಅವಳಿಗೆ ಕೊಟ್ಟೆನು. ಅದರಲ್ಲೇನು? (ಸುಂದರಿಯು ಮುಗುಳ್ನಗೆ ಬೀರಿ ನೆಲಕ್ಕೆ ಬಿದ್ದ ಸುಗಂಧಿಗಳನ್ನು ಹೆಕ್ಕಿ ಅವಸರದಿಂದ ಮುಡಿಲೊಳಗೆ ತುರುಕಿಕೊಳ್ಳುವಳು ಆಗ ರೆಂಜೆ ಹೂಗಳೆಲ್ಲಾ ಮುಡಿಲಿಂದ ಹೊರಕ್ಕುದುರುವುವು.)

ಲಕ್ಷ್ಮಿ:—(ಸುಂದರಿಯ ಮುಡಿಲಿಂದ ಬೀಳುವ ರೆಂಜೆ ಹೂಗಳಿಗೆ ಕೈಹಿಡಿದು) ಸುಗಂಧಿ ದೊರೆತಿರುವಾಗ ರೆಂಜೆ ಹೂ ಬೇಕಾಗಿಲ್ಲ ಅವಳಿಗೀಗ. ನೋಡಿ ಚೆಲ್ಲುತ್ತಿದ್ದಾಳೆ ಅವನ್ನೆಲ್ಲಾ! ಬಿಸಾಡಬೇಡ ಸುಂದರಿ ನನಗೆ ಬೇಕವು ನಿನಗೆ ಬೇಡವಾದರೆ.

ರಾ:—ಸುಗಂಧಿಯಿದಿರಲ್ಲಿ ರೆಂಜೆ ಹೂವೆಲ್ಲಿ ಮತ್ತೆ? ಸುಂದರಿ, ನಾನು ಹೋಗುವೆನು. ಇಲ್ಲಿಯ ಹುಡುಗಿಯರ ಶಾಲೆಯಲ್ಲೇ ಕೆಲಸ ಸಿಗುವಂತೆ ಪ್ರಯತ್ನಿಸುವೆನು. ಇವಳಾರು?

ಸು:—ಇವಳು ನನ್ನ ಪ್ರಿಯ ನಾದಿನಿ ಲಕ್ಷ್ಮಿ. ಬಹಳ ಗುಣವಂತೆ, ಗೃಹಲಕ್ಷ್ಮಿ.

ಲಕ್ಷ್ಮಿ:—ಸಾಕು, ಸಾಕು ನನ್ನ ಹೊಗಳಿಕೆ. ಇನ್ನು ನೀನೆಂದು ಗೃಹಲಕ್ಷ್ಮಿಯಾಗುವೆಯೋ ನೋಡಬೇಕು. ತಲೆ ಹಣ್ಣಾಗುವ ವರೆಗೆ ಕಲಿಯುತ್ತಲೇ ಇರುವುದೇ, ಮದುವೆಯಾಗಬೇಕೇ?

ಸು:—(ಕೂಡಲೆ ಮುಖವು ಚಿಂತೆಯಿಂದಾವರಿತವಾಗಿ ಸುಮ್ಮನಾಗುವಳು.)

ರಾ:—ಏನು ಅವಸರ? ಅವಳಿಗೀಗ ಅಷ್ಟೇನು ಪ್ರಾಯವಾಗಿರುವುದೇ? ಈಗೀಗ ಹುಡುಗಿಯರಿಗೆ ಮದುವೆಯಾಗುವುದೇ ಪ್ರಾಯಹೋಗಿ ನಮ್ಮಲ್ಲಿ ಕೂಡ ಈಗ ಬೇಗ ಮದುವೆಯಾಗುವುದು ಕಡಿಮೆಯಾಗಿದೆ.

ಸು:—ನಾನು ಮದುವೆಯೇ ಆಗುವುದಿಲ್ಲ.

ಲಕ್ಷ್ಮಿ:—ಮತ್ತೇನು ಮಾದ್ರಿಯಾಗುವೆಯಾ?

ಸು:—ಹೌದು. ಮಾದ್ರಿಯಾಗುವವರೂ ನನ್ನಂತಹ ಸ್ತ್ರೀಯರೇ ಅಲ್ಲವೇ? ಸ್ತ್ರೀಯಾದವಳು ಮದುವೆಯಾಗಲೇಬೇಕೆಂದಿಲ್ಲವಲ್ಲ? ಮಾದ್ರಿಯಾಗಿಯೂ ಇರಬಹುದಲ್ಲ?

ಲಕ್ಷ್ಮಿ:—ಸಾಕು, ಸಾಕು! ಮಾತುಬಲ್ಲವಳೆಂದು ವಿಶೇಷ ಖರ್ಚು ಮಾಡಬೇಡ. ಮುಂಜಾನೆಯೆದ್ದು ರೆಂಜೆ ಹೂ ಹೆಕ್ಕಹೋದವಳು ಇಷ್ಟುಹೊತ್ತು ಏನು ಮಾಡುತ್ತಿರುವುದೆಂದು ನಾನು ಹುಡುಕಿಬಂದುದು. ನೀನು ನಿನ್ನ ಚಿಕ್ಕಂದಿನ ಗೆಳೆಯರೊಡನೆ ಮಾತಾಡುತ್ತಿರುವೆಯೆಂದಿದ್ದರೆ ನಾನಿಲ್ಲಿ ಬರುತ್ತಿದ್ದೇ ಇಲ್ಲ. (ರಾಮಭಟ್ಟನ ಕಡೆಗೊಮ್ಮೆ ದೃಷ್ಟಿಹರಿಸಿ ಮುಗುಳ್ನಗೆ ಬೀರುವಳು.)

ಸು:—ಅವರೂ ನಾನೂ ಚಿಕ್ಕಂದಿನಿಂದ ಒಟ್ಟಿಗೆ ಕಲೆತು ನಲಿದು ಬೆಳೆದವರು. ಅವರ ತಾಯಿಯು ಅಮ್ಮನ ಪ್ರಾಣವೇ ಆಗಿದ್ದರು.

ಲಕ್ಷ್ಮಿ:—ಆ ಸಂಗತಿಯನ್ನು ಅತ್ತೆ ನನ್ನೊಡನೆಯೂ ಹೇಳಿದ್ದರು.

ಸುಂದರಿ, ನಿನಗಿನ್ನು ಕೆಲಸದ ಗೊಡವೆ ಬೇಡ. ಇಷ್ಟರವರೆಗೆ ಕಲಿತುದೇ ಸಾಕು. ಇನ್ನು ಮದುವೆಯಾಗಿ ಮಕ್ಕಳನ್ನು ಪಡೆದು ಸುಖವಾಗಿ ಸಂಸಾರ ನಡಿಸು,

ಸು:—ಮದುವೆ, ಮದುವೆಯೆಂಬ ಪಲ್ಲವಿಯನ್ನೇ ಸದಾ ಹಾಡುತ್ತಿರಲು ಒಂದಿಷ್ಟು ಬೇಸರವಾಗುವುದಿಲ್ಲವೇ ಲಕ್ಷ್ಮಿ ನಿನಗೆ?

ಲಕ್ಷ್ಮಿ:—ಮದುವೆಯಾಗಿ ಮಕ್ಕಳನ್ನು ಪಡೆದು ಸುಖಿಸುವುದೇ ಸ್ತ್ರೀಜೀವನದ ಸಾರ್ಥಕತೆ. ಅಂದಮೇಲೆ ಸ್ತ್ರೀಯಾದವಳಿಗದರಲ್ಲಿ ಬೇಸರ ಬರುವುದಾದರೂ ಹೇಗೆ ಸುಂದರಿ?

ರಾ:—ನಿನ್ನ ನಾದಿನಿಯು ಬಲು ಚದುರೆ ಸುಂದರಿ! ಇವಳೇನಾದರೂ ಕಲಿತಿರುವಳೇ?

ಸು:—ಕಲಿಯದಿದ್ದರೂ ಕಲಿತವರಿಗಿಂತಲೂ ಜಾಣೆಯಿರುವಳು. ಕಲಿತಿದ್ದರೆ ಎಷ್ಟು ಬುದ್ಧಿವಂತೆಯಾಗುತ್ತಿದ್ದಳೋ?

ಲಕ್ಷ್ಮಿ:—ಸಾಕು ಸಾಕು ತಮಾಷೆ. ಹೋಗುವ ನಡೆ, ಇಗೋ ನಿನ್ನ ಸುಗಂಧಿ. (ತಾನು ಕಸಕೊಂಡಿದ್ದ ಸುಗಂಧಿ ಹೂಗಳನ್ನು ಸುಂದರಿಗೆ ಕೊಡುವಳು.)

ಸು:—ಭಟ್ರೇ, ನಾವೀಗ ಹೋಗುವೆವು. ಇಲ್ಲಿಯೇ ಕೆಲಸ ಸಿಗುವ ಸಂಭವವಿದ್ದರೆ ನನಗೆ ದಯಮಾಡಿ ತಿಳಿಸಿರಿ. (ರಾಮಭಟ್ಟನನ್ನು ನೋಡಿ ನಸುನಗುವಳು.)

ರಾ:—ಆಯ್ತು ತಿಳಿಸುವೆನು. ಲಕ್ಷ್ಮಿ, ಹೋಗುವೆನು. (ಒಮ್ಮೆಯೇ ಗಾಢಚಿಂತಾಮಗ್ನನಾದಂತಾಗಿ ಹೆಜ್ಜೆಗಳನ್ನು ಅಳೆದಿಡುವವನಂತೆ ನಿಧಾನವಾಗಿ ಹೋಗುವನು. ಸುಂದರಿ ಲಕ್ಷ್ಮಿಯರು ತುಸು ಹೊತ್ತು ಅವನನ್ನೇ ನೋಡಿ ನಿಂತು ಅನಂತರ ಮನೆಯ ಕಡೆಗೆ ಹೋಗುತ್ತಾ ದಾರಿಯಲ್ಲಿ)

ಲಕ್ಷ್ಮಿ:—ಭಟ್ರು ಬಹಳ ಒಳ್ಳೆಯವರೆಂಬುದಕ್ಕೆ ಸಂದೇಹವೇ ಇಲ್ಲ ಸುಂದರಿ, ರೂಪದಲ್ಲಿಯೂ ಸುಂದರರು. (ಸುಂದರಿಯ ಕಂಗಳಲ್ಲಿ ನೀರು ತುಂಬಿದುದನ್ನು ಕಂಡು ಆಶ್ಚರ್ಯಗೊಂಡು) ಸುಂದರಿ ಅದೇಕೆ ಕಣ್ಣೀರಿಡುವೆ? ಏನಾಯಿತು?

ಸು:—(ಥಕ್ಕನೆ ಇನ್ನೊಂದೆಡೆ ನೋಡಿ ಕಣ್ಣೀರನ್ನು ತಡೆಗಟ್ಟಿ ಲಕ್ಷ್ಮಿಯ ಕಡೆಗೆ ತಿರುಗಿ) ಎಲ್ಲಿದೆ ಕಣ್ಣೀರು? ಸುಮ್ಮನೆ ಏನೆಲ್ಲಾ ಮಾತಾಡುವೆ ಲಕ್ಷ್ಮಿ ನೀನು? ನಡೆ ಹೋಗುವ, ಬಹಳ ಹೊತ್ತಾಯಿತು.

ಲಕ್ಷ್ಮಿ:—ಹೊತ್ತಾಯಿತೆಂದು ಈಗ ತಿಳಿಯಿತೇ ನಿನಗೆ? ಸುಂದರಿ, ನೀನಿನ್ನು ಬೇಗನೆ ಮದುವೆಯಾಗಬೇಕು. ಪ್ರಾಯ ಬಂದಮೇಲೆ...

ಸು:—ಸಾಕು ಸಾಕು ಲಕ್ಷ್ಮಿ; ನೀನಿನ್ನು ನನ್ನ ಮದುವೆಯ ಪ್ರಸ್ತಾಪವೆತ್ತಿದರೆ ನನ್ನಾಣೆಯಿದೆ! ನಾನು ಮದುವೆಯಾಗಲು ಎಷ್ಟಕ್ಕೂ ಸಾಧ್ಯವಿಲ್ಲ.

ಲಕ್ಷ್ಮಿ:—(ಆಶ್ಚರ್ಯಚಕಿತಳಾಗಿ ಸುಂದರಿಯ ಚಿಂತಾವರಿತ ಮುಖವನ್ನೊಮ್ಮೆ ಎವೆಯಿಕ್ಕದೆ ನೋಡಿ) ಸುಂದರಿ ಅದೇಕೆ ಹಾಗೆನ್ನುವೆ? ನಿನ್ನ ವರ್ತನೆಯೇ ವಿಚಿತ್ರವಾಗಿ ತೋರುವುದು. ಅತ್ಯಂತ ಸುಂದರಿಯೂ ವಿದ್ಯಾಗುಣಸಂಪನ್ನೆಯೂ ಆದ ನೀನು ಮದುವೆಯಾಗಲಾರೆನೆಂದು ಹಠಹಿಡಿಯಲು ಕಾರಣವೇನು? ನಿನಗಾವ ವ್ಯಥೆಯಿದೆ ಸುಂದರಿ? ನಿನ್ನಂತರ್ಯವನ್ನು ಮನಬಿಚ್ಚಿ ನನ್ನೊಡನೆ ತಿಳಿಸಬಾರದೇ?

ಸು:—ಏನನ್ನು ಮನಬಿಚ್ಚಿ ತಿಳಿಸಲಿ ಲಕ್ಷ್ಮಿ! ನಾನು ಮದುವೆಯಾಗಲು ಸಾಧ್ಯವಿಲ್ಲೆಂದಿಷ್ಟೇ ಹೇಳಬಲ್ಲೆ. ಅದಕ್ಕಿಂತ ಹೆಚ್ಚು ಹೇಳಲಾರೆ, ಕ್ಷಮಿಸು. (ಎಷ್ಟು ತಡೆದರೂ ಉಕ್ಕಿಬರುವ ಕಣ್ಣೀರನ್ನು ಸೆರಗಿಂದೊರಸುವಳು.)

ಲಕ್ಷ್ಮಿ:—(ಬಹಳ ಸಂತಾಪಗೊಂಡು ಪ್ರೀತಿಯಿಂದ ಸುಂದರಿಯ ಬೆನ್ನು ತಡವಿ) ಬೇಡ, ಬೇಡ, ಹೇಳುವುದು ಬೇಡ ಸುಂದರಿ; ನಾನೂ ಕೇಳುವುದಿಲ್ಲ. ನಿನ್ನಾಣೆ ಉಂಟು ನಾನಿನ್ನು ನಿನ್ನ ಮದುವೆಯ ಪ್ರಸ್ತಾಪವೆತ್ತಿದರೆ! ಕಣ್ಣೀರಿಡಬೇಡ ಹೋಗುವ ಮನೆಗೆ ಬೇಗ. (ಕೈ ಹಿಡಿದು ಕರದೊಯ್ಯುವಳು.)

ನೋಟ ೨

(ದೇವಸ್ಥಾನದ ಎದುರುಭಾಗದ ಅಂಗಳ. ಕಿಟ್ಟು ಮುಂಜಾನೆ ಎಂದಿನಂತೆ ಅಂಗಳ ಗುಡಿಸುತ್ತಿರುವಳು. ಗರ್ಭಗುಡಿಗೆ ಹೋಗುವ ವೆಂಕಟ್ರ

ಮಣ ಭಟ್ಟನು ಅವಳನ್ನು ಕಂಡು ಒಂದೇ ಸವನೆ ಸಿಟ್ಟೇರಿ ಭುಜ ಹಾರಿಸುತ್ತಾ ಅವಳ ಬಳಿಗೆ ಹೋಗಿ ಗದರಿಸುವನು.)

ವೆ:—ಕಿಟ್ಟು, ನೀನಿನ್ನು ದೇವಸ್ಥಾನಕ್ಕೆ ಕಾಲಿಡಬಾರದು. ನಡೆ ಹೊರಗೆ. ನಿನ್ನೆ ಹೇಳಿದ್ದೇನು ನಾನು ನಿನ್ನೊಡನೆ?

(ಕಿಟ್ಟುವು ದೀನ ದೃಷ್ಟಿಯಿಂದೊಮ್ಮೆ ಭಟ್ಟನನ್ನು ನೋಡಿ ಆ ಮೇಲೆ ಯಥಾ ಪ್ರಕಾರ ಗುಡಿಸುವುದರಲ್ಲಿ ನಿರತಳಾಗುವಳು.)

ವೆ:—ಕಿಟ್ಟು, ಕಿವಿ ಕಿವುಡಾಗಿದೆಯೇ ನಿನಗೆ? ನಾನು ಹೇಳುವುದು ಕೇಳುವುದಿಲ್ಲವೇ? ಸಲಿಗೆ ಕೊಟ್ಟುದೇ ಹೆಚ್ಚಾಯಿತು ನಿನಗೆ: ಒಳ್ಳೇ ಮಾತಿನಿಂದ ತೊಲಗುವಿಯೋ, ಹೊರ ದಬ್ಬಬೇಕೋ?

(ಕಿಟ್ಟುವು ಮತ್ತೂ ಅಂಗಳವನ್ನು ಗುಡಿಸುತ್ತಾ ಹೋಗುವಳು ಆಗ ವೆಂಕಟ್ರಮಣ ಭಟ್ಟನು ಕ್ರೋಧಾಂಧನಾಗಿ ಕಿಟ್ಟುವಿನ ಕೈಯಲ್ಲಿದ್ದ ಹಿಡಿಸೂಡಿಯನ್ನು ಎಳಕೊಂಡು ದೂಡಿ ಬಿಡುವನು. ಕಿಟ್ಟುವು ದೊಪ್ಪನೆ ನೆಲಕ್ಕೆ ಬಿದ್ದು ಅಂಗಳದ ಕೊಸಕಲು ಕಲ್ಲೊಂದು ಅವಳ ಹಣೆಗೆ ಜಜ್ಜಿಹೋಗಿ ಬೋಧ ತಪ್ಪಿ ಬೀಳುವಳು. ಹಣೆಗೆ ತಾಗಿ ಗಾಯವಾಗಿ ರಕ್ತ ಸುರಿಯುವುದು. ವೆಂಕಟ್ರಮಣ ಭಟ್ಟನು, ಮುದುಕಿಯ ಪ್ರಾಣಕ್ಕೇನಾದರೂ ಅಪಾಯವಾಯಿತೋ ಎಂದು ದಿಗಿಲುಗೊಂಡು ಸುತ್ತುಮುತ್ತ ನೋಡಿ, ಯಾರೂ ಇಲ್ಲದುದನ್ನು ಕಂಡು ಫಕ್ಕನೆ ದೇವಸ್ಥಾನದೊಳಗೆ ನುಸುಳುವನು. ಮುಂಜಾನೆಯೆದ್ದು ತಿರುಗಾಟಕ್ಕಾಗಿ ದೇವಸ್ಥಾನದ ಅಂಗಣ ದಾಟಿ ಹೋಗುವ ರಾಮ ಭಟ್ಟನು, ಅಂಗಣದಲ್ಲಿ ಕಿಟ್ಟುವು ಬಿದ್ದಿರುವುದನ್ನು ಕಂಡು ಗಾಬರಿಗೊಂಡು ತಕ್ಷಣ ಅವಳ ಬಳಿಗೋಡಿ ಪರೀಕ್ಷಿಸುವನು. ಶ್ವಾಸೋಚ್ಛ್ವಾಸವು ಸರಿಯಾಗಿರುವುದನ್ನು ಕಂಡು ಸ್ವಲ್ಪ ಸಮಾಧಾನ ತಾಳಿ ಕೂಡಲೆ ದೇವಸ್ಥಾನದ ಕೆರೆಗೋಡಿ ತನ್ನ ಕರವಸ್ತ್ರವನ್ನು ಒದ್ದೆ ಮಾಡಿ ತಂದು ಕಿಟ್ಟುವಿನ ಹಣೆ ಮತ್ತು ಮುಖ ಒರಸಿ ಉತ್ತರೀಯದಿಂದ ಗಾಳಿ ಹಾಕುವನು. ಸ್ವಲ್ಪ ಸಮಯದ ಮೇಲೆ ಕಿಟ್ಟುವಿಗೆ ಬೋಧ ಬಂದು ಎದ್ದು ಕೂತುಕೊಳ್ಳುವಳು. ರಾಮಭಟ್ಟನು ಮತ್ತೂ ಅವಳಿಗೆ ಗಾಳಿ ಹಾಕಿ ಉಪಚರಿಸುವನು.)

ಕಿಟ್ಟು:—(ಧರಧರನೆ ಕಣ್ಣೀರಿಳಿದು ಬರಲು ಸೆರಗಿನಿಂದ ಒರಸಿ) ಎಲ್ಲಿ, ನನ್ನ ಹಿಡಿಸೂಡಿ ಎಲ್ಲಿ ಮಗು?

ರಾ:—ಅಜ್ಜಿ, ಏನಾಯಿತು ನಿನಗೆ? ಹೀಗೆ ಬೋಧ ತಪ್ಪಿ ಬೀಳಲು ಕಾರಣವೇನು? ಹಣೆಯಲ್ಲಿ ಗಾಯವಾದುದು ಹೇಗೆ?

ಕಿ:—(ರಾಮಭಟ್ಟನನ್ನೊಮ್ಮೆ ಕಣ್ಣು ತುಂಬಾ ನೋಡಿ ಆ ಮೇಲೆ ತಲೆಬಾಗಿ ಕಣ್ಣೀರಿಡುವಳು.)

ರಾ:—ಅಜ್ಜಿ, ಹೀಗೇಕೆ ಕಣ್ಣೀರಿಡುವೆ? ಏನಾಯಿತು ಹೇಳು? ನನ್ನೊಡನೆ ಹೇಳಲು ನಿನಗೆ ಭಯವೇನು?

ಕಿ:—ಏನಿಲ್ಲ ಮಗು, ಏನಿಲ್ಲ. ನಿಮ್ಮಮ್ಮನಿರುತ್ತಿದ್ದರೆ ನನಗೀ ಗತಿಯಾಗುತ್ತಿತ್ತೇ? ಅಯ್ಯೋ ದೇವರೆ! (ತಲೆ ಬಡಕೊಂಡು ಬಾಯ್ಬಿಟ್ಟು ಅಳುವಳು.)

ರಾ:—(ಕೈ ಹಿಡಿದು) ನಾನಿರುವನಕ ನನ್ನಮ್ಮನಿದ್ದಂತೆಂದು ನೆನಸಿ ಏನಾಯಿತೆಂದು ಹೇಳು ಅಜ್ಜಿ.

ಕಿ—:ಏನೆಂದು ಹೇಳಲಿ ಮಗು? ನನಗೇನೂ ಆಗಿಲ್ಲ. ಹೋಗಿ, ಮಗು ಹೋಗಿ. ನಿಮ್ಮ ಮೇಲೂ ಸಿಟ್ಟುಗೊಂಡಾರು ಭಟ್ರು ಮತ್ತೆ!

ರಾ:—ಅಜ್ಜಿ, ಅವರು ಏನು ಬೇಕಾದರೂ ಮಾಡಲಿ. ನೀನು ಬೋಧ ತಪ್ಪಿ ಬೀಳಲು ಕಾರಣವೇನೆಂದು ಹೇಳದೆ ನಾನಿಲ್ಲಿಂದ ಕದಲಲಾರೆನು.

ಕಿ:—ಇತ್ತಲಾಗಿ ನನಗೆ ಪಿತ್ತದ ಬಾಧೆ ಹೆಚ್ಚಾಗಿದೆ ಮಗು. ನಿನ್ನೆ ರಾತ್ರಿ ಸರಿ ನಿದ್ದೆಯೂ ಬರಲಿಲ್ಲ. ದೇವಸ್ಥಾನಕ್ಕೆ ಬಂದು ಬಗ್ಗಿ ಗುಡಿಸುವಾ ತಲೆತಿರುಗಿ ಬೋಧತಪ್ಪಿ ಬಿದ್ದೆ. ಈಗ ಸೌಖ್ಯವಾಯಿತು ಮಗು; ನೀವು ಹೋಗಿ.

ರಾ:—ಅದಕ್ಕೇನಾದರೂ ಈಗಲೇ ಮದ್ದು ಮಾಡಬೇಕು ಅಜ್ಜಿ. ನಾನು ಸ್ವಲ್ಪ ತಡವಾಗಿ ಉಡುಪಿಗೆ ಹೋದವನು ನಿನ್ನ ಪಿತ್ತಶಮನಕ್ಕೇನಾದರೂ ಮದ್ದು ತರುವೆನು.

ಕಿ:—ಬೇಡ, ಬೇಡ ಮಗು. ನನಗೇಕಿನ್ನು ಮದ್ದು? ಇನ್ನು ಹೇಗೂ ಒಂದು ದಿನ ಸತ್ತರಾಯಿತು. ನನಗೋಸ್ಕರ ನೀವು ಕಷ್ಟಪಡಬಾರದು ಮಗು.

(ವೆಂಕಟ್ರಮಣ ಭಟ್ಟನು ಗರ್ಭಗುಡಿಯಿಂದ ಹೊರಬರುವಾಗ ರಾಮಭಟ್ಟನೂ ಕಿಟ್ಟಮ್ಮನೂ ಒಟ್ಟಿಗೆ ಕುಳಿತು ಮಾತಾಡುತ್ತಿರುವುದನ್ನು ಕಂಡು, ಕಿಟ್ಟಮ್ಮನು ಬದುಕಿರುವಳೆಂದೊಮ್ಮೆ ಸಮಾಧಾನಗೊಂಡು ಸರಾಗವಾಗಿ ಉಸಿ

ರುಬಿಡುವನು. ಉತ್ತರಕ್ಷಣದಲ್ಲಿ ಪುನಃ ಸಿಟ್ಟು ಮತ್ತು ರಾಮ ಭಟ್ಟನ ಮೇಲೆ ರೇಗಿಬಿದ್ದು ಉರಿಮೊಗದಿಂದ ಸರಸರನೆ ಅವರ ಬಳಿಗೆ ಸರಿದು ಥರಥರ ಕಂಪಿಸುತ್ತಾ ಒಂದು ಕ್ಷಣ ಮಾತಾಡಲಾರದೆ ಸುಮ್ಮನೆ ನಿಂತು ಬಿಡುವನು.)

ರಾ:—(ಅಲಕ್ಷ್ಯ ದೃಷ್ಟಿಯಿಂದ ತಂದೆಯನ್ನೊಮ್ಮೆ ನೋಡಿ) ಅಜ್ಜಿ, ನಾನೀಗ ಹೋಗುವೆನು. ಇವತ್ತೇ ಮದ್ದು ತಂದುಕೊಡುವೆನು. (ಹೋಗಲನುವಾಗುವನು.)

ವೇ:—ನಿಲ್ಲು ನಿಲ್ಲು. ಯಾರಿಗೆ ಮದ್ದು? ಇವಳು ಸತ್ತುಹೋದಳೆಂದು ನೆನಸಿದೆ ನಾನು! ಬದುಕಿರುವಳು! ಸತ್ತಿದ್ದರೆ ಚೆನ್ನಾಗಿತ್ತು!

ರಾ:—ಯಾಕವಳು ಸಾಯುವುದು ಪಾಪ? ರಾತ್ರಿಹಗಲು ನಿಮ್ಮ ಚಾಕರಿ ಮಾಡಿದುದು ಹೆಚ್ಚಾಯಿತೆ?

ವೇ:—ಚಾಕರಿಯವಳು ಚಾಕರಿ ಮಾಡದೆ ಮತ್ತಾರು ಮಾಡುವುದು, ನೀನೇ? ಸಾಕಿನ್ನು ಇವಳು ಚಾಕರಿಮಾಡಿದುದು! ಇನ್ನುಮುಂದೆ ದೇವಸ್ಥಾನದ ಅಂಗಣಕ್ಕಾಗಲಿ ಮನೆ ಮೆಟ್ಟಲಿಗಾಗಲಿ ಕಾಲಿಡಕೂಡದು.

ರಾ:—ಯಾಕೆ? ಅವಳು ಮಾಡಿದ ತಪ್ಪೇನು?

ವೇ:—(ರಾಮಭಟ್ಟನನ್ನು ಚಾಳಿಸಿ) ಅವಳು ಮಾಡಿದ ತಪ್ಪೇನು? ಮರ್ಯಾದೆ ಇಲ್ಲದವಳು! ಮಗಳನ್ನು..........

ಕಿ:—(ಸಿಟ್ಟನ್ನು ತಾಳಿಕೊಳ್ಳಲಾರದೆ ಉರಿದುಬಿದ್ದು) ಬಾಯಿ ಮುಚ್ಚಿ! ಮನಸೇಚ್ಛೆ ಮಾತಾಡಬೇಡಿ! ಮಾನಮರ್ಯಾದೆ ಇಲ್ಲದವಳು ನಾನೆ? ನನ್ನ ಮಗಳನ್ನೇನು ಮಾಡಿದೆ ನಾನು? ಮಾನಗೆಟ್ಟ ವಿಧವೆಯನ್ನು ಮನೆಯಲ್ಲಿಟ್ಟುಕೊಂಡು ಅನಾಚಾರ ಮಾಡುವ ನೀವು ಸಂಭಾವಿತರೇ? ನೀತಿವಂತರೇ? (ರಾಮಭಟ್ಟನು ಮಂದಹಾಸದಿಂದ ತಂದೆಯ ಮುಖ ನೋಡುವನು.)

ವೇ:—ನಿನಗವಳು ಹೇಳುವುದೆಲ್ಲಾ ಚಂದವಾಗಿ ತೋರುವುದಲ್ಲವೇ? ನಗುತ್ತಿರುವೆಯಾ ನಾಚಿಕೆಯಿಲ್ಲದವನೆ!

ರಾ:—ನಾನೇನಂತಹ ನಾಚಿಕೆಯಿಲ್ಲದ ಕೆಲಸಮಾಡಿದುದು?

ವೇ:—ಏನಂದೆ? ಜಾತಿ, ನೀತಿ, ಧರ್ಮವನ್ನೆಲ್ಲಾ ಬಿಟ್ಟು, ನೀಚ ಜಾತಿಯ, ಮನೆ ಚಾಕರಿಯ, ಮಾನಹೀನ ತರುಣಿಯೋರ್ವಳನ್ನು.......

ರಾ:– (ಸಿಟ್ಟನ್ನು ತಾಳಲಾರದೆ ನಡುವೆ ಬಾಯಿಹಾಕಿ) ನಿಮ್ಮ ಜಾತಿ, ನೀತಿ, ಧರ್ಮದ ಹುರುಳನ್ನೆಲ್ಲಾ ಚೆನ್ನಾಗಿ ಬಲ್ಲೆ! ಅದೆಲ್ಲ ಬರಿಯ ನಟನೆ, ಆತ್ಮವಂಚನೆ, ದೈವದ್ರೋಹ!

ವೆ:—ನಿಜವಾಗಿಯೂ ನಿನ್ನ ತಲೆಗೆಟ್ಟದೆ. ಕಿಟ್ಟುವೂ ಅವಳ ಮಗಳೂ ಕೂಡಿ ನಿನಗೇನೋ ಮದ್ದು ಹಾಕಿ ತಲೆಗೆಡಿಸಿರುತ್ತಾರೆ. ಇಲ್ಲವಾದರೆ ಉಚ್ಚ ಬ್ರಾಹ್ಮಣನಾದ ನೀನೆಲ್ಲಿ? ಮಾನಗೆಟ್ಟ ಹೀನಜಾತಿಯ ಆ ಸುಂದರಿಯೆಲ್ಲಿ! ಲೋಕದಲ್ಲೆಲ್ಲಿಯಾದರೂ ಇಂತಹದೊಂದು ನಡೆಯುವುದಿದೆಯೋ?

ಕಿಟ್ಟು:—(ಸಿಟ್ಟಿನಿಂದ ಗಡಗಡನೆ ನಡುಗುತ್ತಾ ವೆಂಕಟ್ರಮಣ ಭಟ್ಟನ ಎದುರು ಬಂದು ನಿಂತು) ಭಟ್ರೇ, ಮತಿಗೆಟ್ಟು ಮಾತಾಡಿದರೆ ಜಾಗ್ರತೆ! ನಾನು ನಿಮ್ಮ ಚಾಕರಿಯವಳಾದರೂ ನೀಚ ಜಾತಿಯವಳಾದರೂ ನಿಮಗಿಂತ ಹೆಚ್ಚಿನ ಮರ್ಯಾದೆಯ ಭಯ ನನಗೆ ಮತ್ತು ನನ್ನ ಮಗಳಿಗಿದೆ.

ವೆ:—ಹೌದೌದು. ನಿನ್ನ ಮಗಳು ಬಹಳ ಮಾನವಂತೆ, ಯಾರ್‍ಯಾರ ಬೆನ್ನು ಹಿಡಿದು ಹೋಗುವವಳು!

ಕಿ:—(ಹಿಡಿಸೂಡಿ ಹಿಡಿದು ವೆಂಕಟ್ರಮಣಭಟ್ಟನ ಮೈಮೇಲೆ ಬೀಳುವಳೋ ಎಂಬಂತೆ ಮತ್ತೂ ಮುಂದುವರಿಯುವಳು. ಭಟ್ಟನು ಅಂಜಿ ಹಿಂದೆ ಸರಿಯುವನು) ಯಾರ ಬೆನ್ನು ಹಿಡಿದು ಹೋದಳವಳು ಹೇಳಿ!

ವೆ:—ಏನು ಹೊಡೆಯುವೆಯಾ? ಯಾರ ಬೆನ್ನು ಹಿಡಿದು ಹೋದಳೆಂದು ನಿನಗೆ ತಿಳಿಯದೆ? ಊರೆಲ್ಲಾ ಹಬ್ಬಿದೆಯಲ್ಲಾ ಸುದ್ದಿ!

ಕಿ:—ಏನು ಸುದ್ದಿ!

ವೆ:—ಏನು ಸುದ್ದಿಯೇ? ನೀನು ಮತ್ತು ನಿನ್ನ ಮಗಳು ನನ್ನ ಮಗನನ್ನು ಮರುಳುಮಾಡಿರುವುದಿಲ್ಲವೇ?

ಕಿ:—ಏನು, ನಾವು ನಿಮ್ಮ ಮಗನನ್ನು ಮರುಳುಮಾಡಿದುದೇ? ಅವರು ಇಲ್ಲಿಯೇ ಇರುವವರಲ್ಲ? ಅವರೊಡನೆಯೇ ಕೇಳಿ ನಾನವರಿಗೆ ಎಷ್ಟು ಬುದ್ಧಿವಾದ ಹೇಳಿರುವೆನೆಂದು? ನನ್ನ ಮಗನ ಸಮಾನ ಅವರು. ಅವರ ಜೀವನವನ್ನು ನಾನೆಂದಿಗೂ ಕೆಡಿಸಲೆತ್ನಿಸಲಾರೆ.

ವೆ:—ಅವನೊಡನೇನು ಕೇಳುವುದು ತಲೆಗೆಟ್ಟವನೊಡನೆ? ನೀನು ಮಾನವಂತೆಯಾದರೆ ನಿನ್ನ ಮಗಳಿಗೆ ಯಾಕೆ ಈ ವರೆಗೆ ಮದುವೆ ಮಾಡಿಲ್ಲ?

ಕಿ:--ಸುಂದರಿಯನ್ನು ಮದುವೆಮಾಡಿಕೊಡಲು ನಾನೆಷ್ಟು ಪ್ರಯತ್ನಿಸುತ್ತಿದ್ದೇನೆಂದು ನನಗೆ ಮತ್ತು ಆ ಪರಮಾತ್ಮನಿಗೆ ಗೊತ್ತು! ನಮ್ಮ ಮಾತಂತಿರಲಿ, ನೀವೇಕೆ ನಿಮ್ಮ ಮಗನಿಗೆ ಈ ವರೆಗೆ ಮದುವೆಮಾಡಿಲ್ಲ?

ವೆ:—ನಿನ್ನ ಮಗಳು ಅವನ ತಲೆಗೆಡಿಸಿರುವಾಗ ಅವನು ಕೇಳಬೇಕಲ್ಲವೆ?

ರಾ:—(ಸಂತಾಪಭರದಿಂದ ವೆಂಕಟ್ರಮಣಭಟ್ಟನ ಎದುರುಬಂದು ನಿಂತು) ಅಪ್ಪಾ, ನನ್ನನ್ನೆಷ್ಟು ಬೇಕಾದರೂ ಜೈದುಭಂಗಿಸಿರಿ. ನನಗೇನು ಬೇಕಾದರೂ ಮಾಡಿರಿ. ಆದರೆ, ನಿರ್ದೋಷಿಗಳೂ, ನಿರ್ಮಲಚರಿತರೂ ಆದ ಈ ತಾಯಿಮಗಳನ್ನು ನಿಂದಿಸಿ ದೂಷಿಸಬೇಡಿರಿ. ನಿಮಗೆ ಪಾಪ ತಟ್ಟೀತು.

ವೆ:—ಹೌದೌದು, ಗೊತ್ತುಂಟಿಲ್ಲ!

ರಾ:—ತಾಯಿಯಾಣೆ ಹೌದು. ಕಿಟ್ಟುವೂ ಸುಂದರಿಯೂ ನನ್ನ ಪ್ರಣಯಕ್ಕೆ ಒಂದಿಷ್ಟು ಆಶಯವಿತ್ತಿರುವುದಿಲ್ಲ. ಆಶಯವಿತ್ತಿದ್ದರೆ ನಾನೀವರೆಗೆ ಮದುವೆಯಾಗದಿರುತ್ತಿದ್ದಿಲ್ಲ ನಮ್ಮಿಬ್ಬರ ಮದುವೆಗೆ ಕಿಟ್ಟುವೂ ಸುಂದರಿಯೂ ನಿಮ್ಮಷ್ಟೇ ವಿರೋಧವಿರುವರು. ಎಲ್ಲಕ್ಕೂ ನಾನೇ ಕಾರಣ. ನನ್ನಿಂದಾಗಿ ಸಂಪೂರ್ಣ ನಿರ್ದೋಷಿಗಳಾದ ಈ ಸ್ತ್ರೀಯರು ಪಾಪ, ಅಸಹನೀಯ ಕಷ್ಟಕ್ಕೊಳಗಾಗುವಂತಾಗಿದೆ.

ವೆ:—ಸಾಕು ಸಾಕು ನೀನವರ ಕಡೆಯಿಂದ ನಡೆಸಿದ ವಕಾಲತು! ನಿನ್ನಿಂದಾಗಿ ನಾನೆಂತಹ ಕಷ್ಟಕ್ಕೊಳಗಾಗಿರುವೆನೆಂದು ನಿನಗೆ ಗೊತ್ತಿದೆಯೇ? ನನಗೆ ಮುಖವೆತ್ತಿ ಹೊರಗೆ ಹೋಗಲಿದೆಯೇ? ನನ್ನನ್ನು ಇದ್ದು ಸತ್ತಂತೆ ಮಾಡಿರುವೆ ನೀನು!

ರಾ:—ಅಪ್ಪಾ, ನಾನೇನು ಮಾಡಲಿ? ಸುಂದರಿಯು ಹೊರತು ಮತ್ತಾರನ್ನೂ ವರಿಸಲು ನನ್ನ ಹೃದಯವು ಒಡಂಬಡಲಾರದು. ಅವಳು ನನ್ನ ಪ್ರತಿಪ್ರಾಣವೇ ಆಗಿರುವಳು.

ವೆ:—ಮುಚ್ಚು ಬಾಯಿ! ನಗೆ, ನಾಚಿಕೆ, ಮಾನ, ಮರ್ಯಾದೆ, ಜಾತಿ, ನೀತಿ, ಧರ್ಮವನ್ನೆಲ್ಲಾ ಬಿಟ್ಟುಬಿಟ್ಟರೆ ಏನೂ ಮಾಡಬಹುದು. ಏನು, ಅವಳು ನಿನ್ನ ಪ್ರತಿಪ್ರಾಣವೇ? ಅಹಹ! ಹಾಗಾದರೆ ಅವಳೊಂದಿಗೇನೇ ಹೋಗಿ ವಾಸಿಸದೆ ನನ್ನ ಮನೆಯಲ್ಲಿರುವುದೇಕೆ?

ಕಿಟ್ಟು:—ಮಗು, ವೃಥಾ ಛಲಹಿಡಿದು ನಿಮ್ಮ ಬಾಳನ್ನು ಹಾಳು ಮಾಡಿಕೊಳ್ಳಬೇಡಿ. ಸುಂದರಿಯ ಯೋಚನೆ ಬಿಡಿರಿ. ನಿಮ್ಮ ಜಾತಿಯ ಯೋಗ್ಯ ಹೆಣ್ಣೊಂದನ್ನು ಮದುವೆಯಾಗಿ ಸುಖಸಂತೋಷದಿಂದ ಬಾಳಿರಿ.

ವೆ:—ಸಾಕು ಸಾಕು ನಿನ್ನ ಬಣ್ಣದ ಮಾತೆಲ್ಲ! ತೊಲಗಿಲ್ಲಿಂದ! ಇನ್ನು ಮುಂದೆ ಕಾಲಿಟ್ಟರೆ ನೋಡಿಕೋ!

ಕಿಟ್ಟು:—ನೀವು ಬೆದರಿಸುವುದು ಬೇಡ. ನಾನೇ ಬರುವುದಿಲ್ಲ. ನೀವು ಇಂದಿನಂತೆಯೇ ದೂಡಿ ಎಲ್ಲಿಯಾದರೂ ಕೈಕಾಲು ಮುರಿದು ಹೋದರೆ ನಾನು ಅಪರ ವಯಸ್ಸಿನಲ್ಲಿ ನರಳಿನರಳಿ ಸಾಯಬೇಕಲ್ಲವೇ? ಒಮ್ಮೆಯೇ ಸತ್ತು ಹೋದರಾದರೂ ಚಿಂತೆಯಿಲ್ಲ.

ರಾ:—(ಕೋಪೋದ್ರೇಕದಿಂದ) ಏನು, ನಿನ್ನನ್ನಿವರು ದೂಡಿ ಬಿದ್ದು ಬೋಧತಪ್ಪಿ ಹೋದುದೇ? ಅಹ! ನಿನ್ನಂತಹ ಮುದುಕಿಯ ಮೇಲೂ ಕೈಮಾಡಲು ಇವರಿಗೆ ಮನಸ್ಸು ಬಂತೇ? ಅಜ್ಜಿ, ನೀನು ಹಲವು ವರ್ಷಗಳಿಂದ ರಾತ್ರಿಹಗಲು ಮಾಡಿದ ಸೇವೆಯ ಒಂದಿಷ್ಟು ನೆನಪಾದರೂ ಇವರಿಗಿಲ್ಲದಾಯಿತೇ? ಇದು ಧರ್ಮನೀತಿಯ ರೀತಿಯೇ? ಅಜ್ಜಿ ಕ್ಷಮಿಸು; ನನಗಾಗಿ, ನನ್ನ ತಾಯಿಗಾಗಿ ತಂದೆಯ ಕ್ರೂರತನವನ್ನು ಕ್ಷಮಿಸು.

ಕಿ:—(ಒಂದೇಸವನೆ ಕಣ್ಣೀರು ಸುರಿಸಿ ರಾಮಭಟ್ಟನ ಕೈಹಿಡಿದು) ಮಗು, ನಾನೇನು ಕ್ಷಮಿಸಲಿದೆ? ನಾನು ಭಾಗ್ಯಹೀನಳು. ಇಲ್ಲವಾದರೆ ನನಗೀ ಗತಿಯಾಗುತ್ತಿದ್ದಿಲ್ಲ. (ಸೆರಗನ್ನು ಬಾಯಿಗೆ ತುರುಕಿದರೂ ತಡೆಯಲಾರದೆ ಬಾಯ್ಬಿಟ್ಟು ಅಳುವಳು. ವೆಂಕಟ್ರಮಣ ಭಟ್ಟನ ಕಠಿಣಹೃದಯವೂ ತುಸು ಕರಗಿ ಅವನು ಅಲ್ಲಿಂದ ಹೋಗಿಬಿಡುವನು.)

ರಾ:—(ಒಂದೇ ಸವನೆ ಹರಿಯುವ ಕಣ್ಣೀರನ್ನು ಕರವಸ್ತ್ರದಿಂದೊ

ರಸಿಕೊಂಡು) ಅಜ್ಜ, ಅಳಬೇಡ. ನೀನೀ ಮುದಿವಯಸ್ಸಿನಲ್ಲಿ ಕೆಲಸ ಮಾಡುವುದೂ ಸರಿಯಲ್ಲ. ಹೋಗು, ನಿನಗೇನೂ ಕಡಿಮೆಬೀಳಲಿಕ್ಕಿಲ್ಲ.

ಕಿ:—ನಾನು ಹೋಗುವೆನು. ಆದರೆ ಮಗು, ನೀವೊಂದು ಮಾತುಕೊಡುವಿರಾ?

ರಾ:—ಏನದು ಅಜ್ಜ?

ಕಿ:—ಇಂದಿನಿಂದ ನೀವು ಸುಂದರಿಯನ್ನು ಪ್ರೀತಿಸುವುದನ್ನು ಬಿಡಬೇಕು. ನಿಮಗಿಬ್ಬರಿಗೂ ಅದರಿಂದ ಒಳ್ಳಿತಾಗದು.

ರಾ:—ಅಜ್ಜ, ನಮ್ಮಿಬ್ಬರ ಹೃದಯವನ್ನು ನೀನರಿಯಲಾರೆ. ಅದೊಂದರ ಹೊರತು ನಿನಗಾಗಿ ಮತ್ತೇನು ಮಾಡುವುದಕ್ಕೂ ನಾನು ಸಿದ್ಧನಿರುವೆನು.

ಕಿ:—ಅದೊಂದು ಬಿಟ್ಟು ನನಗೆ ಮತ್ತೇನೂ ಬೇಕಾಗಿಲ್ಲ ಮಗು.

ರಾ:—ಅದೆಷ್ಟಕ್ಕೂ ಸಾಧ್ಯವಿಲ್ಲ ಅಜ್ಜ, ಕ್ಷಮಿಸು. ಆ ಮಾತು ಕೊಡೆಂದು ಹೇಳುವುದಕ್ಕಿಂತ ಆತ್ಮಹತ್ಯೆಮಾಡಿಕೊಳ್ಳೆನ್ನುವುದು ಲೇಸು. ನೀನೀಗ ಹೋಗು, ಅಜ್ಜ. (ಬೆನ್ನು ತಡವಿ ಕಳುಹಿಸಿಕೊಡುವನು. ಕಿಟ್ಟುವು ಕಣ್ಣೀರಿಡುತ್ತಾ ಮೌನವಾಗಿ ಹೋಗುವಳು. ರಾಮುಭಟ್ಟನು ಅವಳು ಕಣ್ಮರೆಯಾಗುವನಕ ಅವಳನ್ನೇ ನೋಡುತ್ತಾ, ಧಾರೆಕಟ್ಟಿ ಇಳಿದು ಬರುವ ಕಣ್ಣೀರನ್ನೊರಸಿ ನಿಟ್ಟುಸಿರಿಟ್ಟು, ರಮಣೀಯ ಪ್ರಕೃತಿಯ ದೃಶ್ಯವನ್ನು ನೋಡುತ್ತಾ ಯೋಚನಾಮಗ್ನನಾಗಿ ಒಂದೆಡೆ ನಿಂತು ಹಾಡುವನು.)

(ಬನುಮ-ಬ್ರಹ್ಮಚಾರಿ-ಎಂಬಂತೆ)

ದೇವ-ಧರ್ಮ ವೆಲ್ಲಿ। ಹೃದಯವಿ-ಹೀನ-ಕರ್ಮದಲ್ಲಿ ॥
ಧರ್ಮ ರಕ್ಷಣೆಯ | ಭ್ರಾಂತತನದೊಳು ।
ಪಾಶವಿ-ಕೃತ್ಯವದು-ಮಾನವಗುಚಿತವೇನು- ॥ ದೇವ ॥
ಮಾನವ ಜಾತಿಯೆಲ್ಲವು । ಬಂಧುಭಾವದೊಳಿರಲು ।
ಲೋಕ-ದೇವಲೋಕವು ॥ ದೇವ ॥

ಮಂದಮಂದವಾಗಿ ಬೀಸಿ ಅದೆಷ್ಟು ಹೃದಯಾನಂದಗೊಳಿಸುತ್ತಿದೆ ಮಂದಮಾರುತ! ಅಮಲ ಕೋಮಲವಾಗಿ ಬೆಳಗಿ ಮನವನ್ನೆಷ್ಟು ಪುಳಕಿತಗೊಳಿಸುತಿದೆ ಮುಂಬೆಳಕು! ಸೊಂಪು ಪೆಂಪಿನಿಂದ ಶೋಭಿಸಿ

ಎಷ್ಟೊಂದು ಮನೋಹರವಾಗಿದೆ ಪ್ರಭಾತದ ಪ್ರಕೃತಿ ದೃಶ್ಯ! ಸರ್ವವ್ಯಾಪಿಯಾಗಿ, ಸರ್ವಾನಂದದಾಯಕವಾಗಿರುವ ಸ್ವಾಭಾವಿಕ ದೈವ ಸಂಪತ್ತಿದು. ಭಿನ್ನಭೇದ, ಕಟ್ಟುನಿಟ್ಟು, ಮೇಲುಕೀಳೆಂಧಿಲ್ಲ ಅದಕ್ಕೆ. ಅಂತೆಯೇ ಜಗನ್ನಿಯಾಮಕನ ಮಹಿಮೆಯುನ್ನು. ಮಾನವ ಮನಗಾಣಿಸುವ ಧರ್ಮವು ಭಿನ್ನಭೇದದಾಶ್ರಯವಾಗುವುದಾದರೂ ಹೇಗೆ? ಛೆ! ಛೆ! ಅದೆಂದೂ ಸಾಧ್ಯವಿಲ್ಲ. ಇಡೀ ಮಾನವ ವರ್ಗದ ಸ್ವಭಾವಸಿದ್ಧ ಬಾಂಧವ್ಯವನ್ನು ಬೆಳೆಸುವ ಬದಲಿಗೆ ತಡೆಮಾಡಿ, ಭೇದದ ಬೀಜ ಬಿತ್ತಿ ಅದನ್ನು ತಂಡತಂಡವಾಗಿ ವಿಂಗಡಿಸಿರುವ ಧರ್ಮವು ಅಧರ್ಮವಲ್ಲದೆ ಸದ್ಧರ್ಮವಲ್ಲ. ಆದರಿಂದ ಎಂದೂ ಮಾನವನ ಕಲ್ಯಾಣವಾಗಲಾರದು. ಕುರುಡು ವಿಶ್ವಾಸದಿಂದ ಧರ್ಮದ ಆತ್ಮವಿರಹಿತವಾದ ಕೊಳಕು ಶವಕ್ಕೆ ಕಟ್ಟುಬಿದ್ದಿರುವ ತಂದೆಯ ಮಾರ್ಗವನ್ನು ನಾನೆಂದಿಗೂ ಅನುಸರಿಸಲಾರೆ. ಮಾತ್ರವಲ್ಲದೆ ಅದರೆದುರಾಗಿ ಬಂಡಾಯವೆಬ್ಬಿಸಿ ಅದನ್ನು ನಾಶಮಾಡಲು ನನ್ನಿಂದ ಸಾಧ್ಯವಾದ ಪ್ರಯತ್ನ ಮಾಡುವೆನು.

ನೋಟ ೩

(ಶಾಲೆಯ ಒಂದು ಕೋಣೆ. ಸುಂದರಿಯು ಕುರ್ಚಿಯಲ್ಲಿ ಕುಳಿತು ಎದುರಿನ ಮೇಜಿಯ ಮೇಲೆ ಬಾಗಿ ಕಾಗದ ಬರೆಯುತ್ತಿರುವಳು. ಉದ್ವೇಗ ಭರದಿಂದ ಲೇಖನಿಯು ಮುಂದೆ ಸಾಗದೆ ನಿಟ್ಟುಸಿರಿಟ್ಟು, ಲೇಖನಿಯನ್ನು ಮೇಜಿನ ಮೇಲೆ ಹಾಕಿ ಬಿಡುವಳು.)

ತುಮನೆ ಮುಜಕೋ-ಪ್ರೇಮ ಸಿಖಾಯ—ಎಂಬಂತೆ

ವಿರಹಾನಲವು-ಸುಡುತಿದೆ ಹೃದಯ ।
ತಾಳುವೆನೆಂತು ಹಾ-ಪ್ರಿಯನ ವಿಯೋಗ ॥
ಪಾವನ ಪ್ರೇಮಾ-ಮೃತವನೆ ಸುರಿವ ।
ಪ್ರಾಣಾಧಿಕನ-ಪ್ರೇಮ ಸಮ್ಮಿಲನ ।
ತೊರೆಯುತ ಬಾಳುವೆನೆಂತೊ ದೇವ ।
ಸಹಿಸಲದೆಂತಕಟಕಟ-ತಾಪವ ॥

(ಒಂದೇ ಸವನೆ ಹರಿದು ಬರುವ ಕಣ್ಣೀರನ್ನು ಸೆರಗಿಂದೊರಸಿ ತುಸು ಹೊತ್ತು ಸುಮ್ಮಗೆ ಕೂತು, ಆ ಮೇಲೆ ಮನಸ್ಸು ಗಟ್ಟಿಮಾಡಿ ಪುನಃ ಕಾಗದ ಬರೆಯಲಾರಂಭಿಸುವಳು. ಆದರೂ ಕಣ್ಣೀರ ಬಿಂದುಗಳು ಬೊಟ್ಟುಬೊಟ್ಟಾಗಿ ಬೀಳಹತ್ತಲು ಅವನ್ನು ಆಗಾಗ ಕರವಸ್ತ್ರದಿಂದೊರಸಿಕೊಳ್ಳುವಳು. ಕೆಲವು ಕರವಸ್ತ್ರದ ಸೆರೆ ತಪ್ಪಿಸಿ, ಫಕ್ಕನೆ ಕಾಗದದ ಮೇಲೆ ಬಿದ್ದು ಹರಡುವವು. ಅಷ್ಟರಲ್ಲಿ ರಾಮಭಟ್ಟನು ಶಾಲೆಯೊಳಗೆ ಪ್ರವೇಶಿಸಿ ಸುಂದರಿಯು ಕುಳಿತು ಕಣ್ಣೀರೊರಸಿಕೊಳ್ಳುತ್ತಾ ಕಾಗದ ಬರಿಯುತ್ತಿರುವುದನ್ನು ಬಾಗಿಲ ಬದಿಯಲ್ಲಿ ತುಸು ಹೊತ್ತು ನಿಂತು ನೋಡುವನು.)

ರಾ:—ಸುಂದರಿ, ನಾನು ಒಳಗೆ ಬರಲೇ?

ಸು:—(ಗಡಿಬಿಡಿಯಿಂದ ಕುರ್ಚಿಯಿಂದ ಥಟ್ಟನೆದ್ದು ನಿಂತು ಆ ಮೇಲೆ ರಾಮಭಟ್ಟನ ಮುಖವನ್ನೊಮ್ಮೆ ನೋಡಿ ಲಜ್ಜೆಯಿಂದ ತಲೆಬಾಗಿ ಸುಮ್ಮನೆ ನಿಂತು ಬಿಡುವಳು.)

ರಾ:—(ಕೋಣೆಯ ಒಳಗೆ ಹೋಗಿ ಮೇಜಿಯ ಮೇಲಿನ ಕಾಗದವನ್ನು ಕಂಡು) ಸುಂದರಿ, ಅದಾರಿಗೆ ಪತ್ರ ಬರೆಯುತ್ತಿರುವೆ? ಅದೇಕೆ ನಿನ್ನ ಕಂಗಳಲ್ಲಿ ನೀರು ತುಂಬಿದುದು?

ಸು:—(ಕಾಗದದ ಪ್ರಸ್ತಾಪವೆತ್ತಿದೊಡನೆಯೇ ಮತ್ತಷ್ಟು ತಳಮಳಗೊಂಡು ಉತ್ತರ ಕೊಡುವುದೇನೆಂದು ತೋಚದೆ ಕಾಗದವನ್ನು ತೆಗೆದು ಮಡಚಿ ಮೇಜಿಯೊಳಗೆ ಹಾಕುವಳು.)

ರಾ:—ಸುಂದರಿ, ನಾನು ಬಂದುದರಿಂದ ನಿನಗೆ ಕಾಗದ ಬರೆಯಲು ತೊಡಕಾಯಿತೇ? ಹೋಗಲೇ?

ಸು:—(ರಾಮಭಟ್ಟನನ್ನೇ ಎವೆಯಿಕ್ಕದೆ ನೋಡುವಳು. ದರದರನೆ ಕಣ್ಣೀರಿಳಿದು ಬರುವುದು.)

ರಾ:—(ಸಂತಪ್ತನಾಗಿ) ಸುಂದರಿ, ಸುಂದರಿ, ನಿನ್ನ ಕಣ್ಣೀರ ದ್ರಾವಕದಲ್ಲಿ ನನ್ನ ಹೃದಯವನ್ನು ಸುಟ್ಟು ಬೂದಿ ಮಾಡಬೇಡ! ಮಾತಾಡು, ನಿನ್ನಂತರ್ಯದ ವೇದನೆಯನ್ನು ಮನಬಿಚ್ಚಿ ತಿಳಿಸು.

ಸು:—(ಕಣ್ಣೀರನ್ನು ಸೆರಗಿಂದೊರಸಿ) ಭಟ್ರೇ, ಸ್ತ್ರೀಯ ಕಣ್ಣೀರೇ ಅವಳ ಹೃದಯದ ನಾಲಿಗೆ! ನಾನಿನ್ನೇನು ಮನಬಿಚ್ಚಿ ತಿಳಿಸಲಿ?

ರಾ:—ನೀನೇನು ಬರೆಯುತ್ತಿದ್ದುದು ಸುಂದರಿ?

ಸು:—ನಿಮಗೊಂದು ಪತ್ರ.

ರಾ.—ನನಗೊಂದು ಪತ್ರವೇ? ಅದಾವುದಕ್ಕಾಗಿ?

ಸು:—ನೀವು ಇಲ್ಲಿಗೆ ಬರುವಿರೆಂದು ನಾನೆಣಿಸಲಿಲ್ಲ. ಅದುದರಿಂದಲೇ ನನ್ನ ಹೃದಯವನ್ನು ನಿಮ್ಮ ಮುಂದೆ ತೆರೆದಿಡಲು ನಿಮಗೊಂದು ಪತ್ರ ಬರೆಯಲಾರಂಭಿಸಿದ್ದೆ.

ರಾ:—ಸ್ತ್ರೀಯು ಗುಪ್ತಗಾಮಿನಿ. ಎಂತಹ ಸಂವೇಧನೆಯನ್ನಾದರೂ ಅಂತರಾಳದಲ್ಲಿ ಅಡಗಿಸಿಕೊಂಡು ಮೇಲಿಂದ ಮೇಲೆ ಪ್ರಶಾಂತವಾಗಿರ ಬಲ್ಲಳವಳು. ಆದರೆ ಗಂಡು ಹೃದಯವು ಬಹಿರ್ಗಾಮಿಯು. ತಟದ ತಡೆಯೊಡೆದು ಭೋರ್ಗರೆದು ಹರಿಯುವ ಅಸಹಿಷ್ಣುವದು. ನಾನು ತಡೆಕೊಳ್ಳಲೆತ್ನಿಸಿದಷ್ಟೂ ನನ್ನ ಹೃದಯವು ಹೆಚ್ಚೆಚ್ಚು ಉದ್ವೇಗಗೊಂಡು ಕಡೆಗೆ ನನ್ನ ಯಾವ ಅಂಕೆಗೂ ಒಳಗಾಗದೆ ಸ್ವಚ್ಛಂದವಾಗಿ ಅಡ್ಡಾಡಿಸಿ ಕಟ್ಟಕಡೆಗಿಲ್ಲಿ ಕರತಂದಿತು. ಸುಂದರಿ, ಕ್ಷಮಿಸು. ಕೊಟ್ಟ ಮಾತಿಗೆ ತಪ್ಪಿ ನಡೆದ ನನ್ನ ಅಪರಾಧವನ್ನು ಕ್ಷಮಿಸು. ನನ್ನ ಜೀವನವು ಪ್ರಚಂಡ ಪ್ರವಾಹಕ್ಕೆ ಸಿಕ್ಕಿದ ಚುಕ್ಕಾಣಿಯಿಲ್ಲದ ದೋಣಿಯಂತಾಗಿದೆ. ಎಷ್ಟೊಂದು ಪ್ರಯತ್ನಿಸಿದರೂ ನನ್ನ ಹತೋಟಿಯಲ್ಲಿ ನಿಲ್ಲದದು ಸುಂದರಿ. ನಾನೇನು ಮಾಡಲಿ ಹೇಳು?

ಸು:—ಭಟ್ಟರೇ, ನನ್ನ ಹೃದಯದ ಪ್ರೇಮದಾಳವನ್ನು ನಿಮ್ಮಂತೆ ಮಾತುಗಳಿಂದ ಬಣ್ಣಿಸಿ ತಿಳಿಸಲು ಸ್ತ್ರೀಯಾದ ನನಗೆ ನಾಲಿಗೆ ಬಾರದು. ನಮ್ಮಿಬ್ಬರ ಈ ಅನುರಾಗವು ಇಷ್ಟರಲ್ಲೇ ಕೊನೆಹೊಂದಬೇಕು. ನಮ್ಮ ಪ್ರೇಮ ಬೀಜಾಂಕುರವು, ದಾಂಪತ್ಯಪ್ರೇಮ ಜಲಸೇಚನದಿಂದ ಸೊಬಗಿನ ಲತೆಯಾಗಿ ಬೆಳೆದು ಬೆಳಗುವುದು ಕ್ರೂರ ಸಮಾಜಕ್ಕೆ ಸಹನೀಯವಾಗದು. (ತುಂಬಿಬಂದ ಕಣ್ಣೀರನ್ನು ಸೆರಗಿಂದೊರಸಿಕೊಳ್ಳುವಳು.)

ರಾ:—(ಆವೇಗಭರದಿಂದ ಸುಂದರಿಯ ಕೈಹಿಡಿದು) ಸುಂದರಿ, ನಮ್ಮ ದಾಂಪತ್ಯಕ್ಕೆ ನಮ್ಮ ಮೂಢ ಸಮಾಜವೇ ಅಲ್ಲ; ಇಡೀ ಲೋಕವೇ ಮುನಿದು ಬಂದರೂ ನಾನು ಗಣಿಸಲಾರೆ. ನಮ್ಮ ಸಮಾಜದ ರೀತಿನೀತಿಗಳ ಕೊಳಕುತನಕ್ಕೇನನ್ನಲಿ! ಸುಂದರಿ, ನಾನು ಬೇಕಾದರೆ ನಿನ್ನನ್ನು ಇಟ್ಟುಕೊಳ್ಳಬೇಕಂತೆ! ಅದಕ್ಕೆ ಸಮಾಜದ ಒಪ್ಪಿಗೆಯಂತೆ! ಅದರಿಂದ

ನಮ್ಮ ನೀತಿ ಧರ್ಮಕ್ಕೆ ಅಷ್ಟೊಂದು ದೊಡ್ಡ ಹಾನಿಯೇನೂ ಉಂಟಾಗಲಾರದಂತೆ! ಆದರೆ (ನಿಟ್ಟುಸಿರಿಟ್ಟು) ಆದರೆ, ಸ್ವಾಭಾವಿಕ ಪ್ರೇಮಾನುವರ್ತಿಯಾಗಿ ನಿನ್ನನ್ನು ವರಿಸಿ ನ್ಯಾಯವಾದ ದಾಂಪತ್ಯ ಜೀವನ ನಡಿಸುವುದೆಂದರೆ ನಮ್ಮ ಧರ್ಮ ನೀತಿಯ ಬುಡಕ್ಕೇನೇ ಕೊಡಲಿಯಿಟ್ಟಂತಾಗುವುದಂತೆ! ಅದನ್ನೆಷ್ಟಕ್ಕೂ ನಮ್ಮ ಸಮಾಜವು ಸಹಿಸಲಾರದಂತೆ! ಎಂತಹ ವಿಪರ್ಯಾಸವಿದು! ಈ ಘೋರ ಅನ್ಯಾಯವನ್ನು ಎದುರಿಸುವ ಎದೆಗಾರಿಕೆಯು ನಮ್ಮ ಸಮಾಜದಲ್ಲೆಷ್ಟು ಮಂದಿಗಿರುವದು! ತಮ್ಮ ಹೃದಯದ ಸ್ವಾಭಾವಿಕ ಪ್ರೇರಣೆಗಳನ್ನು ದಬಾಯಿಸಿ, ಸಮಾಜದ ಎಂತಹ ಅನ್ಯಾಯಕ್ಕಾದರೂ ತಲೆಬಾಗಿ, ತಡೆತೊಡಕಿಲ್ಲದ ರೂಢಿಯ ಸುಗಮ ಮಾರ್ಗ ಹಿಡಿದು ನಡೆಯುವುದೇ ಜನತೆಯ ಸರ್ವಸಾಮಾನ್ಯ ರೀತಿ. ಆದುದರಿಂದಲೇ ಕ್ರೂರ ಸಮಾಜವು ತನ್ನ ಹೃದಯರಹಿತ ಶಾಸನಗಳನ್ನು ನಿರ್ಭಯವಾಗಿ ಜ್ಯಾರಿಯಲ್ಲಿರಿಸಿ, ಮಾನವ ಸ್ವಾತಂತ್ರ್ಯವನ್ನು ಅಪಹರಿಸಿ, ಆತನನ್ನು ತನ್ನ ಗುಲಾಮನನ್ನಾಗಿ ಮಾಡಿಕೊಂಡಿರುವುದು. ಆದರೆ ಸುಂದರಿ, ನಾನೆಂತಹ ವಿಪತ್ತಿಗೀಡಾದರೂ, ನನ್ನ ಸರ್ವಸ್ವ ನಾಶವಾದರೂ ಕ್ರೂರ ಸಮಾಜದ ಅನ್ಯಾಯವಾದ ಶಾಸನಕ್ಕೆ ಒಂದಿಷ್ಟು ಮಣಿಯದೆ ನನ್ನ ಹೃದಯದ ಪ್ರೇರೇಪಣೆಯಂತೆಯೇ ನಡೆಯುವ ಅಚಲ ನಿರ್ಧಾರಮಾಡಿರುವೆನು.

ಸು:—(ಬಹಳ ತಳಮಳಗೊಂಡು) ಭಟ್ರೇ, ಬೇಡ, ಬೇಡ! (ರಾಮಭಟ್ಟನ ಎರಡೂ ಕೈಗಳನ್ನು ಹಿಡಿದು ಮೊಣಕಾಲೂರಿ) ನನಗಾಗಿ ನೀವು ಈ ಮಹಾ ವಿಪತ್ತಿಗೊಳಗಾಗುವುದು ಸರಿಯಲ್ಲ. ಜಾತಿ ನೀತಿ ಭ್ರಷ್ಟರಾಗಿ ಸಮಾಜ ಬಹಿಷ್ಕೃತರಾಗುವಿರಿ. ನಿಮ್ಮ ಬಂಧುಬಳಗದವರು ನಿಮ್ಮನ್ನು ದೂರೀಕರಿಸಿ ತಿರಸ್ಕರಿಸುವರು. ತಂದೆಯವರು ನಿಮ್ಮನ್ನು ಮನೆಯಿಂದ ಹೊರಹಾಕಿ ಗತಿಗೋತ್ರವಿಲ್ಲದಂತೆ ಮಾಡುವರು. ಹೀನ ಜಾತಿಯವಳೂ, ಅಲ್ಪಳೂ, ಆದ ನನ್ನ ಪ್ರೇಮಕ್ಕಾಗಿ ನೀವೀ ರೀತಿ ಅಸಹನೀಯ ಸಂಕಷ್ಟಕ್ಕೀಡಾಗುವುದು ಯುಕ್ತವಲ್ಲ. ನನ್ನ ಬಂಧುಬಳಗ ಮತ್ತು ಸಮಾಜದ ಪೀಡೆಯೂ ನನಗೆ ತಾಳಲಾರದಾಗಿದೆ. ನಿಮ್ಮ ಪ್ರೇಮಾಮೃತ ಸೇವನೆಯಿಂದ ನನ್ನೀ ಜೀವನವನ್ನು ಪುನೀತಗೊಳಿಸುವ

ಆ ಭಾಗ್ಯವು ಈ ಹತಭಾಗಿನಿಗಿಲ್ಲ. ನನ್ನನ್ನು ನನ್ನಷ್ಟಕ್ಕೆ ಬಿಟ್ಟು ನಿಮ್ಮ ಜಾತಿಯ ಮನಮೆಚ್ಚಿದ ತರುಣಿಯೋರ್ವಳನ್ನಾರಿಸಿ, ವರಿಸಿ ಚಿರದಾಂಪತ್ಯ ಸುಖ ಮತ್ತು ಸತ್ಸಂತತಿ ಭಾಗ್ಯ ಪಡೆದು ಬಾಳಿರಿ. ನಾನು-(ಗದ್ಗದ ಕಂಠಳಾಗಿ ತುಸು ಹೊತ್ತು ಮಾತಾಡಲಾರದೆ ಆ ಮೇಲೆ ಬಹಳ ಪ್ರಯತ್ನದಿಂದ ಮಾತಾಡುವಳು.) ನಾನು ನನ್ನ ಹೃದಯವೇದಿಕೆಯಲ್ಲಿ ನಿಮ್ಮ ಪಾವನಮೂರ್ತಿಯನ್ನು ಪ್ರತಿಷ್ಠಿಸಿ, ಪೂಜಿಸಿ ಪೂಜಿಸಿ, ನಿಮ್ಮಾ ಕೆಲಕಾಲದ ಪ್ರೇಮಕಟಾಕ್ಷವನ್ನು ಸ್ಮರಿಸಿ ಸ್ಮರಿಸಿ ನನ್ನೀ ದೀನ ಬಾಳನ್ನು ಕೊನೆಗೊಳಿಸುವೆನು. ಇದೇ ನಮ್ಮಿಬ್ಬರ ಕೊನೆಯ ದರ್ಶನ. ಇದೇ ನಿಮಗೆ ನನ್ನ ವಿದಾಯ. (ರಾಮಭಟ್ಟನ ಕೈಗಳೆರಡನ್ನೂ ಚುಂಬಿಸಿ ಮುಖಕ್ಕೊತ್ತಿ ಹಿಡಿದು ಕಣ್ಣೀರ ಧಾರೆಯಿಂದ ತೋಯಿಸಿ ಜಗ್ಗನೆದ್ದು ಕೋಣೆಯಿಂದ ಹೊರ ಹೊಗಲುದ್ಯುಕ್ತಳಾಗುವಳು.)

ರಾ:—(ಒಮ್ಮೆಯೇ ಏರಿಬಂದ ಆವೇಗದಿಂದ ಕಂಠವು ರುದ್ಧವಾಗಿ ಎಷ್ಟೊಂದು ಪ್ರಯತ್ನಿಸಿದರೂ ಮಾತಾಡಲಾರದೆ ಕೋಣೆಬಿಟ್ಟು ಹೋಗುತ್ತಿರುವ ಸುಂದರಿಯ ಕೈಹಿಡಿದು ನಿಲ್ಲಿಸುವನು. ಒಂದೇ ಸವನೆ ಕಣ್ಣೀರಿಳಿದು ಬರುವುದು)

ಸು:—ಭಟ್ರೆ, ಬಿಡಿರಿ. ದಯವಾಡಿ ನನ್ನ ಕೈಬಿಡಿರಿ. ಹೋಗುವೆನು. ನಾನಿನ್ನು ಇಲ್ಲಿ ನಿಲ್ಲಬಾರದು.

ರಾ:—ಸುಂದರಿ, ನನ್ನ ಹೃದಯವು ನಿನ್ನನ್ನಗಲಲೊಪ್ಪಲಾರದು. ಅಂದ ಮೇಲೆ ನಾನು ನಿನ್ನನ್ನು ಹೇಗೆ ಹೋಗಬಿಡಲಿ? ಇದೋ, ನಿನ್ನ ಕೈಹಿಡಿದು ಪ್ರತಿಜ್ಞೆಮಾಡುವೆನು. ನನ್ನ ಪ್ರಾಣವೇ ಹೋಗುವಂತಾದರೂ ನಿನ್ನ ಹೊರತು ನಾನಿನ್ನಾರನ್ನೂ ಮದುವೆಯಾಗಲಾರೆನು. ನಾನು ಮನಸಾ ನಿನ್ನನ್ನೇ ವರಿಸಿರುವೆನು. ನನ್ನ ಹೃದಯದಲ್ಲಿ ಸ್ಥಾಪಿಸಲ್ಪಟ್ಟಿರುವ ನಿನ್ನ ಅಮಲ ಪ್ರತಿಮೆಯನ್ನು ಉರುಳಿಸುವ ಶಕ್ತಿಯು ಈ ಲೋಕದಲ್ಲಿ ಇನ್ನಾವುದಕ್ಕೂ ಇರಲಾರದು. ಸುಂದರಿ, ನನ್ನನ್ನು ತಂದೆಯು ಇಂದು ಮನೆಯಿಂದ ಹೊರಹಾಕಿರುವನು. ಊಟಕ್ಕೆ ಗತಿಯಿಲ್ಲದ ಉಳಕೊಳ್ಳಲು ನಿವಾಸವಿಲ್ಲದ ನಿರ್ಗತಿಕ ನಾನಿಂದು. ತಂದೆ, ಬಂಧುಬಳಗ, ಮನೆ, ಆಸ್ತಿಬದುಕು, ಜಾತಿ, ಆಚಾರ ಪದ್ಧತಿಗಳ ಬಂಧನದಿಂದೆಲ್ಲಾ

ನಾನಿಂದಿನಿಂದ ವಿಮುಕ್ತವಾದಂತಾಯಿತು. ನಾನಿನ್ನು ಮಂಗಳೂರಿಗೆ ಹೋಗಿ ಏನಾದರೂ ಉದ್ಯೋಗಪಡೆಯಲೆತ್ನಿಸುವೆನು. ಉದ್ಯೋಗ ದೊರೆತೊಡನೆಯೇ ನಿನ್ನನ್ನಲ್ಲಿಗೆ ಕರಸಿ ವಿವಾಹವಮಾಡಿಕೊಳ್ಳುವೆನು. ಮಂಗಳೂರಲ್ಲಿ ನಮಗೆ ಪ್ರೋತ್ಸಾಹವೀಯುವ ಸುಧಾರಕರೂ ಹಲವು ಮಂದಿ ಇರುವರು. ನೀನೂ ಅಲ್ಲಿಯ ಯಾವುದಾದರೊಂದು ಶಾಲೆಯಲ್ಲಿ ಅಧ್ಯಾಪಕಿಯಾಗಬಹುದು. ಈಗ ನಮ್ಮನ್ನಾವರಿಸಿ ಕಳುಬುತ್ತಿರುವ ಕಾರ್ಮುಗಿಲು ಇನ್ನು ಸ್ವಲ್ಪ ಕಾಲದಲ್ಲೇ ತೊಲಗಿ ನಿಜದಾಂಪತ್ಯಸುಖ ಸೂರ್ಯಪ್ರಕಾಶದಿಂದ ನಮ್ಮ ಜೀವನವು ಬೆಳಗುವಂತಾಗುವುದು ಸುಂದರಿ.

ಸು:—ದೇವರು ಆ ಕೃಪೆದೋರಿದರೆ ನನ್ನ ಭಾಗ್ಯೋದಯವೇ ಸರಿ.

ರಾ:—ನಮ್ಮ ಭಾಗ್ಯೋದಯವೆನ್ನು ಸುಂದರಿ. ನಿನ್ನಂತಹ ರಮಣೀಮಣಿಯನ್ನು ವರಿಸಿ ದಾಂಪತ್ಯಸುಖ ಪಡೆಯುವುದು ನನ್ನ ಭಾಗ್ಯೋದಯವಲ್ಲವೇ?

ಸು:—ನಿಮ್ಮದೇನು ಭಾಗ್ಯೋದಯ? ನನಗಿಂತ ಮಿಗಿಲಾದ ರಮಣಿಯರು ನಿಮ್ಮಂಥವರಿಗೆ ನೂರುಗಟ್ಲೆಯಲ್ಲಿ ದೊರೆತಾರು. ಆದರೆ ನನ್ನಂತಹ ಹೀನಜಾತಿಯವಳಿಗೆ, ನಿಮ್ಮ ಚಾಕರಿಯವಳ ಮಗಳಿಗೆ, ದೀನ ದರಿದ್ರಳಿಗೆ, ನಿಮ್ಮಂತಹ ಉಚ್ಚ ಜಾತಿಯ, ಶ್ರೀಮಂತ ಹಾಗೂ ವಿದ್ಯಾ ವಿನಯಸಂಪನ್ನ ವರನು ದೊರಕುವುದೆಂದರೆ ಅದೇನು ಸಾಮಾನ್ಯ ಭಾಗ್ಯವೇ? ನನ್ನ ಜನ್ಮಜನ್ಮಾಂತರದ—

ರಾ:—ಸುಂದರಿ ಸಾಕುಮಾಡು ನನ್ನ ಪ್ರಶಂಸೆ, ನಿನ್ನ ಪ್ರೇಮ ಪಾತ್ರನಾದ ನಾನು ನಿಜವಾಗಿಯೂ ಧನ್ಯನು.

ಸು:—ಇದೇನು ಮಾತು ನಿಮ್ಮದು? ನಾನೆಲ್ಲಿ? ನೀವೆಲ್ಲಿ? ನೀವು ನನ್ನ ಪ್ರೇಮದಿಂದ ಧನ್ಯರಾಗುವುದಾದರೂ ಹೇಗೆ? ನಿಮ್ಮ ಪ್ರೇಮ ಕಟಾಕ್ಷದಿಂದ ನಿಜವಾಗಿ ಧನ್ಯಳಾಗಿರುವವಳು ನಾನು.

ರಾ:—ನಾವಿಬ್ಬರೂ ಧನ್ಯರೆನ್ನುವ. ತರ್ಕಬೇಡ ಆ ವಿಷಯದಲ್ಲಿ. ಸುಂದರಿ, ನಾನು ಇಂದೇ ಮಂಗಳೂರಿಗೆ ಹೋಗುವೆನು. ಏನಾದರೂ ನೌಕರಿ ಪಡೆಯುವ ಪ್ರಯತ್ನಮಾಡುವೆನು. ನೀನು ಬಲು ಜಾಗರೂಕ

ಳಾಗಿರಬೇಕು. ತಂದೆಯು ಬಲು ಕ್ರೂರಿಯು. ಮುನಿದರೆಂದರೆ ಎಂತಹ ದುಷ್ಕೃತ್ಯವನ್ನಾದರೂ ಮಾಡ ಹೇಸರವರು. ಆ ಧೂರ್ತ ಪಟೇಲ ದುಗ್ಗಪ್ಪಶೆಟ್ಟಿಯು ಅವರ ಸಹಾಯಕನಾಗಿರುವನು. ಅವರಿಬ್ಬರೂ ಸೇರಿ ಏನು ಮಾಡುವರೆಂದು ಹೇಳಬರುವುದಿಲ್ಲ. ನಾನು ಬೇಗನೆ ನಿನ್ನನ್ನು ಮಂಗಳೂರಿಗೆ ಕರದೊಯ್ಯಲೆತ್ನಿಸುವೆನು.

ಸು:—ಅಂತೆಯೇ ದೇವರು ಅನುಗ್ರಹಿಸಲಿ. ನಾನೀಗ ಹೋಗು ವೆನು. ಕತ್ತಲಾಗುತ್ತಾ ಬಂತು.

ರಾ.—ನಿನಗೆ ಭೀತಿಯಾಗುವುದಾದರೆ ನಿನ್ನ ಮನೆಯವರೆಗೆ ನಾನೂ ಬರುವೆನು.

ಸು:—ಬೇಡ, ಬೇಡ. ಮೊದಲೇ ನಮ್ಮ ಕುರಿತು ನಿಂದೆಯ ನಾಲಗೆಗಳು ನಾನಾ ಕಥೆಗಳನ್ನು ಕಟ್ಟಿ ನಾಲ್ಕು ದಿಕ್ಕುಗಳಿಗೂ ಹಬ್ಬಿಸಿವೆ. ನಾವಿಬ್ಬರೂ ಒಟ್ಟಿಗೆ ಹೋಗುವುದನ್ನಾರಾದರೂ ಕಂಡರೆ, ಮೊದಲೇ ಸಂಗ್ರಹವಾಗಿರುವ ಸಿಡಿಮದ್ದಿಗೆ ಕಿಡಿಯೊಡ್ಡಿದಂತಾಗುವುದು. ನೀವು ಮೊದಲು ಹೋಗಿರಿ. ನಾನು ಅನಂತರ ಶಾಲೆಗೆ ಬಾಗಿಲು ಹಾಕಿ ಮನೆಗೆ ಹೋಗುವೆನು. ನನಗಾವ ಭೀತಿಯೂ ಇಲ್ಲ.

(ರಾಮುಭಟ್ಟನು ಪ್ರೀತಿಪೂರ್ವಕವಾಗಿ ಸುಂದರಿಯನ್ನೊಮ್ಮೆ ನೋಡಿ ಶಾಲೆಯ ಬಾಗಿಲಿಗೆ ಹೋಗಿ ಸುತ್ತಲೂ ನೋಡಿ ಪರೀಕ್ಷಿಸಿ ಹೋಗಿಬಿಡುವನು. ಅನಂತರ ಸ್ವಲ್ಪ ಸಮಯದ ಮೇಲೆ ಸುಂದರಿಯು ಶಾಲೆಯ ಬಾಗಿಲು ಹಾಕಿ ಮನೆಗೆ ಹೋಗುವಳು.)

ನೋಟ ೪.

(ದಾರಿಯ ಸೀನು. ವೆಂಕಟ್ರಮಣ ಭಟ್ಟನು ಅತ್ಯಂತ ವ್ಯಾಕುಲಚಿತ್ತ ನಾಗಿ ಪಟೇಲ ದುಗ್ಗಪ್ಪ ಶೆಟ್ಟಿಯ ಮನೆಗೆ ಹೋಗಿ ಬಹಳ ಹೊತ್ತು ಕಾದು ಕಾದು ಬೇಸತ್ತು ಹಿಂದೆ ಬರುವಾಗ ದಾರಿಯಲ್ಲಿ, ಮನೆಗೆ ಬರುವ ದುಗ್ಗಪ್ಪ ಶೆಟ್ಟಿಯನ್ನು ಸಂಧಿಸಿ ಅವರಿಬ್ಬರೊಳಗೆ ಮಾತುಕತೆ ನಡೆಯುವುದು.)

ದು:—ನಮಸ್ಕಾರ ಭಟ್ರೆ, ನಮಸ್ಕಾರ. ಎಲ್ಲಿಗೆ ಹೋಗಿದ್ದೀರಿ? ಮುಖವೇನು ಬಹಳ ಕಂದಿ ಹೋಗಿದೆ?

ವೆ:—ನಮಸ್ಕಾರ ಶೆಟ್ರೆ. ನಿಮ್ಮ ಮನೆಗೆ ಹೋಗಿ ಕಾದು ಕಾದು ಬೇಸತ್ತು ಹಿಂದೆ ಬರುವವನು ನಾನು. ಸರ್ವನಾಶವಾಯಿತು ಶೆಟ್ರೇ! ನಾವಿನ್ನೇನು ಮಾಡಿಯೂ ಫಲವಿಲ್ಲ. ನಾನಿನ್ನು ಇದ್ದು ಸತ್ತಂತೆಯೇ ಸರಿ.

ದು:—(ವಿಸ್ಮಿತನಾಗಿ) ಏನು, ಏನಾಯಿತು ಭಟ್ರೆ? ಇವತ್ತು ರಿಸಾಲು ಹೋಗದೆ ನಿರ್ವಾಹವಿಲ್ಲ ನೋಡಿ. ಆದರೆ ಇನ್ನೂ 200 ರೂಪಾಯಿ ವಸೂಲಾಗದೆ ಬಾಕಿ ಇದೆ. ಏನು ಮಾಡಿದರೂ ವಸೂಲಾಗು ವುದಿಲ್ಲ ನೋಡಿ. ದೊಡ್ಡ ವರ್ಗದಾರರಿಗೇನೇ ಮಾರಿ ಬಂಡಿದೆ ಕೊಡಲಿಕ್ಕೆ!

ವೆ:—ದುಗ್ಗಪ್ಪ ಶೆಟ್ರೇ, ಅವರು ತಾಯಿಮಗಳು ಕೂಡಿ ಮದ್ದು ಹಾಕಿಯೇ ನನ್ನ ಮಗನ ತಲೆ ಕೆಡಿಸಿರುವುದು ನಿಶ್ಚಯ. ಆ ಭಿಕಾರಿ ಣಿಯ ಹೊರತು ಇನ್ನಾವ ಆಶೆಯೂ ರಾಮನಿಗಿಲ್ಲೆಂಬುದೀಗ ಸಿದ್ಧವಾ ಯಿತು. ಅವನೀಗ ಮನೆಮಾರು, ಆಸ್ತಿಬದುಕು, ಬಂಧುಬಳಗ, ಜಾತಿ ನೀತಿಯನ್ನೆಲ್ಲಾ ತ್ಯಜಿಸಿಬಿಟ್ಟು, ಆ ನೀಚಳೊಬ್ಬಳನ್ನೇ ತನ್ನ ಜೀವನದ ಸರ್ವಸ್ವವಾಗಿ ಪರಿಗಣಿಸಿ ನನ್ನನ್ನು ಧಿಕ್ಕರಿಸಿ ಹೊರಟು ಹೋಗಿರುವನು.

ದು:—ಏನು, ಮನೆ ಬಿಟ್ಟು ಹೋಗಿರುವರೇ? ಹಾಗಾದರೆ ಅವರ ತಲೆ ಕೆಡಿಸಿರುವರೆಂಬುದು ನಿಶ್ಚಯ. ಅವಳದೇ ಭ್ರಾಂತಿ ಹಿಡಿದು ಬಿಟ್ಟಿದೆ ಅವರಿಗೆ. ಮದ್ದು ಹಾಕಿದರೆ ಹಾಗೆಯೇ ಆಗುತ್ತದೆ ಭಟ್ರೆ.

ವೆ:—ಎಷ್ಟು ಒಳ್ಳೇ ಹುಡುಗನಾಗಿದ್ದ ಶೆಟ್ರೆ ನನ್ನ ಮಗ! ಏನಾದ ರೊಂದು ದೋಷವಿತ್ತೇ ಅವನಲ್ಲಿ? ಎಷ್ಟು ಬುದ್ಧಿವಂತನಾಗಿದ್ದ! ಬಿ. ಎ. ಯ ವರೆಗೆ ಒಂದೇ ಒಂದು ಕ್ಲಾಸಿನಲ್ಲಾದರೂ ಫೈಲಾಗಿದ್ದನೇ? ಆ ಡಾಕ್ಟರ್ ನರಹರಿರಾಯರು, ಚಿನ್ನದಂತಹ ಹುಡುಗಿಯೊಂದಿಗೆ ರೂ. 2,000 ವರದಕ್ಷಿಣೆ ಕೊಟ್ಟು ವಕಾಲತು ಕಲಿಸುವ ವೆಚ್ಚವನ್ನೆಲ್ಲಾ ತಾನೇ ವಹಿಸಲು ಸಿದ್ಧರಿದ್ದರು. ನನ್ನನ್ನು ಎಷ್ಟೊಂದು ಒತ್ತಾಯ ಮಾಡಿಕೊಂಡಿದ್ದರವರು! "ನೋಡುವ, ನೋಡುವ" ಎಂದೇ ಸಮಯ ಕಳೆಯುತ್ತಿದ್ದೆ ನಾನು. ವರದಕ್ಷಿಣೆ ಸ್ವಲ್ಪ ಹೆಚ್ಚು ಪಡೆಯಬೇಕೆಂಬ ಆಶೆ ಯಿಂದಿದ್ದೆ. ಈಗ ಸರ್ವನಾಶವಾಯಿತು ಶೆಟ್ರೆ! ಇನ್ನು ನಾನೇನು ಮಾಡಲಿ? ನನ್ನ ಒಬ್ಬನೇ ಒಬ್ಬ ಮಗನ ಗತಿ ಹೀಗಾಯಿತಲ್ಲಾ! ನಾನಿನ್ನು ಬದುಕಿ

ಫಲವೇನು? ಅಯ್ಯೋ, ನನ್ನ ದುರದೃಷ್ಟವೇ! ನನ್ನ ಹೆಂಡತಿಯು ಬದಲಿಗೆ ನಾನೇ ಸತ್ತು ಹೋಗುತ್ತಿದ್ದರೆ ಎಷ್ಟೊಂದು ಚೆನ್ನಾಗಿತ್ತು! (ಬಾಯ್ಬಿಟ್ಟು ಅಳುವನು.)

ದು:—ಇದೇನು ಭಟ್ರೆ, ದಾರಿಯಲ್ಲಿ ನಿಂತು ಹೆಂಗಸಿನಂತೆ ಅಳುತ್ತಿರುವಿರಿ? ನಿಮ್ಮ ಮಗನು ಹೋದಂತೆ ಹಿಂದೆ ಬರುವ ಹಾಗೆ ಮಾಡುವ ಜವಾಬ್ದಾರಿ ನನ್ನದು. ನೀವು ಆ ಕುರಿತು ಒಂದಿಷ್ಟಾದರೂ ಚಿಂತೆ ಕಟ್ಟಿಕೊಳ್ಳಬೇಕಾಗಿಲ್ಲ.

ವೆ:—(ಉತ್ತರೀಯದೊಂದು ತುದಿಯಿಂದ ಕಣ್ಣೀರೊರಸಿ) ಇನ್ನು ನೀವೇನು ಮಾಡುವುದು ಶೆಟ್ರೆ? ನನ್ನ ಮಗ ಕೈತಪ್ಪಿ ಹೋದ ಮೇಲೆ ಇನ್ನೇನು ಮಾಡಿದರೂ ಪ್ರಯೋಜನವೇನು? ಆ ನೀಚಳಿಗಿನ್ನೇನಾದರೇನು? ನಿಮ್ಮದು ಬಡಾಯಿಯೇ ಹೊರತು ಕೆಲಸವೇನೂ ನಡಿಯುವ ಹಾಗಿಲ್ಲ.

ದು:—ಹಾಗೆಲ್ಲಾ ಫಕ್ಕನೆ ಮಾಡಲಿಕ್ಕೆ ಅದೇನೂ ಊಟ ಮಾಡಿದಂತಲ್ಲ ಭಟ್ರೆ. ಕಡೆಗೆಲ್ಲಿಯಾದರೂ ಸಿಕ್ಕಿಬಿದ್ದರೆ ಜೈಲಿಗೆ ಹೋಗುವುದು ನಾವು. ಮೊನ್ನೆ ಶಾಲೆಯಲ್ಲಿ ಅವರಿಬ್ಬರೂ ಮಾತಾಡುತ್ತಿದ್ದಾಗ ಸುಲಭವಾಗಿ ನಮ್ಮ ಕೆಲಸ ಮಾಡಿಬಿಡಬಹುದಿತ್ತು. ಆದರೆ ನೀವದಕ್ಕೊಪ್ಪಲಿಲ್ಲ. ಆಗ ನಿಮ್ಮ ಮಗನಿಗೇನಾಗುವುದೋ ಎಂದು ಹೆದರಿಹೋದಿರಿ. ಈಗ ಹೆಂಗಸಿನಂತೆ ಅಳುತ್ತಿದ್ದೀರಿ.

ವೆ:—ಶೆಟ್ರೇ, ಸಿಟ್ಟಾಗಬೇಡಿ. ನನಗೀಗ ತಲೆಯೇ ಸಮವಿಲ್ಲದಂತಾಗಿದೆ. ಏನಾದರೂ ಮಾಡಿ ನನ್ನ ಮಗನು ನನ್ನ ಬಳಿಗೆ ಪುನಹ ಬರುವಂತಾದರೆ ನೀವು ಕೇಳಿದಷ್ಟು ಹಣ ಕೊಡುವೆನು.

ದು:—ಅದೇನೂ ಕಷ್ಟದ ಕೆಲಸವಲ್ಲ ಭಟ್ರೇ. ಸುಂದರಿಗೆ ಬೇರೊಂದು ಮದುವೆಮಾಡಿಸಿಬಿಟ್ಟರೆ ರಾಮಭಟ್ಟರು ತಾನಾಗಿಯೇ ಬರುವರು.

ವೆ:—ಸುಂದರಿಗೆ ಮದುವೆಮಾಡಿಸುವುದಾದರೂ ಹೇಗೆ ಶೆಟ್ರೇ? ಅವಳೇನು ಸಾಮಾನ್ಯಳಲ್ಲ. ಪ್ರಾಣವಾದರೂ ಕೊಟ್ಟಾಳೇ ಹೊರತು ಅನ್ಯರನ್ನು ಮದುವೆಯಾಗಲು ಎಂದಿಗೂ ಒಪ್ಪಳು.

ದು:—ಸುಂದರಿಯನ್ನೊಪ್ಪಿಸುವುದೊಂದು ದೊಡ್ಡ ಕೆಲಸವೇ?

ವೇ:—ನಿಮ್ಮಿಂದದು ಸಾಧ್ಯವೇ ಇಲ್ಲ.

ದು:—ದುಗ್ಗಪ್ಪಶೆಟ್ಟಿಗೆ ಈ ಊರಲ್ಲಿ ಸಾಧ್ಯವಾಗದ ಕೆಲಸವೆಂಬುದಿರುವುದೇ ಭಟ್ರೆ? ಏನು ಮಾತಿದು ನಿಮ್ಮದು?

ವೇ:—ನೀವೆಷ್ಟು ಪ್ರಯತ್ನಿಸಿದರೂ ಸುಂದರಿಗೆ ಮದುವೆಮಾಡಲು ನಿಮಗೆ ಸಾಧ್ಯವೇ ಇಲ್ಲ. ರಾಮುನಿಗೂ ಅವಳಿಗೂ ಎಂತಹ ಪ್ರೇಮವಿರುವುದೆಂದು ನಿಮಗೆ ಗೊತ್ತಿಲ್ಲ. ರಾಮನು ಸುಂದರಿಗಾಗಿ ಸರ್ವಸ್ವವನ್ನೂ ತೊರೆದುಬಿಟ್ಟಂತೆಯೇ ಸುಂದರಿಯೂ ರಾಮುನಿಗಾಗಿ ಪ್ರಾಣವನ್ನಾದರೂ ಕೊಡಬಲ್ಲಳೇ ಹೊರತು ಇನ್ನಾರನ್ನೂ ಮದುವೆಯಾಗಲಾರಳು. ಇದು ಖಂಡಿತ.

ದು:—ಉಪಾಯವೊಂದಿದ್ದರೆ ಎಂತಹ ಕೆಲಸವನ್ನಾದರೂ ಕೈಗೂಡಿಸಿಕೊಳ್ಳಬಹುದು ಭಟ್ರೇ. ನೀವು ಕಂಗೆಡಬೇಡಿರಿ. ಇನ್ನು ಸ್ವಲ್ಪ ಸಮಯದಲ್ಲಿಯೇ ನಿಮ್ಮ ಮಗನು ಮನೆಗೆ ಬಂದು ನೀವು ಹೇಳಿದಂತೆ ಕೇಳುವಂತಾದರೆ ಸರಿಯಲ್ಲವೇ ನಿಮಗೆ?

ವೇ:—ಅಷ್ಟಾದರೆ ಸರಿ ಶೆಟ್ರೆ. ಆದರೆ ನನಗೇಕೋ ಸಂದೇಹವೆನಿಸುವುದು.

ದು:—ಯಾವ ತಂತ್ರದಿಂದಾದರೂ, ಕಡೆಗೆ ಬಲಾತ್ಕಾರದಿಂದಾದರೂ ಸುಂದರಿಯನ್ನು ಯಾರಿಗಾದರೊಬ್ಬನಿಗೆ ಮದುವೆ ಮಾಡಿಸುವುದು ನನ್ನ ಕೆಲಸ. ಇಷ್ಟರಲ್ಲೇ ಅವಳನ್ನು ನಾನು ನನ್ನ ವಶಪಡಿಸಿಕೊಳ್ಳದೆ ಬಿಡುತ್ತಿದ್ದೆನೇ? ನಿಮ್ಮ ಮಗ ಇದ್ದಾರೆಂದು ಬಿಟ್ಟುಬಿಟ್ಟಿದ್ದೆ. ಈಗ ಅವರು ಹೋದುದು ಒಳ್ಳೇದೇ ಆಯಿತು. ಅವರಿದ್ದಿದ್ದರೆ ನನ್ನಿಚ್ಛೆಯಂತೆ 'ಪ್ಲೇನ್' ನಡಿಸಲಾಗುತ್ತಿದ್ದಿಲ್ಲ. ಆದರೆ ಇದಕ್ಕೆಲ್ಲಾ ಕೈಬಿಟ್ಟು ಹಣ ವ್ಯಯಮಾಡಲು ನೀವು ಸಿದ್ಧರಿರಬೇಕು. ಹಣಕ್ಕಾಶೆ ಮಾಡಿದರೆ ಕೆಲಸವಾಗಲಾರದು.

ವೇ:—ನನ್ನ ಮಗನ ತಲೆ ಕೆಡಿಸಿದುದಕ್ಕಾಗಿ ಆ ನೀಚಳಿಗೆ ತಕ್ಕ ಪ್ರತೀಕಾರ ಮಾಡಲೇ ಬೇಕು. ಅದಕ್ಕಾಗಿ ನಾನು ಎಷ್ಟು ಖರ್ಚು ಮಾಡಲಿಕ್ಕೂ ಸಿದ್ಧನಿದ್ದೇನೆ ಶೆಟ್ರೇ.

ದು:—ಮತ್ತೇನು? ಆ ಸುಂದರಿಯ ಮಾತಂತಿರಲಿ, ಅವಳ ಮನೆಯವರೇ ಈ ಊರಲ್ಲಿ ನಿಲ್ಲದಂತೆ ಮಾಡಿದರೆ ಸೈಯಲ್ಲ ನಿಮಗೆ?

ವೆ:—ಆಷ್ಟಾದರೆ ಸರಿ. ಆ ಸೋಮನು ನಿಮ್ಮನ್ನೂ ನನ್ನನ್ನೂ ಸಿಕ್ಕಿದವರೊಡನೆಲ್ಲಾ ಬೈದು ಭಂಗಿಸುತ್ತಿದ್ದಾನಂತೆ. ಅಹಂಕಾರಿಯವ.

ದು:—ನೋಡುತ್ತೇನೆ ಆವನ ಅಹಂಕಾರ ಎಲ್ಲಿ ವರೆಗೆ ಬರುತ್ತದಂತ! ಏನೋ ಸ್ವಲ್ಪ ಮೂಲಗೇಣಿ ಸ್ಥಳವಿದೆ; ತನಗಾರ ಹಂಗೂ ಇಲ್ಲೆಂದು ಅಹಂಕಾರ ಬೋಳಿಮಗನಿಗೆ! ಊರೂರು ಅಲೆದು ಬಿಕ್ಕೆ ಬೇಡುವಂತೆ ಮಾಡಿದರೆ ಸೈಯಲ್ಲ ನಿಮಗೆ!

ವೆ:—ಆವನ ಸೊಂಟವನ್ನೇ ಮುರಿಸಿ ಹಾಕಬೇಕು ಶೆಟ್ರೇ! ನನ್ನ ಮಗ ಆವನ ತಂಗಿಯ ತಲೆಗೆಡಿಸಿದುದಂತೆ! ಏನು ಹೇಳಬೇಕು ಶೆಟ್ರೆ?

ದು:—ಹೇಳುವುದೇನು? ಕೊಡಬೇಕಿತ್ತು ಮುಸುಡಿಗೆ ಹಲ್ಲೆಲ್ಲ ಉದುರಿಬೀಳುವ ಹಾಗೆ!

ವೆ:—ಆದಕ್ಕೆಲ್ಲಾ ನೀವಾಗಬೇಕು. ನಮ್ಮಿಂದಾಗುವುದೇ ಶೆಟ್ರೆ?

ದು:— ನಿಮಗಾವ ಚಿಂತೆಯೂ ಬೇಡ ಭಟ್ರೆ! ನನಗೀಗ ಸ್ವಲ್ಪ ಹಣ ಬೇಕು ನೋಡಿ. ಕನಿಷ್ಠಪಕ್ಷ ೩೦೦ ರೂಪಾಯಿಯಾದರೂ ಈಗ ಆಗತ್ಯ ಬೇಕು. ತೀರ್ವೆ ಎಲ್ಲ ವಸೂಲಾದೊಡನೆಯೇ ಹಿಂದೆ ಕೊಡುತ್ತೇನೆ.

ವೆ:—೩೦೦ ರೂಪಾಯಿ! ಎಲ್ಲಿಂದ ಶೆಟ್ರೆ?

ದು:—ಏನಾದರೂ ಮಾಡಿ ಕೊಡದೆ ನಿರ್ವಾಹವಿಲ್ಲ. ಮರ್ಯಾದೆ ಹೋಗುವ ಕಾಲ ಬಂದಿದೆ ನೋಡಿ. ನಿಮ್ಮ ಕೆಲಸವನ್ನೆಲ್ಲಾ ಆದಷ್ಟು ಬೇಗಮಾಡಿ, ನಿಮ್ಮ ಮಗನು ಹೆಚ್ಚೆಂದರೆ ಇನ್ನೊಂದು ತಿಂಗಳಲ್ಲಿಯೇ ಪಶ್ಚಾತ್ತಾಪಪಟ್ಟು, ಹೋದಂತೆ ಹಿಂದೆ ಬಂದು ನಿಮ್ಮೊಡನೆ ಕ್ಷಮೆ ಬೇಡುವಂತೆ ಮಾಡುವ ಕೆಲಸ ನನ್ನದು.

ವೆ:—ನನ್ನ ಕೈಯಲ್ಲೀಗ ಏನೂ ಇಲ್ಲ ಶೆಟ್ರೆ, ಮತ್ತೆ ನೋಡುವ.

ದು:—ನನ್ನ ಮರ್ಯಾದೆ ಹೋಗುವ ಸಂದರ್ಭ ಬಂದಿರುವಾಗ ಮತ್ತೆ ನೋಡುವ ಅಂದರೆ ಹೇಗೆ ಭಟ್ರೆ? ಎಷ್ಟು ಹಣ ಬೇಕಾದರೂ ನಾನು ಕೊಡುತ್ತೇನೆ; ನನ್ನ ಕೆಲಸಮಾಡಿಕೊಡಬೇಕೆಂದು ಹೇಳಿದವ

ರಲ್ಲವೇ ನೀವು? ನನಗೆ ಇಷ್ಟರಲ್ಲೇ ಎಷ್ಟು ಖರ್ಚಾಯಿತೆಂದು ಗೊತ್ತಿದೆಯೇ ನಿಮ್ಮ ಕೆಲಸಕ್ಕಾಗಿ? ಇವತ್ತು ನೀವು ರೂಪಾಯಿ ಕೊಡದಿದ್ದರೆ ನನಗೂ ನಿಮಗೂ ಮುಗಿಯಿತು ಮತ್ತೆ!

ವೆ:—ಶೆಟ್ರೆ, ನನ್ನ ಕೈಯಲ್ಲೀಗ ನಗ್ದಿಯಾಗಿ ಒಂದು ಪೈ ಕೂಡಾ ಇಲ್ಲ ನೋಡಿ. ಮೊನ್ನೆ ಕೇಶವ ಭಟ್ರು ಏನೋ ಒಂದು ಕೆಲಸಕ್ಕಾಗಿ ರೂ. 200ನ್ನು ನನ್ನ ವಶ ಕೊಟ್ಟಿದ್ದರು. ಅದನ್ನು ಬೇಕಾದರೆ ಕೈಕಡವಾಗಿ ಕೊಡುತ್ತೇನೆ. ನನ್ನ ಕೆಲಸದ ಬಗ್ಗೆ ನೀವು ಮಾಡುವ ಖರ್ಚಿನ ಲೆಕ್ಕವನ್ನೆಲ್ಲಾ ಒಂದು ಪೈ ಕೂಡ ಬಿಡದೆ ಸರಿಯಾಗಿ ಇಡಿರಿ ಶೆಟ್ರೆ. ಅದನ್ನೆಲ್ಲಾ ನಾನು ಕೊಡುತ್ತೇನೆ. ಮಾತುಕೊಟ್ಟ ಮೇಲೆ ಕೊಡದಿರುವವನು ನಾನಲ್ಲ. ನನ್ನ ಕೆಲಸವಾಗಲಿ, ನಿಮ್ಮನ್ನು ಸಂತೋಷಪಡಿಸುವ ಕೆಲಸ ನನ್ನದು.

ದು:—ನೋಡುವ. ನಿಮ್ಮನ್ನು ಪರೀಕ್ಷಿಸುವ ಸಮಯ ದೂರವಿರಲಾರದು. ನಡಿಯಿರಿ, ಹೋಗುವ ಮನೆಗೆ. ಆ ಇನ್ನೂರು ರೂಪಾಯಿಯನ್ನಾದರೂ ಕೊಡಿರಿ.

ವೆ:—ಈಗಲೇ ಬೇಕೇ ಶೆಟ್ರೆ? ನಾಲ್ಕೈದು ದಿವಸಗಳಲ್ಲಿ ಹಿಂದೆ ಕೊಡಬೇಕು. ನನ್ನ ಮರ್ಯಾದೆ ಹೋದೀತು ಮತ್ತೆ!

ದು:—ಆಯ್ತು ಭಟ್ರೆ, ಹೋಗುವ. ನಿಮಗಾ ವಿಷಯದಲ್ಲಿ ಸಂದೇಹವೇ ಬೇಡ. (ಇಬ್ಬರೂ ವೆಂಕಟ್ರಮಣ ಭಟ್ಟನ ಮನೆಗೆ ಹೋಗ್ತವರು.)

ನೋಟ ೫

(ತೆಂಗಿನ ತೋಟ. ಸುಂದರಿಯು ಸಂಜೆ ರಾಮ ಭಟ್ಟನಿಂದ ಬಂದ ಕಾಗದವೊಂದನ್ನು ಮನೆಯ ಬಳಿಯ ತೆಂಗಿನ ತೋಟದೊಂದು ಮೂಲೆಗೆ ಹೋಗಿ ಗುಪ್ತವಾಗಿ ಓದುತ್ತಾ ಕಣ್ಣೀರಿಡುವಳು.)

(ಲಾಗಿರೋಹೋ ಮನರಾವ್—ಚರಣಸೇ ಎಂಬಂತೆ)

ತ್ಯಾಗ ಸರ್ವಸ್ವವಿದು—ವಿಫಲವು ॥
ಭಾಗ್ಯವಿಹೀನೆಯ ಪ್ರೇಮದೀಕ್ಷೆಯೊಳು ॥ ತ್ಯಾಗ ॥

ಜನುವಾಂತರದ-ಸಂಚಿತ ಪುಣ್ಯದಿಂ !
ವಂಚಿಸಿಹನು ವಿಧಿ-ದುರ್ದೈವಿಯನು ॥ ತ್ಯಾಗ ॥

ಪಾಪಿನಿ ಯೆನಗೆ-ಪಾವನ ಪ್ರೇಮದ ।
ಯೋಗವಿದೇತಕೆ-ಮೃಗಜಲವಕಟ ॥ ತ್ಯಾಗ ॥

(ಲಕ್ಷ್ಮಿಯು ಸದ್ದಿಲ್ಲದೆ ಹಿಂದಿನಿಂದ ಬಂದು ಸುಂದರಿಯು ಕೈಯಲ್ಲಿದ್ದ ಕಾಗದವನ್ನು ಫಕ್ಕನೆ ಎಳೆದುಕೊಂಡು ಓಡುವಳು. ಸುಂದರಿಯು ಅವಳ ಬೆನ್ನಟ್ಟುವಳು.)

ಲಕ್ಷ್ಮಿ:—(ತೋಟದ ಇನ್ನೊಂದು ಮೂಲೆಗೋಡಿ ನಿಂತು) ದೂರ ನಿಲ್ಲು, ಹುಂ, ಒಂದು ಹೆಜ್ಜೆ ಮುಂದಿಟ್ಟೆಯಾದರೆ ಜಾಗ್ರತೆ! ಈ ಕಾಗದವನ್ನೀಗಲೇ ಹರಿದು ಹಾಕುವೆನು!

ಸುಂದರಿ:—(ದೂರದಲ್ಲೇ ನಿಂತು) ಯಾವಾಗಲೂ ಹುಡುಗಾಟಿಕೆಯೇ ಲಕ್ಷ್ಮಿ? ಇತ್ತ ಕೊಡು ಕಾಗದ.

ಲ:—ಇದು ಯಾರ ಕಾಗದ ಹೇಳು.

ಸು:—ನೀನು ಅಣ್ಣನೊಡನೆ ಹೇಳುವೆ. ಅವನು ಮತ್ತೆ ದೊಡ್ಡ ಗಲಾಟೆ ಮಾಡುತ್ತಾನೆ.

ಲ:—ಅಲ್ಲ. ನಾನವರೊಡನೆ ಹೇಳುವುದಿಲ್ಲ. ರಾಮುಭಟ್ಟರ ಕಾಗದವಲ್ಲವೇ? ಏನು ಬರೆದಿದ್ದಾರೆ?

ಸು:—ಹೌದು. ಅವರಿಗಿನ್ನೂ ಎಲ್ಲಿಯೂ ಕೆಲಸ ಸಿಗಲಿಲ್ಲವಂತೆ. ಬಹಳ ಕಷ್ಟದಲ್ಲಿದ್ದಾರಂತೆ.

ಲ:— ಪಾಪ, ಬಹಳ ಕಷ್ಟದಲ್ಲಿ ಬಿದ್ದರವರು. ಅವರಿಗಿನ್ನಾರು ಖರ್ಚಿಗೆ ಕೊಡುವರು? ಯಾವಾಗ ಬರುವರಂತೆ?

ಸು:—ಎಲ್ಲಿಗೆ?

ಲ:—ನಿನ್ನನ್ನು ನೋಡಲಿಕ್ಕೆ! (ಮೃದುಹಾಸ ಬೀರುವಳು).

ಸು:—(ಫಕ್ಕನೆ ಹತ್ತಿರ ಸರಿದು ಕಾಗದವನ್ನು ಸೆಳಕೊಂಡು ಹೋಗತೊಡಗುವಳು.)

ಲ:—(ಸುಂದರಿಯ ಸೆರಗು ಹಿಡಿದು ನಿಲ್ಲಿಸಿ) ಹೇಗಾದರೂ ರಾಮುಭಟ್ಟರಿಗೆ ಮಂಗಳೂರಲ್ಲೊಂದು ಕೆಲಸ ದೊರೆತು ನಿನ್ನನ್ನವರು ಕರ

ದೊಯ್ದು ಮದುವೆಯಾಗುತ್ತಿದ್ದರೆ ಎಷ್ಟು ಒಳ್ಳೇದಾಗುತ್ತಿತ್ತು ಸುಂದರಿ? ಮಂಗಳೂರಲ್ಲಿ ಜಾತಿಜಾತಿಗಳೊಳಗೆ ಮದುವೆಯಾಗುವುದಂತೆ. ಅಲ್ಲಿ ಜಾತಿಭೇದವಿಲ್ಲವಂತೆ.

ಸು:— ಆ ಭಾಗ್ಯವು ಈ ಹತಭಾಗಿನಿಗೆಲ್ಲಿಂದ ಬರಬೇಕು ಲಕ್ಷ್ಮಿ? ವೃಥಾ ಅವರು ನನ್ನಂತಹ ಪಾಪಿಯ ಪ್ರೇಮಕ್ಕೆ ಕಟ್ಟುಬಿದ್ದು ಘೋರ ವಿಪತ್ತಿಗೊಳಗಾಗಿರುವರು. ಸರ್ವಸ್ವವನ್ನೂ ತ್ಯಾಗಮಾಡಿ ಹೊಟ್ಟೆ ಬಟ್ಟೆಗೆ ಗತಿಯಿಲ್ಲದೆ ನಿರ್ಗತಿಕರಾಗಿರುವರು. ನನ್ನ ಸಂಗದೋಷದ ಫಲವಲ್ಲವೆ ಲಕ್ಷ್ಮಿ ಇದು? (ಕಂಬನಿತುಂಬಿದ ಕಂಗಳನ್ನು ಸೆರಗಿಂದೊರಸಿಕೊಳ್ಳುವಳು.)

ಲ:—ಸುಂದರಿ, ಅದೇಕೆ ಹಾಗೆನ್ನುವೆ? ಎಂತಹ ಕಷ್ಟವಾದರೂ ಒಂದಲ್ಲೊಂದು ದಿನ ಕೊನೆ ಹೊಂದದಿರುವುದೇ? ರಾಮಭಟ್ಟರಿಗೇನಾದರೂ ಉದ್ಯೋಗ ದೊರೆತರೆ ಒಮ್ಮೆಯೇ ನಿನ್ನ ಭಾಗ್ಯೋದಯವಾಗುವುದಿಲ್ಲವೇ? ತಾಳಲು ಕಲಿತರೆ ಮಾತ್ರ ಸುಗಮವಾಗಿ ಬಾಳಬಹುದು ಸುಂದರಿ.

ಸು:— ಈ ಕಷ್ಟ ಕೊನೆಗೊಳ್ಳದಿದ್ದರೂ ಸಮ್ಮನ್ನಾದರೂ ಅದು ಕೊನೆಗೊಳಿಸದಿರುವುದೇ ಲಕ್ಷ್ಮೀ? ಈ ಕಾಲದಲ್ಲಿ ಅವರಿಗೆ ಉದ್ಯೋಗ ದೊರೆಯುವುದಾದರೂ ಎಲ್ಲಿಂದಲೋ? ನಾನೊಬ್ಬಳು ಸಾಯುತ್ತಿದ್ದರೆ ಎಲ್ಲವೂ ಸರಿಯಾಗುತ್ತಿತ್ತು. ನನ್ನಿಂದಾಗಿ ಎಷ್ಟು ಮಂದಿ ಕಷ್ಟಕ್ಕೊಳಗಾಗಿರುವರು! ಎಂತಹ ಪೀಡೆಯನ್ನೆಲ್ಲಾ ನೀವೀಗ ತಾಳಿಕೊಳ್ಳಬೇಕಾಗಿರುವುದು! ಎಲ್ಲಕ್ಕಿಂತಲೂ ಅಣ್ಣನ ಪೀಡೆಯೇ ಈಗ ಅಸಹನೀಯವಾಗಿದೆ. ದುಗ್ಗಪ್ಪ ಶೆಟ್ರ ಬಂಟ, ಶತಕೇಡಿ ಬಂಟಪ್ಪನನ್ನು ನಾನು ಮದುವೆಯಾಗುವಂತೆ ನಿರ್ಬಂಧಿಸುತ್ತಿರುವನವನು. ಲಕ್ಷ್ಮಿ, ನಾನೇನು ಮಾಡಲಿ? ನೀನಾದರೂ ನಿನ್ನ ಗಂಡನೊಡನೊಂದು ಮಾತು ಹೇಳಬಾರದೇ? ಈಗೀಗ ತಾಯಿಯೂ ನಾನೂ ಅವನೊಡನೆ ಬಾಯ್ಬಿಟ್ಟು ಮಾತಾಡಲಿಕ್ಕೇ ಇಲ್ಲ. ಹೊಡಿಯಲಿಕ್ಕೇ ಬರುವನು. ನಾನು ಮದುವೆಯಾಗದಿದ್ದರೆ ಬಲಾತ್ಕಾರದಿಂದಾದರೂ ಮದುವೆ ಮಾಡಿಸುವನಂತೆ. ಅಹ, ಅಣ್ಣನು ಹೀಗಾಗುವನೆಂದು ಯಾರು ನೆನಸಿದ್ದರು ಲಕ್ಷ್ಮಿ! ಎಷ್ಟು

ಒಳ್ಳೆಯವನಾಗಿದ್ದನವ! ಈಗೆಷ್ಟು ಕೆಟ್ಟುಹೋಗಿದ್ದಾನೆ ಆ ದುಷ್ಟಜನರ ಬಲೆಗೆ ಬಿದ್ದು! ಇದಕ್ಕಿಂತ ಹೆಚ್ಚಿನ ದುರ್ದೈವವಾದರೂ ಇದೆಯೋ ಲಕ್ಷ್ಮೀ! ದುರ್ವಿಧಿಯು ನಮ್ಮನ್ನು ಕೈತೊಳೆದು ಬೆನ್ನು ಹಿಡಿದಿರುವುದಲ್ಲವೇ?

ಲ:—(ಸುಂದರಿಯ ಕಣ್ಣೀರೊರಸಿ ಸಂತೈಸಿ) ನಾನೇನು ಹೇಳಲಿ? ನನ್ನ ಮಾತನ್ನವರು ಕೇಳುವರೇ? ಬಾಯ್ಬಿಟ್ಟು ಹೇಳಲಾರದ ಅವಸ್ಥೆ ನನ್ನದು ಸುಂದರಿ. ಅವರು ರಾತ್ರಿ ಬಂದು ಕೊಡುವ ಉಪಟಳವನ್ನು ಹೇಳಿತೀರದು. (ಥರಥರನೆ ಸುರಿದು ಬರುವ ಕಣ್ಣೀರನ್ನು ಸೆರಗಿಂದೊರಸಿಕೊಳ್ಳುವಳು) ನಿನ್ನೆ ಮಗುವನ್ನು ಕತ್ತು ಹಿಸುಕಿ ಕೊಂದೇ ಬಿಡುತ್ತಿದ್ದರು! ನಾನು, ನಿರುಪಾಯಳಾಗಿ ನನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಅವರ ಹಿಡಿತದಿಂದ ಮಗುವನ್ನು ತಪ್ಪಿಸಿದೆ ಆಗ ಮಗುವನ್ನು ಬಿಟ್ಟು ನನ್ನ ಕುತ್ತಿಗೆ ಹಿಡಿದೊತ್ತಿದರು; ಹಿಡಿದು ಚೆನ್ನಾಗಿ ಗುದ್ದಿದರು.

ಸು:—ಲಕ್ಷ್ಮೀ, ಸಾಕುಮಾಡು, ನಾನು ಕೇಳಲಾರೆ! ನೀನು ಈಗೀಗ ಕ್ಷೀಣವಾಗುತ್ತಿರಲು, ನಿನ್ನ ಮೊದಲಿನ ಉತ್ಸಾಹ, ಚಟುವಟಿಕೆಯೆಲ್ಲಾ ದಿನೇದಿನೇ ಕುಂದುತ್ತಿರಲು ಇದೇ ಕಾರಣವಲ್ಲವೇ? ಇಷ್ಟರವರೆಗೂ ನೀನು ಎಲ್ಲವನ್ನೂ ಗುಟ್ಟನಲ್ಲಿಟ್ಟುಕೊಂಡಿದ್ದೆಯಲ್ಲವೇ ಲಕ್ಷ್ಮೀ? ಅಹ, ನಮ್ಮ ಸಮಾಜದಲ್ಲಿ ಸ್ತ್ರೀಯ ಬಾಳೆಂಬುದು ಅದೆಷ್ಟು ಕರುಣಾಜನಕವಾದುದು! ಅವಳೆಂತಹ ಯಾತನೆಗಳನ್ನೆಲ್ಲಾ ಮೌನದ ಮರೆಯಲ್ಲಿ ತಾಳಿ ನರಳಿಕೊಂಡಿರಬೇಕು! ಈ ಯಮಯಾತನೆಯನ್ನೂ ನೀನು ತಾಳಿಕೊಂಡು ಹುಡುಗಾಟಿಕೆ ಮಾಡಬಲ್ಲೆ ಲಕ್ಷ್ಮೀ! ನನಗೆ ಬುದ್ಧಿ ಹೇಳಬಲ್ಲೆ! ನಾನಾದರೆ ಪ್ರಾಣಹತ್ಯೆ ಮಾಡಿಕೊಳ್ಳುತ್ತಿದ್ದೆ!

(ಕೆಂಪಡರಿದ ಕಂಗಳಿಂದ ಸೋಮನು ಮುಂಭಾಗದಿಂದ ಮನೆಯೊಳಗೆ ಪ್ರವೇಶಿಸಿ 'ಲಕ್ಷ್ಮೀ, ಲಕ್ಷ್ಮೀ!' ಎಂದು ಕರೆಯುವನು. ಲಕ್ಷ್ಮಿಯು ಸೋಮನ ಸ್ವರ ಕೇಳಿದೊಡನೆಯೇ ಬೆದರಿ ಸುಂದರಿಯನ್ನಲ್ಲಿಯೇ ಬಿಟ್ಟು, ಅವಸರದಿಂದ ಹೋಗಿ ಸೋಮನಿದಿರು ನಿಲ್ಲುವಳು. ಸೋಮನು ಅವಳನ್ನೇ ಧುರಧುರನೆ ನೋಡುತ್ತಾ ನಿಲ್ಲುವನು.)

ಲ:—(ಬಹಳ ದೈನ್ಯದಿಂದ) ನನ್ನನ್ನೇಕೆ ಕರೆದುದು?

ಸೋಮ:—ನಾನು ಬರುವಾಗ ನೀನೆಲ್ಲಿದ್ದೆ?

ಲ:—ತೋಟದಲ್ಲಿ ಸುಂದರಿಯೊಡನೆ ಮಾತಾಡುತ್ತಿದ್ದೆ.

ಸೋ:—ಏನು ಮಾತಾಡುತ್ತಿದ್ದುದು?

ಲ:—ನಮ್ಮ ಸುಖಕಷ್ಟಗಳನ್ನು.

ಸೋ:—ಏನು, ಸುಖಕಷ್ಟಗಳನ್ನೇ? ಇಂದು ಆ ರಾಮಭಟ್ಟ ನಿಂದ ಸುಂದರಿಗೊಂದು ಕಾಗದ ಬಂದಿರುವುದಿಲ್ಲವೇ?

ಲ:—(ಸ್ವಲ್ಪ ಸಂದೇಹಗೊಂಡು ಆ ಮೇಲೆ ದೃಢಚಿತ್ತಳಾಗಿ) ನನಗೆ ಗೊತ್ತಿಲ್ಲ.

ಸೋ:—ಏನು, ಗೊತ್ತಿಲ್ಲವೇ? ಹೇಳು, ಸತ್ಯಹೇಳು. ಇಲ್ಲವಾದರೆ ಜಾಗ್ರತೆ! ಪೋಸ್ಟ್‌ಮಾಸ್ಟ್ರು ದುಗ್ಗಪ್ಪ ಶೆಟ್ರಿಗೆ ಹೇಳಿದರಂತೆ.

ಲ:—ನನಗೇನು ಗೊತ್ತು ಸುಂದರಿಗೆ ಕಾಗದ ಬಂದದೋ ಇಲ್ಲವೋ ಎಂದು?

ಸೋ:—ನಿನಗೇನು ಗೊತ್ತು! ನಿನಗೆ ಗೊತ್ತುಮಾಡುವ ಬಗೆ ಬೇರೆಯಿದೆ. ಒಳ್ಳೇ ಮಾತಿನಿಂದ ಸತ್ಯ ಹೇಳುವೆಯೋ ಇಲ್ಲವೋ?

ಲ:—ನನಗೆ ಗೊತ್ತಿಲ್ಲ.

ಸೋ:—(ಲಕ್ಷ್ಮಿಯ ದೊಡ್ಡ ತಲೆಸೂಡಿಯನ್ನೆಳೆದು ಬಿಡಿಸಿ ಸುದೀರ್ಘ ಕೂದಲನ್ನು ಕೈಗೆ ಸುತ್ತಿ ಬಲವಾಗಿ ಎಳೆಯುವನು. ಲಕ್ಷ್ಮಿಯು ಉಸಿರೆತ್ತದೆ ಸುಮ್ಮನಿರುವಳು.) ಹೇಳು, ಸತ್ಯಹೇಳು. ನೀವಿಬ್ಬರೇನು ಮಾಡುತ್ತಿದ್ದುದು? ಸುಂದರಿಯೊಡನೆ ಮಾತಾಡಲೇ ಬಾರದೆಂದು ನಾನು ನಿನಗೆ ಹೇಳಿಲ್ಲವೇ?

ಲ:—(ಒಂದೊಮ್ಮೆ ಬಹಳ ಪ್ರಯತ್ನದಿಂದ ತಲೆಯೆತ್ತಿ ಸೋಮನನ್ನು ದಿಟ್ಟಿಸಿ ನೋಡಿ) ಈ ಮನೆಯಲ್ಲಿರುವನಕ ಸುಂದರಿಯೊಡನೆ ಮಾತಾಡದಿರಲು ನನ್ನಿಂದ ಸಾಧ್ಯವಿಲ್ಲ.

ಸೋ:—ಏನು ಸಾಧ್ಯವಿಲ್ಲವೇ? ನನ್ನ ಹೆಂಡತಿಯಾಗಿ ನನ್ನ ಮಾತಿನಂತೆ ನಡೆಯಲು ಸಾಧ್ಯವಿಲ್ಲವೇ? ನಡೆ ಈಕ್ಷಣ, ತೊಲಗಿಲ್ಲಿಂದ! (ತಲೆಗೆಟ್ಟು ಭರದಿಂದ ದೂಡಿಬಿಡುವನು, ಲಕ್ಷ್ಮಿಯು ಧೊಪ್ಪನೆ ಅಂಗಳಕ್ಕೆ ಬೀಳುವಳು. ಅಲ್ಲಿ ಹೋಗಿ ಮತ್ತೆ ತುಳಿಯುವನು. ಆಗ

ಸುಂದರಿಯು ಆವೇಗಗೊಂಡು ಓಡಿಬಂದು ಸೋಮನನ್ನು ತಡೆಯಲು ಅವನು ಬಿದ್ದುಬಿಡುವನು. ಅವನು ಎದ್ದು ಕಟಕಟನೆ ಹಲ್ಲು ಕಡಿಯುತ್ತಾ) ಹುಂ, ಏನು ಎದೆ ನಿನ್ನದು! 'ನನ್ನ ಮೇಲೆ ಕೈಮಾಡುವುದಕ್ಕೂ ಧೈರ್ಯಬಂತೇ ನಿನಗೆ?

ಸು:—ತಪ್ಪಾಯಿತು; ಅಣ್ಣಾ ಕ್ಷಮಿಸು, ಕ್ಷಮಿಸು! ನಿರ್ದೋಷಿ ಲಕ್ಷ್ಮಿಗೆ ನೀನು ಹೊಡೆಯುವುದು ನನಗೆ ಅಸಹನೀಯವಾಗಿ ನಾನು ಸಿಟ್ಟಿನ ಭರದಿಂದ ನಿನ್ನನ್ನು ತಡೆಯಲೆತ್ನಿಸಿದುದಕ್ಕಾಗಿ ಕ್ಷಮಿಸು! ಅಣ್ಣಾ ಹೀಗೇಕೆ ಮಾಡುವೆ? ನಮ್ಮ ಏಕಮಾತ್ರ ರಕ್ಷಕನಾದ ನೀನೇ ಹೀಗೆ ನಮ್ಮನ್ನು ಪೀಡಿಸಿದರೆ ನಮಗಿನ್ನು ಗತಿಯಾರು?

ಸೋ:—(ಸುಂದರಿಯನ್ನು ದೂಡಿ) ನೀನು ಯಾವಾಗ ನನ್ನ ಮೇಲೆ ಕೈಮಾಡಿದೆಯೋ ಇನ್ನು ಮುಂದೆ ನಾನು ನಿನ್ನ ಅಣ್ಣನಲ್ಲ; ನೀನು ನನ್ನ ತಂಗಿಯಲ್ಲ.

ಸು:—(ಸಿಟ್ಟುಗೊಂಡು ಎದ್ದು ನಿಂತು) ಆಯ್ತು, ಹಾಗೆಯೇ ಆಗಲಿ. ಹಾಗಾದರೂ ನೀನು ಲಕ್ಷ್ಮಿಯನ್ನು ಪೀಡಿಸುವುದನ್ನು ಬಿಡು.

ಸೋ:—ಲಕ್ಷ್ಮಿಯನ್ನು ಪೀಡಿಸಿದರೆ ನಿನಗೆ ಬಂದ ಕಷ್ಟವೇನು? ನನ್ನ ಹೆಂಡತಿಯಲ್ಲವೇ ಅವಳು?

ಸು:—ಹೆಂಡತಿಯಾದಾಕ್ಷಣ ಅವಳನ್ನು ಅನ್ಯಾಯವಾಗಿ, ಪಾಶವಿಕವಾಗಿ ಹೊಡೆದು ಬಡೆದು ಪೀಡಿಸುವ ಹಕ್ಕಿರುವುದೇ ಗಂಡನಿಗೆ!

ಸೋ:—ಹೌದು. ಹೆಂಡತಿಯನ್ನು ಹೊಡೆಯುವುದು ಮಾತ್ರವಲ್ಲ, ಕೊಂದುಹಾಕುವ ಹಕ್ಕೂ ಇದೆ ಗಂಡನಿಗೆ!

ಸು:—ಯಾವ ಧರ್ಮನೀತಿ ಪ್ರಕಾರ?

ಸೋ:—ಸಾಕು, ಸಾಕು. ನಿನ್ನ ಧರ್ಮನೀತಿ! ಮಾನಮರ್ಯಾದೆ, ನಗೆನಾಚಿಕೆಯಿಲ್ಲದೆ ಯಾರ್ಯಾರ ಬೆನ್ನುಹಿಡಿದು ಹೋಗುವ ನೀನೂ ನನಗೆ ಧರ್ಮನೀತಿ ಸಾರುವುದೇ?

ಸು:—ಮಾನಮರ್ಯಾದೆ ನಗೆನಾಚಿಕೆಯಿಲ್ಲದೆ ಕುಡಿದು ತಲೆಗೆಟ್ಟು, ದುರಾಚಾರಿಯಾಗಿ ಇಚ್ಛಾನುಸಾರ ನಡೆಯುವದು ನಾನೇ, ನೀನೇ?

ಸೋ:—ನೀನು! ಆ ದುರಾಚಾರಿ ರಾಮಭಟ್ಟನೊಡನೆ ಸೇಳ ಕಟ್ಟಿ......................

ಸು:—ಬಾಯಿಮುಚ್ಚು. ನನ್ನ ಕುರಿತು ಏನು ಬೇಕಾದರೂ ಹೇಳು! ಆದರೆ ರಾಮಭಟ್ಟರ ವಿಷಯದಲ್ಲೇನಾದರೂ ಮಾತಾಡಿದರೆ...

ಸೋ:—ಮಾತಾಡಿದರೇನಾಗುವುದು? ಅವನೆಷ್ಟು ಸಂಭಾವಿತ ನೆಂಬುದು ಇಂದೀಗ ಜನಜನಿತವಾಗಿರುವುದಿಲ್ಲವೇ?

ಸು:—ಸಂಭಾವಿತರು ಅವರಲ್ಲ, ನೀನು! ತನ್ನ ಸರ್ವಸ್ವವನ್ನೂ ಕಳಕೊಂಡು ಎಂತಹ ಭಯಂಕರ ವಿಪತ್ತಿಗೊಳಗಾದರೂ ಹೀನಜಾತಿ ಯವಳೊಬ್ಬಳ ಪ್ರೇಮವೇ ಸರ್ವಸ್ವವೆಂದೆಣಿಸಿ ಅಸಹನೀಯ ಕಷ್ಟ ಕ್ಕೊಳಗಾಗಿರುವ ಅವರು ಮಾನಹೀನರು! ಜಾತಿಭ್ರಷ್ಟರು!! ನೀತಿ ಬಾಹಿರರು!!! ದುರಾಚಾರಿಯು!!!! ದುರಾತ್ಮರ ಕೈಗೊಂಬೆಯಾಗಿ ಕುಣಿದು, ಕುಡಿದು, ಹೆಂಡತಿ, ತಂಗಿ, ಮೊದಲಾದವರನ್ನು ಮನಸೇಚ್ಛೆ ಬೈದುಭಂಗಿಸಿ, ಹೊಡೆದುಬಡೆದು ಪೀಡಿಸುವ ನೀನು ಬಹಳ ಸಂಭಾ ವಿತ! ಮಾನವಂತ!! ನೀತಿವಂತ!!!

ಸೋ:—ಅಹಹ! ಲೋಕದಲ್ಲಿ ನೀನೊಬ್ಬಳು ಸಂಭಾವಿತೆ, ಅವ ನೊಬ್ಬ ಸಂಭಾವಿತ! ನಿಮಗಿಬ್ಬರಿಗೂ ಜತೆ ಸಮ! ಜನರೆಲ್ಲಾ ನಿಮ್ಮ ನ್ನೆಷ್ಟು ಕೊಂಡಾಡುತ್ತಿರುವರೆಂದು ಬಲ್ಲೆಯಾ?

ಸು:—ಜನರು ನಿನ್ನನ್ನು ಕೊಂಡಾಡುತ್ತಿರುವುದೇ ಸಾಕು! ನಮ್ಮ ಮಾತಂತಿರಲಿ.

ಸೋ:—(ಫಕ್ಕನೆ ಉದ್ವೇಗಗೊಂಡು) ಏನಂದಿ? (ಔಡುಗಚ್ಚಿ ಸುಂದರಿಯ ಕಡೆಗೆ ಮುಂದುವರಿಯುವನು.)

ಸು:—(ಭೀತಿಗೊಂಡರೂ ಅದನ್ನು ಹೊರಗೆ ತೋರಿಸದೆ ಮುಂ ದೊತ್ತಿ ನಿಂತು) ನೀನು ದೊಡ್ಡ ಸಂಭಾವಿತನೆಂದೆ!

ಸೋ:—ಹೌದು, ನಾನು ಸಂಭಾವಿತ! ಮಾನಗೆಟ್ಟ ನೀನು ನನ್ನ ಮನೆಯಲ್ಲಿರಕೂಡದು!

ಸು:—ಮನೆ ನಿನ್ನದೊಬ್ಬನದಲ್ಲ. ನಿನ್ನಷ್ಟು ಹಕ್ಕು ನಮಗೂ ಇದೆ.

ಸೋ:—ಏನು, ನನ್ನಷ್ಟೆ ಹಕ್ಕು ನಿನಗೂ ಇರುವುದೇ? (ಮುಂದು ವರಿದು ಸುಂದರಿಯ ಮೈಗೆ ಕೈಹಾಕುವನು.)

ಸು:—(ಕೈ ದೂಡಿ) ಮೈಗೆ ಕೈಹಾಕಿದರೆ ಜಾಗ್ರತೆ! ನಿನ್ನ ಹೆಂಡತಿ ಯನ್ನು ಇಚ್ಛಾನುಸಾರ ಹೊಡೆದು ಬಡಿದು ಅಭ್ಯಾಸವಾಗಿ ಹೋಗಿದೆ ನಿನಗೆ!

ಸೋ:—ಏನು ಮಾಡುವೆ? ತುಂಡು ಹೆಂಗಸಿಗೂ ಇಷ್ಟೊಂದು ಪೌರುಷವಾದರೆ ನಮ್ಮ ಗಂಡುಸುತನದಿಂದೇನು ಮತ್ತೆ?

ಸು:—ಹೆಂಡಿರನ್ನೂ, ಮನೆಯ ಹೆಂಗಸರನ್ನೂ ಇಚ್ಛಾನುಸಾರ ಬೈದು ಭಂಗಿಸಿ, ಹೊಡೆದುಬಡೆದು, ಕ್ರೂರವಾಗಿ ಪೀಡಿಸುವುದು ಗಂಡಸುತನವೋ? ಲಂಡತನವೋ?

ಸೋ:—ಅದಾವುದೆಂಬುದನ್ನು ನೀನು ಈಗಲೇ ತಿಳಿಯುವೆ. ನೀಚಳೇ! (ಸುಂದರಿಯ ಕುತ್ತಿಗೆ ಹಿಡಿದು ಬಗ್ಗಿಸಿ ಗುದ್ದು ಹೊಡೆಯುವಷ್ಟ ರಲ್ಲಿ, ಆ ವರೆಗೆ ಸುಮ್ಮನೆ ನಿಂತುಕೊಂಡಿದ್ದ ಲಕ್ಷ್ಮಿಯು ಓಡಿಬಂದು ತಡೆದು ಸೋಮನ ಹಿಡಿತದಿಂದ ಸುಂದರಿಯನ್ನು ಬಿಡಿಸುವಳು.)

ಲಕ್ಷ್ಮಿ:—ಪಾಪ, ಅವಳಿಗೇಕೆ ಗುದ್ದುವಿರಿ? ನನಗೆಷ್ಟು ಬೇಕಾ ದರೂ ಹೊಡೆಯಿರಿ;

ಸೋ:—ನೀನೂ ಅವಳ ಪಕ್ಷ ಹಿಡಿಯುವೆಯಾ ರಂಡೆ! (ಪುನಹ ಲಕ್ಷ್ಮಿಯ ತಲೆಗೂದಲು ಹಿಡಿದು ಧರಧರನೆ ಎಳೆಯುವಾಗ ಸುಂದರಿಯು ಆವೇಗಭರದಿಂದ ಸೋಮನ ಕೈಬಿಡಿಸಿ ದೂಡಿಬಿಡುವಳು. ಸೋಮನು ಧೊಪ್ಪನೆ ನೆಲಕ್ಕೆ ಬಿದ್ದು ಏಳಲಾರದೆ ಕೋಪೋದ್ರೇಕದಿಂದ ಹುಚ್ಚನಂತಾಗಿ) ನೀವಿಬ್ಬರೂ ಸೇರಿ ನನಗೆ ಹೊಡೆಯುವಿರಾ?

ಸು:—ನಿನಗಾರು ಹೊಡೆದುದು?

ಸೋ:—(ಮಾಲುತ್ತಾ ಎದ್ದು) ಯಾರು ಹೊಡೆದುದೆ? ನೀನಿನ್ನು ಏನೂ ಮಾಡುವೆ! ಈ ಮನೆಯಲ್ಲಿನ್ನು ಒಂದೋ ನೀನಿರಬೇಕು; ಇಲ್ಲ ವಾದರೆ ನಾನಿರಬೇಕು! ನಮುಗಿಬ್ಬರಿಗೂ ಈ ಮನೆಯಿನ್ನು ಸಲ್ಲದು! ಲಕ್ಷ್ಮಿ, ನೀನೀಗಲೇ ನಿನ್ನ ತಾಯಿ ಮನೆಗೆ ಹೊರಟು ಹೋಗಬೇಕು. ನಡೆ, ತೊಲಗಿಲ್ಲಿಂದ! (ಲಕ್ಷ್ಮಿಯು ಮಾತಾಡದೆ ಒಳಗೆ ಹೋಗು ವಳು.) ನಾನು ತಾಯಿಯೊಡನೆ ಒಂದು ಮಾತು ಕೇಳಿ ಈಕ್ಷಣ ಈ

ಮನೆ ಬಿಟ್ಟು ಹೋಗುವೆನು! (ಸೋಮನ ತಮ್ಮ ಸುಬ್ಬನು ಹಟ್ಟಿಯ ಕಡೆಯಿಂದ ಬರುವನು. ಸೋಮನು ಅವನನ್ನು ಕರೆದು) ಎಲ್ಲಿ, ತಾಯಿ ಎಲ್ಲಿ?

ಸುಬ್ಬ:—(ದೂರದಿಂದಲೆ) ನನಗೆ ಗೊತ್ತಿಲ್ಲ. ನಾನೀಗ ತಾನೆ ಹುಲ್ಲು ತಂದುದು. ಅವಳೆಲ್ಲಿಯೋ ಹೊರಹೋಗಿರಬೇಕು.

ಸೋ:—ಯಾವಾಗ ಬರುವುದೋ ಅವಳ ಸವಾರಿ! ಈ ಮನೆಯಲ್ಲಿನ್ನು ಒಂದೋ ನಾನಿರಬೇಕು; ಇಲ್ಲವೆ ಈ ನೀಚಳಿರಬೇಕು. ನಮಗಿಬ್ಬರಿಗೂ ಇನ್ನು ಒಂದು ಮನೆಯ ನೀರು ಸಲ್ಲದು. ಅವಳಿಗೆ ನಾನು ಬೇಕಾದ ಪಕ್ಷದಲ್ಲಿ ಸುಂದರಿಯನ್ನು ಮನೆಯಿಂದ ಹೊರ ಹಾಕಬೇಕವಳು. ಸುಂದರಿ ಬೇಕಾದ ಪಕ್ಷದಲ್ಲಿ, ನಾನು ಈ ಮನೆಯಿಂದ ಹೊರ ಹೋಗುವೆನು. ಅವಳ ಇಚ್ಛೆಯೇನೆಂದು ನಾಳೆ ಬೆಳಿಗ್ಗೆನೊಳಗೆ ನನಗೆ ತಿಳಿಸಬೇಕೆಂದು ಹೇಳು. (ಹೋಗಿಬಿಡುವನು.)

(ಸುಂದರಿಯು ಧರಧರನೆ ಇಳಿದು ಬರುವ ಕಣ್ಣೀರನ್ನು ಸೆರಗಿಂದೊರಸಿಕೊಂಡು ಒಳಗೆ ಹೋಗುವಳು).

ಅಂಕ ೨

ನೋಟ ೧

(ರಸ್ತೆ—ಬೊಂಬಾಯಿ ಲೈಫ್ ಇನ್‌ಶ್ಯೂರೆನ್ಸ್ ಕಂಪೆನಿ ಏಜಂಟ್ ಲಕ್ಷ್ಮೀನಾರಾಯಣ ರಾಯನು ರಾಮುಭಟ್ಟನಿಗಾಗಿ ಕಾದುಕಾದು ಬೇಸತ್ತು ಕಡೆಗೆ ತಾನೊಬ್ಬನೇ ಸಂಜೆಯ ತಿರುಗಾಟಕ್ಕೆಂದು ಕದ್ರಿಯ 'ತನ್ನ ಬಿಡಾರದಿಂದ ಶಿಳ್ಳು ಹಾಕಿಕೊಂಡು ಕೈಯ ಬೆತ್ತ ತಿರುಗಿಸುತ್ತಾ ಹೊರಟು ಬರುವಾಗ, ಜೋಲುಮೋರೆ ಮಾಡಿಕೊಂಡು ಕೆಳಗೇನೇ ನೋಡುತ್ತಾ ಬರುತ್ತಿರುವ ರಾಮುಭಟ್ಟನನ್ನು ಸಂಧಿಸಿ ಭುಜಕ್ಕೊಮ್ಮೆ ಬಲವಾಗಿ ತಟ್ಟಿ ಮಾತಾಡಿಸುವನು.)

ಲ ನಾ.:—ಏನಾಯಿತು ರಾಮು? ಏನೆಂದರು ವಕೀಲ್ ಶ್ರೀನಿವಾಸರಾಯರು?

ರಾ:—ಆಗುವುದೇ ಆಯಿತು. ನೀನು ಬಲವಂತಗೊಳಿಸದಿದ್ದರೆ

ನಾನಲ್ಲಿಗೆ ಹೋಗುತ್ತಿದ್ದುದೇ ಇಲ್ಲ. ಅಂತಹ ಹೃದಯರಹಿತ ಯಂತ್ರಗಳಿಂದ ಸಹಾಯ ಕೇಳಹೋಗುವುದಕ್ಕಿಂತ ಉದ್ಯೋಗವಿಲ್ಲದೆ ಉಪವಾಸ ಬಿದ್ದು ಸಾಯುವುದಾದರೂ ಮೇಲು!

ಲ. ನಾ:—ಏನೆಂದರವರು?

ರಾ:—ಗುಮಾಸ್ತಿಕೆಗವರಿಗೆ ಬಿ. ಎ. ಕಲ್ತವರು ಬೇಡವಂತೆ. ಜಾತಿನೀತಿ ಬಿಟ್ಟು ನೀಚಜಾತಿಯ ಸ್ತ್ರೀಯ ಮೋಹಜಾಲಕ್ಕೆ ಬಿದ್ದು ತಲೆಗೆಟ್ಟ ಕುಲಗೇಡಿ ತರುಣರು ಅವರ ಮನೆಬಾಗಿಲಿಗೆ ಕಾಲಿಡಬಾರದಂತೆ! ನಾನೆಷ್ಟು ಹೇಳಿದರೂ ನೀನು ಕೇಳುವುದಿಲ್ಲ ನಾರಾಯಣ, ಇಂತಹ ಮೂರ್ಖರನ್ನೆಲ್ಲಾ ಆಶ್ರೈಸಿ ನಿಂದೆ ಅಪಮಾನಕ್ಕೊಳಗಾಗುವುದಕ್ಕಿಂತ ದಿನಕೂಲಿ ಕೆಲಸವಾದರೂ ಮಾಡಿ ದಿನಕಳೆಯುವುದು ಎಷ್ಟೋ ಅಭಿಮಾನಕರವಲ್ಲವೇ? ನಾನು ಬಿ. ಎ. ಕಲಿತರೇನು? ಮಾನವಂತ ಕುಟುಂಬದವನಾದರೇನು? ಮೈಬೆವರಿಳಿಸಿ ಸ್ವತಂತ್ರವಾಗಿ ದುಡಿದು ಸಂಪಾದಿಸಿ, ಸ್ವಗೌರವದಿಂದ ಜೀವನನಿರ್ವಾಹ ಮಾಡುವುದರಲ್ಲಿ ನಮ್ಮ ಬಿ. ಎ. ಪದವಿಗೆ ಬರುವ ಕೊರತೆಯೇನು? ನನ್ನ ಮಾನಕ್ಕುಂಟಾಗುವ ಕುಂದೇನು? ನನಗದೇ ಅತ್ಯಂತ ಸ್ವಾಭಿಮಾನದ ಜೀವನವೆನಿಸುತ್ತದೆ.

ಲ:—ಛೆ! ಇನ್ನೇನು ಮಾಡುವುದೋ ನನಗೆ ತಿಳಿಯದು! ನಿನ್ನ ತಂದೆಯು, ತನಗೊಬ್ಬ ಮಗನೇ ಹುಟ್ಟಲಿಲ್ಲೆಂದು ಭಾವಿಸಿಕೊಳ್ಳುವರಂತೆ. ನಿನ್ನ ಘಟಶ್ರಾದ್ಧ ಕೂಡಾ ಮಾಡಿಬಿಟ್ಟಿರುವರಂತೆ. ಇನ್ನು ಮುಂದೆ ಅವರ ಮತ್ತು ನಿನ್ನ ಸಂಬಂಧವು ಸಂಪೂರ್ಣವಾಗಿಯೇ ಕಡಿದು ಹೋದಂತೆಯೇ ಸರಿ. ನಿನ್ನನ್ನು ಅಷ್ಟೊಂದು ಪ್ರೀತಿಸಿ ಪ್ರಾಣಕ್ಕಿಂತಲೂ ಮಿಗಿಲಾಗಿ ಕಾಣುತ್ತಿದ್ದ ಅವರು ಹೀಗೆ ಮಾಡುವರೆಂದು ಕನಸಿನಲ್ಲಿಯೂ ನೆನಸಲಿಲ್ಲ ನಾನು.

ರಾ:—ಅರ್ಥರಹಿತ ಹಳೆಯ ಸಂಪ್ರದಾಯಗಳ ಗುಲಾಮನಾಗಿ ಒಂದಿಷ್ಟು ವಿಚಾರಕ್ಕೆಡೆಕೊಡದ ಮಾನವನು ಸಂದರ್ಭಾನುಸಾರ ಹಿಂಸ್ರಪಶುಗಳಿಗಿಂತ ಕ್ರೂರನಾಗುವನು. ತನ್ನ ರೀತಿನೀತಿಗಳಿಗೆ ವ್ಯತಿರಿಕ್ತವಾಗಿ ನಡೆಯುವವರನ್ನು ಏನುಮಾಡಲೂ ಹೇಸನು. ನಾನು ಊರಲ್ಲೇ ಇರುತಿದ್ದರೆ ತಂದೆಯು ಈಗಣಂತೆ ನಾನು ಸಜೀವವಾಗಿದ್ದಂತೆಯೇ

ಶ್ರಾದ್ಧ ಮಾಡುವ ಬದಲಿಗೆ ನನ್ನನ್ನು ಕೊಲ್ಲಿಸಿಯೇ ಶ್ರಾದ್ಧಮಾಡಲು ಎಷ್ಟಕ್ಕೂ ಹಿಂಜರಿಯುತ್ತಿದ್ದಿಲ್ಲ.

ಲ:—ಅದಂತಿರಲಿ, ನೀನೀಗ ಏನುಮಾಡುವೆ ರಾಮು? ಸುಂದರಿಯ ಪತ್ರಗಳನ್ನೋದಿದರೆ ಮನಸ್ಸು ಕರಗಿ ನೀರಾಗುವುದು. ನಿನ್ನ ಅವಸ್ಥೆಯಂತೂ ಅತ್ಯಂತ ಕರುಣಾಜನಕವಿರುವುದು. ನಿಮ್ಮಿಬ್ಬರ ಪರಸ್ಪರ ಪ್ರೇಮವು ನಿಮ್ಮ ಪ್ರಾಣದುಸಿರೇ ಆಗಿ ಹೋಗಿದೆ. ಸಮಾಜವು ನಿಮ್ಮ ಮೇಲೆ ಮುನಿದು ಬಿದ್ದು ಮುರಿದು ಮುಕ್ಕಲು ಬಾಯ್ದೆರೆದುಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಮುಂದಿನ ಕರ್ತವ್ಯವೇನೋ ತಿಳಿಯದು. ರಾಮು, ನಾನು ಶ್ರೀಮಂತನಾಗಿದ್ದರೆ ಎಷ್ಟು ಹಣವನ್ನಾದರೂ ವ್ಯಯಿಸಿ, ಸಮಾಜದ ಕಟ್ಟುನಿಟ್ಟುಗಳನ್ನು ತೃಣೀಕರಿಸಿ, ಜನತೆಯ ನಿಂದೆ, ವಿರೋಧಗಳಿಗೊಂದಿಷ್ಟು ಸೊಪ್ಪುಹಾಕದೆ ನಾನೇ ಪುರೋಹಿತನಾಗಿ ನಿನ್ನ ಮತ್ತು ಸುಂದರಿಯ ವಿವಾಹ ನಡಿಸುತ್ತಿದ್ದೆ. ಆದರೆ ಬರಿಗೈಯಿಂದ ಮಾಡುವುದಾದರೂ ಏನು?

ರಾ:—ನಿನ್ನ 'ರೆ'ಯ ರಾಜ್ಯದ ಮಾತಂತಿರಲಿ— ನಾರಾಯಣ, ನಾನಿನ್ನು ನಿನ್ನ ಮಾತಿನಂತೆ ನಡೆಯಲಾರೆ. ಉದ್ಯೋಗಕ್ಕಾಗಿ ಅಲೆದಲೆದು ಸಾಕಾಯಿತು ನನಗೆ. ಇನ್ನು ನನ್ನಿಚ್ಛೆಯಂತೆ ನಡೆಯುವೆನು. ನೀನಿದಕ್ಕೆ ಅಡ್ಡಿಮಾಡಬಾರದು.

ಲ:— ನೀನೇನು ಮಾಡುವೆ ರಾಮು?

ರಾ:—ನಾನು ನನ್ನ ಬಿ. ಎ. ಪದವಿಯ ಪ್ರತಿಷ್ಠಿತ ವೇದಿಕೆಯಿಂದ ಕೆಳಗಿಳಿದು, ನನ್ನ ಸ್ಥಾನಮಾನದ ಬಣ ಗೌರವವನ್ನು ತೊರೆದು ಜನಸಾಮಾನ್ಯರ ಸರಳ ಜೀವನವನ್ನನುಸರಿಸುವೆನು. ಸುಂದರಿಯನ್ನು ಬೇಗನೆ ಮಂಗಳೂರಿಗೆ ಕರಕೊಂಡು ಬಂದು ಯಾವ ಡಂಬಾಚಾರವೂ ಇಲ್ಲದೆ ಬಡ ಮಜೂರನಾಗಿ, ದಿನದಿನದ ಹಿಟ್ಟನ್ನು ಸಂಪಾದಿಸಿ ಸುಖವಾಗಿ ದಾಂಪತ್ಯಜೀವನ ನಡಿಸುವೆನು.

ಲ:—ಅದು ಬಾಯಿಯಲ್ಲಿ ಹೇಳುವಷ್ಟು ಸುಲಭವಲ್ಲ ರಾಮು. ಸುಮ್ಮಗೆ ಏನೇನೋ ಆದರ್ಶಗಳನ್ನು ಕಟ್ಟಿಕೊಂಡು ದುಡುಕಿ ಫಲವಿಲ್ಲ. ನೀನು ಮಜೂರನಾಗಿ ಏನು ಕೆಲಸ ಮಾಡಬಲ್ಲೆ? ಎಷ್ಟು ಸಂಪಾದಿಸ

ಬಲ್ಲೆ? ಸುಂದರಿಯನ್ನು ನೀನಿಲ್ಲಿಗೆ ಕರತಂದು ಮಾಡುವುದಾದರೂ ಏನು? ಅವಳಿರುವುದೆಲ್ಲಿ? ಅವಳ ಜೀವನದ ಬಗೆ ಹೇಗೆ?

ರಾ:—ಮಜೂರ ದಂಪತಿಗಳಿಬ್ಬರು ಈ ಪ್ರಶ್ನೆಗಳನ್ನೆಲ್ಲಾ ಯೋಚಿಸುತ್ತಾ ಕುಳಿತುಕೊಳ್ಳುವರೆ ನಾರಾಯಣ? ಇಬ್ಬರೂ ದುಡಿತಕ್ಕನುಗುಣವಾದ ಸರಳ ಜೀವನ ನಡಿಸುವರು. ದುಡಿತವು ಕಡಿಮೆಯಾದರೆ ದಿನಕ್ಕೊಂದೂಟದಿಂದಲೇ ತೃಪ್ತಿಗೊಳ್ಳುವರು. ಸುಖದುಃಖದಲ್ಲಿ, ಶ್ರಮವಿರಾಮದಲ್ಲಿ, ಸಮಭಾಗಿಗಳಾಗಿ ಸಂತೋಷದಿಂದ ಜೀವನ ನಿರ್ವಾಹ ಮಾಡುವರು.

ಲ:—ಹಾಗಾದರೆ ನೀನು ಬಂದರಿಗೆ ಹೋಗಿ ಉಪ್ಪಿನ ಗೋಣಿ ಹೊರಲಿಕ್ಕೂ, ಸುಂದರಿಯನ್ನು ಕಾಫಿಬೀಜ ಹೆಕ್ಕಲು ಕಳುಹಿಸುವುದಕ್ಕೂ ಸಿದ್ಧನಿರುವೆಯಾ?

ರಾ:—ಓಹೋ, ಸಿದ್ಧನೇ ಇರುವೆನು. ನನಗೀ ಕೃತಕ, ಡಾಂಬಿಕ ಜೀವನವು ಸಾಕುಸಾಕಾಗಿದೆ. ನಾನಿದನ್ನಿನ್ನು ಸಹಿಸಲಾರೆ! ಸಮಾಜದ ರೀತಿನೀತಿಗಳು ಮಾನವನ ಸೌಹಾರ್ದಪರ ಜೀವನಕ್ಕಾಗಿ, ಮನೋವಿಕಾಸಕ್ಕಾಗಿ, ಆತ್ಮೋನ್ನತಿಗಾಗಿ ಹೊರತು ಆತನನ್ನು ಅರ್ಥರಹಿತ ಆಚಾರ ಪದ್ಧತಿಗಳ ಪಂಜರದೊಳಗೆ ಗುಲಾಮನಾಗಿರಿಸಲಿಕ್ಕಲ್ಲ. ಸ್ವಾಭಾವಿಕ ಪ್ರವೃತ್ತಿಯ ಪ್ರವಾಹವನ್ನು ಕ್ಷುದ್ರ ಭಿನ್ನಭೇದಗಳ ಕಟ್ಟುಗಳೊಳಗೆ ತಡೆಗಟ್ಟಿಡುವುದರಿಂದ ಎಂದೂ ಮಾನವಕೋಟಿಯ ಅಭ್ಯುದಯವಾಗುವಂತಿಲ್ಲ. ಆ ಪ್ರವಾಹವು ಒಂದಲ್ಲೊಂದು ದಿನ ಕಟ್ಟುಗಳನ್ನೊಡೆದು ಹಾವಳಿಮಾಡದಿರಲಾರದು. ಅದನ್ನು ಸಹಜವಾಗಿ ಹರಿಯಗೊಟ್ಟರೆ ತಟಗಳೊಳಗೆ ಕ್ರಮವಾಗಿ ಹರಿದು ಮಂಗಳಕಾರಿಯಾಗುವುದು.

ಲ:—ನಿನ್ನೀ ಉದಾತ್ತ ತತ್ವ ವಿಚಾರವೀಗ ಕಾರ್ಯಕ್ಕೆ ಬಾರದು. ಮಜೂರ ಜೀವನವು ದೂರದ ಆದರ್ಶಪರ ದೃಷ್ಟಿಯಲ್ಲಿ ಸುಗಮವಾಗಿ, ಸುಖಸಂತೋಷಮಯವಾಗಿ ತೋರಬಹುದು. ಆದರೆ, ನಿತ್ಯ ವ್ಯವಹಾರದಲ್ಲಿ ನಮ್ಮಂತಹ ಸ್ವಾಭಿಮಾನಿ ಹಾಗೂ ಸುಶಿಕ್ಷಿತರಿಗದು ಅಸಹನೀಯವಾಗಿ ಪರಿಣಮಿಸುವುದು.

ರಾ:—ಅಶಿಕ್ಷಿತ ಮೂಢ ಮಜೂರ ಜೀವನ ಕ್ರಮವು ನಮಗೆ ಅಸ

ಹನೀಯವಾಗಬಹುದು. ಆದರೆ ವಿಚಾರಶೀಲ ಸರಳ ಮಜೂರ ಜೀವನವು ನಿಜವಾಗಿಯೂ ಕೋಟ್ಯಾಧೀಶರ ಆಡಂಬರ ಜೀವನಕ್ಕಿಂತ ಎಷ್ಟೋ ಸುಖಮಯವಿರುವುದು. ಅದರಲ್ಲಿ ತೃಪ್ತಿಯಿದೆ, ಸಮಾಧಾನವಿದೆ, ಶಾಂತಿಯಿಂದೆ.

ಲ:—ಆಗಲಿ, ನೀನೀಗ ಏನುಮಾಡಬೇಕೆಂದಿರುವೆ?

ರಾ:—ನಾಳಿನಿಂದಲೇ ದಿನಕೂಲಿ ಕೆಲಸಕ್ಕಾರಂಭಿಸುವೆನು.

ಲ:—ಎಂತಹ ಕೆಲಸವದು? ಎಲ್ಲಿಗೆ ಕೆಲಸಕ್ಕೆ ಹೋಗುವೆ?

ರಾ:—ಎಲ್ಲಿಗಾದರೂ ಹೋಗುವೆನು! ಏನಾದರೂ ಮಾಡುವೆನು!

ಲ:—ಹಾಗಾದರೆ ನಿನಗೇನಾದರೂ ಕೆಲಸ ಸಿಕ್ಕಿದ ಹಾಗೆಯೇ ಸರಿ!

ರಾ:—ಯಾಕೆ ಸಿಕ್ಕಲಾರದು?

ಲ:—ಕೂಲಿ ಕೆಲಸವಾದರೂ ಸುಲಭವಾಗಿ ಸಿಗಲಾರದು. ಒಂದೊಮ್ಮೆ ಸಿಕ್ಕಿದರೂ ಅದನ್ನು ತೃಪ್ತಿಕರವಾಗಿ ಮಾಡುವುದು ಬಹಳ ಕಷ್ಟವಾಗುವುದು. ಅದಕ್ಕೂ ಬಹಳ ಅಭ್ಯಾಸಬೇಕು; ಅನುಭವಬೇಕು.

ರಾ:—ರೈಲ್ವೇ ಅಥವಾ ಬಸ್‌ಸ್ಟೇಶನುಗಳ ಕೂಲಿ ಕೆಲಸಕ್ಕೆಂತಹ ಅನುಭವ ಬೇಕು?

ಲ:—ಏನು ಅನುಭವಬೇಕೆಂದು ನೀನೊಂದು ದಿವಸ ಆ ಕೆಲಸ ಮಾಡಿ ನೋಡಿದರೆ ತಿಳಿಯುವೆ. ಒಂದೇ ದಿನದಲ್ಲಿ ನಿನಗದು ಸಾಕೆನಿಸದಿದ್ದಲ್ಲಿ ನನ್ನ ಹೆಸರು ಲಕ್ಷ್ಮೀನಾರಾಯಣನಲ್ಲ.

ರಾ:—ಅದೇಕೆ?

ಲ:—ಅದೇಕೆಂದು ಒಂದೇ ದಿನದ ಅನುಭವದಿಂದಲೇ ನಿನಗೆ ವೇದ್ಯವಾಗುವುದು.

ರಾ:—ಆಗಲಿ ನೋಡುವೆನು. ವಿಶ್ವವಿದ್ಯಾಲಯದಲ್ಲಿ ಕಲಿತು ಬಿ. ಎ. ಪದವೀಧರನಾಗಿರುವೆನು. ಈಗ ಅನುಭವದ ಪಾಠಶಾಲೆಯಲ್ಲಿ ಕಲಿತು ಕಲಿತು ಜೀವನದ ತರಗತಿಗಳಲ್ಲಿ ತೇರ್ಗಡೆಹೊಂದಿ ಸ್ನಾತಕನಾಗುವೆನು.

ಲ:—ರಾಮು, ನಿಜವಾಗಿ ಅಪಹಾಸ್ಯಕ್ಕೊಳಗಾಗುವೆ ನೀನು.

ಇನ್ನೂ ಕೆಲಸವುಯ ತಾಳ್ಮೆಯಿಂದಿದ್ದರೆ ನಿನಗೇನಾದರೊಂದು ಉದ್ಯೋಗ ದೊರೆಯದಿರಲಾರದು. ನಿನಗೆಲ್ಲಿಯಾದರೂ ಟ್ಯೂಶನ್ ಸಿಗುವುದೋ ನೋಡುವೆನು ನಿನ್ನೆ ನನ್ನ ಮಿತ್ರರೊಬ್ಬರೊಡನೆ ಮಾತಾಡಿರುವೆನು.

ರಾ:— ಕೂಲಿಕೆಲಸಕ್ಕೆ ಹೋಗಿಯೇ ಸಿದ್ಧ ನನಗೆ. ಅದರಿಂದ ನಾನೆಷ್ಟು ನಗೆಗೀಡಾದರೂ ಚಿಂತೆಯಿಲ್ಲ. ಅದೂ ಒಂದು ಜೀವನದ ಪಾಠವಾಗುವುದು.

ಲ:—ಆಗಲಿ, ಹಾಗಾದರೆ ನಿನ್ನಿಚ್ಛೆಯಂತೆಯೇ ಮಾಡಿ ನೋಡು. ಸ್ವಾನುಭವಕ್ಕಿಂತ ದೊಡ್ಡ ಬೋಧಕನು ಇನ್ನೊಬ್ಬನಿಲ್ಲ. ಈಗ ಬಾವಟೆ ಗುಡ್ಡೆಯ ವರೆಗಾದರೂ ಹೋಗಿಬರುವ.

ರಾ:—ಬಾವಟೆಗುಡ್ಡೆಗೆ ಹೋಗಿ ಸಿಕ್ಕ ಹುಡುಗಿಯರಿಗೆಲ್ಲಾ ತಮಾಷೆ ಮಾಡಿ ಕಾಲಕಳೆಯುವುದಾದರೆ ನಾನು ಬರುವುದಿಲ್ಲ. ಕದ್ರಿಗುಡ್ಡೆಗೆ ಹೋಗುವ.

ಲ:—ಕದ್ರಿಗುಡ್ಡೆಗೆ? ಯಾಕೆ ಮಣ್ಣಿಗೆ? ಬಾ, ಬಾವಟೆಗುಡ್ಡೆಗೇನೆ ಹೋಗುವ. ಹುಡುಗಿಯೊಬ್ಬಳಿಗಾಗಿ ನೀನೀಗ ಯಾವ ತ್ಯಾಗಕ್ಕೂ ಸಿದ್ಧನಿರುವಾಗ ನಾನು ಹುಡುಗಿಯರನ್ನು ನೋಡಿ ತಮಾಷೆಮಾಡ ಬಾರದೇ? ಏನು ಮಾತಿದು ರಾಮು. ಬಾ. (ಕೈಹಿಡಿದು ಕರೆದೊಯ್ಯು ವನು.)

ನೋಟ ೨

(ಮನೆ. ದುಗ್ಗಪ್ಪಶೆಟ್ಟಿಯು ತನ್ನ ಹೆಂಡ್ತಿ ನಾಗಮ್ಮನ ಚಾಕರಿಯವಳಾದ ರಂಗುವಿನ ಮೂಲಕ, ಅಮ್ಮ ಯಾಕೋ ಬರಹೇಳಿದರೆಂದು ಕಿಟ್ಟುವನ್ನೂ, ಸುಂದರಿಯನ್ನೂ ಮನೆಗೆ ಬರಮಾಡಿಸುವನು. ಈ ಸಂದರ್ಭದಲ್ಲಿ ನಾಗಮ್ಮ ನು ಮನೆಬಿಟ್ಟು ದೇವಸ್ಥಾನಕ್ಕೆ ಹೋಗುವಂತೆ ಮೊದಲೇ ಉಪಾಯಮಾಡಿ ದ್ದನು. ರಂಗು, ಸುಂದರಿಯನ್ನೂ ಕಿಟ್ಟುವನ್ನೂ ಮನೆ ಉಪ್ಪರಿಗೆಗೆ ಕರ ದೊಯ್ದು, "ಅಮ್ಮನಿಗೆ ತಿಳಿಸುತ್ತೇನೆ, ಅವರೀಗಲೇ ಬರುವರು" ಎಂದು ಹೇಳಿ ಹೊರಟುಹೋಗುವಳು. ಸ್ವಲ್ಪ ಹೊತ್ತಿನಲ್ಲಿ ಉಪ್ಪರಿಗೆ ಬದಿಯ ಕೋಣೆಯ ಬಾಗಿಲನ್ನು ಮೆಲ್ಲಗೆ ತೆರೆದು ದುಗ್ಗಪ್ಪ ಶೆಟ್ಟಿಯು ಬರುವನು.)

ಕಿಟ್ಟು:—(ದಿಗಿಲುಗೊಂಡು) ಎಲ್ಲಿ? ಶೆಟ್ಟಿಯರೆಲ್ಲಿ?

ದು:—ಅವಳು ದೇವಸ್ಥಾನಕ್ಕೆ ಹೋಗಿರುವಳು. ಈಗಲೇ ಬರುವಳು. ಕಿಟ್ಟು, ನಿಂತಿರುವಿರೇಕೆ? ಕೂತುಕೊಳ್ಳಿ. ವೀಳ್ಯ ಹಾಕುವ ಅಭ್ಯಾಸವಿದೆಯೋ?

ಕಿ:—ಇಲ್ಲ ಶೆಟ್ರೆ. ಶೆಡ್ತಿಯವರು ನಮ್ಮನ್ನು ಬರಮಾಡಿಸಿ ದೇವಸ್ಥಾನಕ್ಕೆ ಹೋಗಲು ಕಾರಣವೇನು?

ದು:—(ನಸುನಕ್ಕು) ಅದೇನೋ ಅವಳಿಗೇ ಗೊತ್ತು. ಅವಳು ಬರುವನಕವಾದರೂ ನೀವು ನನ್ನೊಡನೆ ಮಾತಾಡಿಕೊಂಡಿರಬಾರದೇ?

ಕಿ:—ನಿಮ್ಮೊಡನೆ ನಾವೇನು ಮಾತಾಡುವುದು ಹೆಣ್ಣು ಹೆಂಗಸರು? ಶೆಡ್ತಿಯವರು ಬರಲು ಹೆಚ್ಚು ಹೊತ್ತು ಹಿಡಿದೀತೆ?

ದು:—(ಸಿಧ್ಧಾರಪೂರ್ವಕ ಮುಖ ಮುದ್ರೆಯಿಂದ) ನಾನೇ ನಿಮ್ಮನ್ನು ಕರೆಸಿದುದು ಶೆಡ್ತಿಯವರ ಹೆಸರು ಹೇಳಿ. ಅವಳಿಗೇನು ಈ ಸಂಗತಿ ಗೊತ್ತಿಲ್ಲ.

ಕಿ:—ಏನು? ನೀವೇ ನಮ್ಮನ್ನು ಕರೆಸಿದುದೇ? ಏತಕ್ಕಾಗಿ?

ದು:—ನಿನ್ನೀ ಸುಂದರ ಪುತ್ರಿ ಸುಂದರಿಗಾಗಿ!

ಕಿ:—ಏನೆಂದರಿ? ಸುಂದರಿಗಾಗಿ?

ದು:—ಕಿಟ್ಟು, ಸಿಟ್ಟು ಮಾಡಬೇಡ. ತಾಳ್ಮೆಯಿಂದ ನಾನು ಹೇಳುವುದನ್ನೆಲ್ಲಾ ಕೇಳು.

ಸು:—ನೀವು ಹೇಳುವುದನ್ನೆಲ್ಲಾ ಕೇಳಲು ನಾವಿಲ್ಲಿ ಬಂದವರಲ್ಲ. ನಿಮ್ಮ ಸಂಗತಿಯೆಲ್ಲಾ ನಮಗೆ ಮೊದಲೇ ಗೊತ್ತಿದೆ. ನಿಮ್ಮ ಹೆಂಡತಿ ಒಳ್ಳೆಯವರೆಂದು ಕೇಳಿದ್ದೇವೆ. ಅವರೊಡನೆ ಮಾತಾಡಲು ಬಂದವರು ನಾವು.

ದು:—ನನ್ನೊಡನೆ ಮಾತಾಡಲೂ ಕೂಡದೇ? ಅಷ್ಟೊಂದು ಕೆಟ್ಟವನೆ ನಾನು?

ಸು:—ನೀವು ಕೆಟ್ಟವರಾಗಲಿ, ಒಳ್ಳೆಯವರಾಗಲಿ ನಮಗೇನು? ನಿಮ್ಮ ಹೆಂಡತಿ ಕರೆಸಿದ ಪ್ರಕಾರ ನಾವು ಅವರೊಡನೆ ಮಾತಾಡಬಂದವರು; ನಿನ್ನೊಡನಲ್ಲ.

ದು:— ನೀವು ಮಾತಾಡುವುದು ಬೇಡ. ನಿಮ್ಮ ಹಿತದೃಷ್ಟಿಯಿಂದ ನಾನು ಹೇಳುವ ಕೆಲವು ಮಾತುಗಳನ್ನಾದರೂ ಕೇಳಬಾರದೇ?

ಕಿ:—ನೀವು ಮಾತಾಡದಂತೆ ನಮ್ಮಿಂದ ತಡೆಮಾಡಲು ಸಾಧ್ಯವಿದೆಯೇ?

ದು:—ನಿಮಗೆ ಆ ವೆಂಕಟ್ರಮಣ ಭಟ್ಟನು ಬಹಳ ಪೀಡೆಕೊಡುತ್ತಿರುವಲ್ಲನವೇ ಕಿಟ್ಟು?.

ಕಿ.—ಹೂಂ.

ದು:—ಅವನ ಪೀಡೆಯನ್ನೆಲ್ಲಾ ನಾನು ಒಂದೇ ಒಂದು ಕ್ಷಣದಲ್ಲಿ ನಿಲ್ಲಿಸಿ ಬಿಡುವೆನು/

ಕಿ:—ಹೂಂ.

ದು:—ಸೋಮನು ನೀವು ಹೇಳಿದಂತೆ ಕೇಳುವ ಹಾಗೆ ಮಾಡುವೆನು.

ಕಿ:—ಹೂಂ, ಅಗಲಿ.

ದು:—ನಿಮ್ಮ ಮೂಲಗೇಣಿ ಆಸ್ತಿಗೆ ಲಗ್ತಿ ಇರುವ ನಮ್ಮ ಆಸ್ತಿಯನ್ನೆಲ್ಲಾ ನಿಮಗೆ ಅತಿ ಕಡಿಮೆ ಗೇಣಿಗೆ ಮೂಲಗೇಣಿಗೆ ಕೊಟ್ಟು ನಿಮ್ಮನ್ನೊಂದು ತುಂಡು ವರ್ಗದಾರರನ್ನಾಗಿ ಮಾಡುವೆನು.

ಕಿ:—ಮತ್ತೇನು ಮಾಡುವಿರಿ?

ದು:—ಊರಲ್ಲಿ ನಿಮ್ಮ ಜಾತಿ ಪೈಕಿ ನಿಮ್ಮ ಮನೆಯನ್ನೇ ಒಂದನೇದನ್ನಾಗಿ ಮಾಡಿ ಇತರರೆಲ್ಲರೂ ನೀವು ಹೇಳಿದಂತೆ ನಡೆಯುವ ಹಾಗೆ ಮಾಡುವೆನು.

ಕಿ:— ನಿಮಗೇನಗತ್ಯ ಇಷ್ಟೆಲ್ಲಾ ಮಾಡಬೇಕೆಂದು?

ದು:—ಆದರೆ ನನ್ನೊಂದು ಇಚ್ಛೆಯನ್ನು ಮಾತ್ರ ನೀವು ಸಲಿಸಬೇಕು.

ಕಿ:—ಏನಾ ಇಚ್ಛೆ?

ದು:—ನಿನ್ನ ಮಗಳು ಸುಂದರಿ ನನ್ನವಳಾಗಬೇಕು. ಆ ನಿರ್ಗತಿಕ ರಾಮುಭಟ್ಟನನ್ನು ಕಟ್ಟಿಕೊಂಡು ಅವಳೇನು ಮಾಡುವುದು? ಅವನೀಗ ನಿರುದ್ಯೋಗಿಯಾಗಿ ಅಲೆಯುತ್ತಿದ್ದಾನಂತೆ ಮಂಗಳೂರಲ್ಲಿ ಬೀದಿ ಬೀದಿ!

ಸು:—(ಕೋಪವನ್ನು ತಾಳಿಕೊಳ್ಳಲಾರದೆ) ಬಾಯಿಮುಚ್ಚಿರಿ. ಮನಬಂದಂತೆ ಮಾತಾಡಬೇಡಿರಿ.

ಕಿ:—ಶೆಟ್ರೇ! ನಿಮ್ಮ ಮಾತೆಲ್ಲಾ ಮುಗಿಯಿತೇ? ಇನ್ನೇನಾದರೂ ಹೇಳಲಿದೆಯೋ?

ದು:—ಇನ್ನೇನು ಹೇಳಲಿ ನಾನು!

ಕಿ:—ಇನ್ನೇನೂ ಹೇಳಲಿಕ್ಕಿಲ್ಲವಲ್ಲ? ಹಾಗಾದರೆ ನಮಗಿನ್ನು ಇಲ್ಲಿ ಕೂತುಕೊಳ್ಳಲು ಸಾಧ್ಯವಿಲ್ಲ. ಬೇರೆ ಕೆಲಸವಿದೆ. ಹೋಗುತ್ತೇವೆ. (ಸುಂದರಿಯ ಕಡೆಗೆ ತಿರುಗಿ) ನಡೆ ಸುಂದರಿ, ಹೋಗುವ. (ಹೊರಡಲನುವಾಗುವರು).

ದು:—(ಫಕ್ಕನೆ ಉಪ್ಪರಿಗೆಯ ಹೊರ ಬಾಗಿಲ ಬಳಿಗೋಡಿ ನಿಂತು) ಹೋಗುವುದೆಲ್ಲಿಗೆ? ನಿಲ್ಲಿರಿ.

ಕಿ:—ಶೆಟ್ರಿ, ದಯಮಾಡಿ ಅತ್ತ ಸರಿಯಿರಿ. ನಮ್ಮನ್ನು ಹೋಗ ಬಿಡಿರಿ. ಬಡವರಾದ ನಮ್ಮನ್ನು ನೀವೀ ರೀತಿ ಪೀಡಿಸುವುದು ಸರಿಯಲ್ಲ.

ದು:—ನೀನು ಬೇಕಾದರೆ ಹೋಗು. ಸುಂದರಿಯನ್ನು ನಾನು ಎಷ್ಟಕ್ಕೂ ಹೋಗಬಿಡಲಾರೆ. ಅವಳನ್ನು ನನ್ನವಳನ್ನಾಗಿ ಮಾಡಿಕೊಂಡೇ ಸಿದ್ಧ ನನಗೆ. ನಿನ್ನ ಮಗಳು ಇಷ್ಟು ಸುಂದರಿಯೆಂದು ನನಗೆ ತಿಳಿದುದು ಇತ್ತಲಾಗಿ. ಆ ಬ್ರಾಹ್ಮಣ ಸುಮ್ಮನೆ ಮರುಳಾಗಿ ಹೋದುದಲ್ಲ.

ಕಿ:—(ಸಿಟ್ಟೇರಿ ಬಂದರೂ ತಡಕೊಂಡು) ಶೆಟ್ರೇ, ಮಾನವಂತರೂ ಮರ್ಯಾದಸ್ಥರೂ ಆದ ನೀವೇ ನಮ್ಮಂತಹ ದೀನರನ್ನು ಈ ರೀತಿ ಮಾನಗೆಡಿಸಲು ಮುಂದಾದರೆ ಹೇಗೆ?

ದು:—ಮಾನಾಪಮಾನದ ವಿಚಾರವನ್ನೆಲ್ಲಾ ನನ್ನೊಡನೆ ಮಾತಾಡಿ ಫಲವಿಲ್ಲ ಕಿಟ್ಟು. ಅದನ್ನು ಒರೆದೊರೆದು ಚೆನ್ನಾಗಿ ಪರೀಕ್ಷಿಸಿ ನೋಡಿರುವವನು ನಾನು. ಧನ ಮತ್ತು ಬಲವಿದ್ದಲ್ಲಿಗೆ, ಮಾನ ಮರ್ಯಾದೆಗಳು ಸ್ವತಹ ಹೋಗಿ ಜಯಮಾಲೆ ಹಾಕುವವು.

ಕಿ:—ಹಾಗಾದರೆ ನೀವೀಗ ನಮ್ಮನ್ನೇನು ಮಾಡುವಿರಿ?

ದು:—ನಾನು ಹೇಳಿದಂತೆ ಈ ಸುಂದರಿಯು ಕೇಳಿದರಾಯಿತು.

ಇಲ್ಲವಾದರೆ ಬಲಾತ್ಕಾರದಿಂದ ನಾನವಳ ಮಾನ ಕೆಡಿಸುವೆನು. ನಿಮ್ಮ ಮನೆ ಗುಂಡಾಂತರ ಮಾಡುವೆನು. ನಿಮ್ಮನ್ನು ಈ ಊರಿನಲ್ಲೇ ನಿಲ್ಲದ ಹಾಗೆ ಮಾಡುವೆನು.

ಸು:—ಪ್ರಾಣಹೋದರೂ ನಾನು ನೀವು ಹೇಳಿದ ಹಾಗೆ ಕೇಳಲಾರೆ. ನೀವು ಏನು ಬೇಕಾದರೂ ಮಾಡಬಹುದು.

ಕಿ:—ಶೆಟ್ರೇ, ನೀವು ಹೀಗೆ ಅನ್ಯಾಯಮಾಡುವುದು ನ್ಯಾಯವಲ್ಲ. ದೇವರು ನಿಮಗೆ ಒಳ್ಳೇದು ಮಾಡಲಿಕ್ಕಿಲ್ಲ.

ದು:—ಸಾಕುಮಾಡು ನಿನ್ನ ನೀತಿಬೋಧೆ! ನಡಿ ಇಲ್ಲಿಂದ ಕೆಳಗೆ!

ಕಿ:—ನನ್ನ ಹೆಣದ ಮೇಲೆ ನಡೆದುಹೋಗಿ ನೀವು ಸುಂದರಿಯ ಮೇಲೆ ಕೈಮಾಡಬೇಕು. (ಶೆಟ್ರನ್ನು ತಡೆಗಟ್ಟಿ ನಿಲ್ಲುವಳು.)

ದು:—ಅಷ್ಟು ಪಂಥವಿದೆಯೋ ನಿನಗೆ ಮುದುಕಿಗೆ! ಹಾಗಾದರೆ ನೋಡುವ. ಬಂಟಪ್ಪ! ದೂಮು! (ಗಟ್ಟಿಯಾಗಿ ಕರೆಯುವನು. ಅವರಿಬ್ಬರೂ ಓಡಿಬಂದು ದುಗ್ಗಪ್ಪ ಶೆಟ್ರ ಎದುರಿನಲ್ಲಿ ನಿಲ್ಲುವರು.) ನೋಡುತ್ತಿರುವುದೇನನ್ನು ಗೊಂಬೆಗಳಂತೆ ನಿಂತು ನೀವು? ಇವಳ ಬಾಯಿಗೆ ವಸ್ತ್ರ ತಳ್ಳಿರಿ. ಇಬ್ಬರೂ ಹಿಡಿದು ಎತ್ತಿಕೊಂಡು ಹೋಗಿ ಕಾಲು ಕೈ ಕಟ್ಟಿ ಹಟ್ಟಿಯಲ್ಲೊಂದು ಮೂಲೆಯಲ್ಲಿ ಹಾಕಿಬಿಡಿರಿ. ಬಿದ್ದುಕೊಂಡಿರಲಿ ಅಲ್ಲಿ! ನನ್ನೊಡನೆ ಪಂಥಕ್ಕೆ ನಿಂತಿದ್ದಾಳವಳು! ನೋಡುವ ಅವಳ ಪಂಥ ಎಲ್ಲಿ ವರೆಗೆ ಬರುತ್ತದಂತ! ಏನು ಅಹಂಕಾರ! (ಬಂಟಪ್ಪನೂ ದೂಮುನೂ ಕಿಟ್ಟುವನ್ನು ಹಿಡಿದು ಅವಳ ಬಾಯಿಗೆ ವಸ್ತ್ರ ತುರುಕುವರು. ಅವಳು ಕೂಗುವಳು. ಸುಂದರಿಯೂ ಗಟ್ಟಿ ಕೂಗುವಳು. ಆಗ ದುಗ್ಗಪ್ಪ ಶೆಟ್ಟಿಯು ಅವಳನ್ನು ಎಳದೊಯ್ದು ಅವಳ ಬಾಯಿಗೆ ತನ್ನ ಬೈರಾಸು ತುರುಕಿ ಬಲಾತ್ಕಾರದಿಂದ ಮುಚ್ಚುವನು. ಅವಳು ಬೋಧತಪ್ಪಿ ಬೀಳುವಳು. ಬಂಟಪ್ಪ ಮತ್ತು ದೂಮನು ಕಿಟ್ಟುವನ್ನು ಹಿಡಿದು ಕೆಳಗೊಯ್ಯುವರು. ದುಗ್ಗಪ್ಪ ಶೆಟ್ಟಿಯು ಸ್ವಲ್ಪ ತಳಮಳಗೊಂಡು ಒಮ್ಮೆಯೇ ಮನೆಯ ಒಳಗೋಡಿ ಒಂದು ತಂಬಿಗೆ ನೀರು ತಂದು ಸುಂದರಿಯ ಮುಖಕ್ಕೆ ಚಿಮುಕಿಸಿ ಬೈರಾಸಿನಿಂದ ಒರಸಿ ಉಪಚರಿಸುವನು.)

ಸು:—(ಎಚ್ಚತ್ತು ಫಕ್ಕನೆ ಎದ್ದು ನಿಂತು) ಎಲ್ಲಿ, ಶೆಡ್ತಿಯರೆಲ್ಲಿ? ಅಯ್ಯೋ! ಅಮ್ಮನೆಲ್ಲಿ? ಅಮ್ಮ! ಅಮ್ಮ! (ಬೊಬ್ಬೆ ಹಾಕುತ್ತಾ ಉಪ್ಪರಿಗೆಯ

ಮೆಟ್ಟಿಲುಗಳ ಕಡೆಗೆ ಓಡುವಳು. ದುಗ್ಗಪ್ಪ ಶೆಟ್ಟಿಯು ಅವಳನ್ನು ಹಿಡಿದು ಎಳದು ತರುವನು.)

ದು:—ಸುಂದರಿ, ನೀನಿನ್ನು ಛಲಮಾಡಿ ಫಲವಿಲ್ಲ. ನಿನ್ನೀ ಸೌಂದರ್ಯವನ್ನು ಮಣ್ಣುಗೂಡಿಸಬೇಕಾಗುವುದು. ಆದರಿಂದ ನಿನಗೆ ಸಿಗುವ ಪ್ರಯೋಜನವಾದರೂ ಏನು? ಹುಡುಗಾಟಿಕೆ ಮಾಡದೆ ಚೆನ್ನಾಗಿ ಯೋಚಿಸಿಕೊಳ್ಳು. ಏನಾದರೂ ಮಾಡಿ ತನ್ನ ಮನೋರಥವನ್ನು ಈಡೇರಿಸಿಕೊಳ್ಳದಿರುವವನು ದುಗ್ಗಪ್ಪ ಶೆಟ್ಟಿಯಲ್ಲ!

ಸು:—ಬಿಡಿರಿ ನನ್ನನ್ನು! (ಕೈಬಿಡಿಸಲೆತ್ನಿಸುವಳು.)

ದು:—ನನ್ನ ಕೈಬಿಡಿಸುವ ಶಕ್ತಿಯೂ ನಿನಗಿರುವುದೆ ಸುಂದರಿ? ನಿನ್ನ ಮೃದುಮಧುರ ತುಟಿಗಳನ್ನು ನಾನು ಬಲಾತ್ಕಾರದಿಂದ ಚುಂಬಿಸುವ ಬದಲಿಗೆ ನೀನೇ ಸಂತೋಷದಿಂದ ನನ್ನನ್ನು ಚುಂಬಿಸಿ ನಾವಿಬ್ಬರೂ ಆನಂದಿಸಬಾರದೇಕೆ? (ಚುಂಬಿಸಲೆತ್ನಿಸುವನು.)

ಸು:—(ಫಕ್ಕನೆ ಕೆನ್ನೆಗೊಂದೇಟು ಬಲವಾಗಿ ಹೊಡೆದು) ಇದೇ ನನ್ನ ಸಂತೋಷದ ಚುಂಬನ. ಆನಂದಿಸು, ನೀಚಾ ಆನಂದಿಸು! (ದುಗ್ಗಪ್ಪ ಶೆಟ್ಟಿಯು ಪೆಟ್ಟಿನ ನೋವಿನಿಂದ ಅತ್ಯಂತ ಸಿಟ್ಟೇರಿ ಪಾಶವಿಕವಾಗಿ ಸುಂದರಿಯನ್ನು ಬಲಾತ್ಕಾರದಿಂದ ಉಪ್ಪರಿಗೆಯ ಕೋಣೆಗೆ ಎಳದೊಯ್ಯಲೆತ್ನಿಸುವನು. ಆಗ ನಾಗಮ್ಮನು ಉಪ್ಪರಿಗೆಯ ಮೆಟ್ಟಲಿಂದ ಧಡಧಡನೆ ಮೇಲೇರಿ ಬರುವಳು. ದುಗ್ಗಪ್ಪ ಶೆಟ್ಟಿಯು ಅವಾಕ್ಕಾಗಿ ಚಿತ್ರದ ಗೊಂಬೆಯಂತೆ ನಿಂತುಬಿಡುವನು. ಸುಂದರಿಯು ನಾಗಮ್ಮನ ಕಾಲಿಗೆ ಬಿದ್ದು) ಅಮ್ಮಾ, ರಕ್ಷಿಸಿರಿ ಅನಾಥರನ್ನು!. ನನ್ನ ತಾಯಿಯನ್ನು ಎಲ್ಲಿಗೋ ಬಲಾತ್ಕಾರದಿಂದೆತ್ತಿಕೊಂಡು ಹೋಗಿದ್ದಾರೆ. ನನ್ನ ಮಾನಭಂಗಮಾಡುತ್ತಿದ್ದಾರೆ. ಅಮ್ಮ ನನ್ನೇನು ಮಾಡಿದರೋ ಏನೋ!

ನಾ:—ಸುಂದರಿ, ಗಾಬರಿಗೊಳ್ಳಬೇಡ. ನಿನ್ನ ತಾಯಿಗೇನೂ ಆಗುವ ಹಾಗಿಲ್ಲ. ಏಳು (ಕೈಹಿಡಿದೆಬ್ಬಿಸಿ ದುಗ್ಗಪ್ಪ ಶೆಟ್ಟಿಯನ್ನು ಧುರಧುರನೆ ನೋಡುತ್ತಾ ನಿಲ್ಲುವಳು. ಆ ಕ್ರೂರ ದೃಷ್ಟಿಯನ್ನು ತಾಳಿಕೊಳ್ಳಲಾರದೆ ದುಗ್ಗಪ್ಪ ಸೆಟ್ಟಿಯು ಸಿಕ್ಕಿಬಿದ್ದ ಕಳ್ಳನಂತೆ ಅಂಜುತ್ತಂಜುತ್ತ ನಾಗಮ್ಮನನ್ನು ಒಮ್ಮೆಯೂ ನೋಡದೆ ಮುಖತಗ್ಗಿಸಿಕೊಂಡು ಕೆಳಗೆ ಹೋಗಿಬಿಡುವನು.)

ಸು:—ಅಮ್ಮನನ್ನೊಮ್ಮೆ ಹೇಗಾದರೂ ಬಿಡಿಸಿರಮ್ಮ! ಅವಳನ್ನೇನು ಮಾಡುತ್ತಿರುವರೋ ಆ ದುರಾತ್ಮರು!

(ನಾಗಮ್ಮ ಬಂದುದನ್ನು ನೋಡಿ ಬಂಟಪ್ಪ ಮತ್ತು ದೂಮನು ಕಿಟ್ಟುವನ್ನು ಬಿಟ್ಟು ಓಡಿಹೋಗುವರು. ಕಿಟ್ಟುವು ಒಂದೇಸಮನೆ ಉಪ್ಪರಿಗೆಗೋಡಿ ಬಂದು ನಾಗಮ್ಮನನ್ನು ಕಂಡು ಥರಥರ ಕಣ್ಣೀರಿಳಿಸುತ್ತಾ ಅವಳ ಕಾಲಿಗೆ ಬೀಳುವಳು.)

ನಾ:—ಏಳು ಕಿಟ್ಟು ಏಳು! (ಎಬ್ಬಿಸಿ ಸೆರಗಿಂದ ಕಣ್ಣೀರೊರಸುವಳು.)

ಕಿ:—ಅಮ್ಮಾ, ನಾವಿನ್ನು ಈ ಊರಲ್ಲಿ ಮರ್ಯಾದೆ ಇಟ್ಟುಕೊಂಡು ಜೀವಿಸಲು ಸಾಧ್ಯವಿಲ್ಲ.

ನಾ:—ನನಗೆಲ್ಲವೂ ಗೊತ್ತಿದೆ ಕಿಟ್ಟು. ನನ್ನ ಅದೃಷ್ಟ, ನಾನೇನು ಮಾಡಲಿ! ನುಂಗಲಿಕ್ಕೂ ಅಲ್ಲ, ಉಗುಳಲಿಕ್ಕೂ ಅಲ್ಲೆಂಬಂತಾಗಿದೆ ನನ್ನ ಅವಸ್ಥೆ. (ಕಣ್ಣೀರಿಡುವಳು.)

ಕಿ:—ನೀವೂ ಉಭಯಸಂಕಟದಲ್ಲಿ ಬಿದ್ದಿದ್ದೀರಮ್ಮಾ. ಆದರೆ, ಅಮ್ಮಾ, ಆದರೆ.... (ಮುಂದೆ ಮಾತಾಡಲಾರದೆ ಒಂದೇ ಸಮನೆ ಕಣ್ಣೀರಿಡುವಳು.)

ನಾ:—ಕಿಟ್ಟು, ಏನುಬೇಕಾದರೂ ಆಗಲಿ. ಅವರಿನ್ನು ನನ್ನ ಮನೆಯಲ್ಲಿರಬಾರದು. ನಿನ್ನ ಮಗಳ ಮಾನವೇನು? ನನ್ನ ಮಾನವೇನು? ನಿಮಗಿನ್ನು ಅವರೇನಾದರೂ ಉಪಟಳವೀಯದಂತೆ ನಾನು ರಕ್ಷಣೆಕೊಡುವೆನು. ಪ್ರತಿನಿತ್ಯವೂ ನಿಮ್ಮ ಮನೆ ಕಾವಲಿಗೆ ಇಬ್ಬರು ಪಕ್ಕಲುಗಳನ್ನು ಕಳುಹಿಸುವೆನು. ಈಗ ನೀವು ಹೋಗಿರಿ. ಅವರನ್ನೀಗ ನಾನೊಮ್ಮೆ ಕಾಣಬೇಕಾಗಿದೆ.

ಕಿ:—ಆಯ್ತಮ್ಮಾ, ಬಹಳ ಉಪಕಾರವಾಯಿತು. ಹೋಗುತ್ತೇವೆ. (ಹೋಗುವರು)

ನೋಟ ೩

(ಮಂಗಳೂರಿನ ಮೈದಾನಿನ ಬಳಿಯ ರಸ್ತೆ. ರಾಮುಭಟ್ಟನು ಸಂಜೆಯ ವರೆಗೂ ಬಂತಿರುಗದಿರಲು ಲಕ್ಷ್ಮೀನಾರಾಯಣನು ಕಳವಳಪಟ್ಟು ಅವನನ್ನು ಹುಡುಕಿಕೊಂಡು ಹೋಗುವನು. ರಾಮುಭಟ್ಟನು ಮೈದಾನಿನ ಬಳಿ ಅದೇನೋ ಗಾಢ ಚಿಂತಾಮಗ್ನನಾಗಿ ಬಾಹ್ಯಲೋಕವನ್ನೇ ಮರೆತು, ನಡೆದುಬರುತ್ತಿರುವುದನ್ನು ಕಂಡು ಲಕ್ಷ್ಮೀನಾರಾಯಣನು ಒಂದು ಬದಿಗೆ ಸರಿದು ನಿಲ್ಲುವನು. ರಾಮುಭಟ್ಟನು ಅವನನ್ನು ನೋಡದೆ ಯಥಾ ಪ್ರಕಾರ ಮುನ್ನಡೆದು ಹೋಗುತ್ತಿರುವಾಗ ಹಿಂದಿನಿಂದ ಹೋಗಿ ಅವನ ಶರ್ಟ್ ಹಿಡಿದೆಳೆದು ಫಕ್ಕನೆ ನಿಲ್ಲಿಸುವನು).

ರಾಮು:—(ಫಕ್ಕನೆ ಕನಸಿನಿಂದ ಎಚ್ಚತ್ತವನಂತಾಗಿ) ಯಾರದು? (ಹಿಂದೆ ನೋಡುವನು).

ಲಕ್ಷ್ಮೀನಾರಾಯಣ:—ನಾನು ಮಹಾ ಸ್ವಾಮಿ. ಅವಧೂತರೇ! ಯಾವಾಗಿಂದ ಅವಧೂತಾಶ್ರಮ ತೆಗೆದುಕೊಂಡುದು ತಾವು? ಎಲ್ಲಿಯಾದರೂ ಮೋಟಾರಿನಡಿ ಬಿದ್ದು ಪ್ರಾಣ ಹೋಗಿಬಿಟ್ಟರೆ ಆ ಸುಂದರಿಗಾಗಿ ಪ್ರಾಣ ಕೊಡುವುದೆಲ್ಲಿಂದ ಮತ್ತೆ?

ರಾ:—ಏನಿದು ಹುಡುಗಾಟಿಕೆ ನಾರಾಯಣ, ನಡುರಸ್ತೆಯಲ್ಲಿ?

ಲ:—ಹುಡುಗಾಟಿಕೆ ನನ್ನದಲ್ಲ, ನಿನ್ನದು. ನಡುರಸ್ತೆಯಲ್ಲಿ ಚಿಂತಾಮಗ್ನನಾಗಿ ಹೊರಗಣ ಲೋಕವನ್ನೇ ಮರೆತು ನಡೆಯುತ್ತಿರುವುದು! ಪುಣ್ಯಕ್ಕೆ ಕಾರುಗೀರೇನೂ ಬರಲಿಲ್ಲ.

ರಾ:—ಸಾಕು ಸಾಕು! ನಾನೇನು ಮಂಗಳೂರಿಗೆ ಹೊಸತಾಗಿ ಬಂದ ಹಳ್ಳೀ ಹುಂಬನೆಂದು ಬಗೆದೆಯಾ?

ಲ:—ಅದಂತಿರಲಿ, ನೀನು ಅದೇನು ಗಾಢ ಚಿಂತಾಮಗ್ನನಾಗಿದ್ದುದು?

ರಾ:—ನಿರುದ್ಯೋಗಿಗಳಾದ ನಮಗೆ ಚಿಂತೆ ಮಾಡುವುದೇ ಉದ್ಯೋಗವಲ್ಲದೆ ಮತ್ತೇನು ಕೆಲಸವಿದೆ ನಾರಾಯಣ?

ಲ:—ಅದೆಲ್ಲಾ ಹಾಗಿರಲಿ, ಎಷ್ಟು ಮಜೂರಿ ಸಂಪಾದಿಸಿದೆ ಇಂದು? ಲೆಕ್ಕ ಕೊಡು ನೋಡುವ. ಪ್ರತಿದಿನ ನಿನ್ನ ಲೆಕ್ಕ ತೆಗೆದುಕೊಳ್ಳುವ ಯಜಮಾನ ನಾನು.

ರಾ:—ಸಿಕ್ಕಿತು ಸಿಕ್ಕಿದಷ್ಟು!

ಲ:—ಸಿಕ್ಕಿದಷ್ಟೆಂದರೆ ಎಷ್ಟು? ಅದಕ್ಕೊಂದು ಲೆಕ್ಕವಿಲ್ಲವೇ? ನೀನಿಂದು ಮಧ್ಯಾಹ್ನ ಊಟಮಾಡಿದುದೆಲ್ಲಿ?

ರಾ:—ಅಲ್ಲೊಂದು ಕಡೆ ಊಟ ಮಾಡಿದೆ.

ಲ:—ನಿನ್ನ ಮುಖ ಬಹಳ ಬಾಡಿ ಹೋಗಲು ಕಾರಣವೇನು ರಾಮು? ಮೈಯೆಲ್ಲಾ ಜೀವಂ ಹೋಗಿದೆ! ಏನು, ಏನಾಯಿತು ಹೇಳು ರಾಮು? ನನ್ನಾಣೆ ಉಂಟು ಸತ್ಯ ಹೇಳದಿದ್ದರೆ!

ರಾ:—ನೀನು ಹೇಳಿದ ಹಾಗೆಯೇ ಆಯಿತು.

ಲ:—ಇಡೀ ದಿವಸ ಊಟವೇ ಇಲ್ಲವೆ ನಿನಗೆ?

ರಾ:—ಇಲ್ಲ, ದುಡ್ಡೆಲ್ಲಿಂದ?

ಲ:—ಒಂದು ಪೈ ಕೂಡಾ ಸಂಪಾದನೆಯಾಗಲಿಲ್ಲವೇ?

ರಾ:—ಇಲ್ಲ. ನಾನು ಪೆಟ್ಟುಗಿಟ್ಟು ತಿನ್ನದೆ ಹಿಂತಿರುಗಿ ಬಂದುದೇ ದೊಡ್ಡದು.

ಲ:—ನಾನು ಮೊದಲೇ ಹೇಳಿದೆ ನಿನಗೆ! ಹೇಳು, ಏನಾಯಿತು ಹೇಳು? ಬರೇ ಲುಚ್ಛರವರು ರೈಲ್ವೆ ಕೂಲಿಗಳು. ನಿನಗೇನು ಹೊಡೆಯ ಬಂದರೇ? ಏನು ಮಾಡಿದರು ಹೇಳು?

ರಾ:—ನಾನವರೊಡನೆ ಮಾತಾಡ ಹೋಗಲಿಲ್ಲ. ಸುಮ್ಮನೆ ನಿಂತು ಕೊಂಡು, ರೈಲು ಬಂದ ಮೇಲೆ ಗೇಟಿನ ಬಳಿಗೆ ಹೋಗಿ ಪ್ರಯಾಣಿಕ ನೊಬ್ಬನ ಟ್ರಂಕು ಹಿಡಿದೆ. ನಾನೊಬ್ಬ ಕೂಲಿಯೆಂದು ಅವರಿಗೆ ಆ ವರೆಗೆ ತಿಳಿದಿರಲಿಲ್ಲ. ಆಗ, "ನೀನು ಯಾರು?" ಎಂದು ಉತ್ಸುಕತೆ ಯಿಂದ ಪ್ರಶ್ನಿಸಿದರವರು ನನ್ನೊಡನೆ. 'ನಿಮ್ಮಂತೆಯೇ ನಾನೂ ಒಬ್ಬ ಕೂಲಿ' ಎಂದೆ ನಾನು. 'ಕೂಲಿ! ಕೂಲಿಯಲ್ಲ ನೀನು ಬಚ್ಚಾಳಿ! ಒಳ್ಳೇ ಮಾತಿನಿಂದ ನಡಿಯುವಿಯೋ ಇಲ್ಲವೋ ಇಲ್ಲಿಂದ? ಸಾಮಾನನ್ನೆಲ್ಲಿಯಾ ದರೂ ಮುಟ್ಟಿದರೆ ಜಾಗ್ರತೆ!' ಎಂದು ಒಂದೇ ಸವನೆ ಇಬ್ಬರು ಮೂವರು ಬಂದು ನನ್ನ ಮೇಲೆ ಬಿದ್ದು ನನ್ನ ಕೈಯಲ್ಲಿದ್ದ ಟ್ರಂಕು ಕಸಕೊಂಡು ನನ್ನನ್ನೊಂದು ಕಡೆ ದೂಡಿಬಿಟ್ಟರು.

ಲ:—ಕೂಲಿ ಕೆಲಸ, ಕೂಲಿ ಕೆಲಸವೆಂದು ಪಲ್ಲವಿ ಹಾಡುತ್ತಿದ್ದೆ

ಯಲ್ಲ!? ತಿಳಿಯಿತಲ್ಲ ಈಗ ಅದೆಷ್ಟು ಕಷ್ಟವೆಂದು? ಸಮಾಜದಲ್ಲಿ ತೆಗೆದು ಹಾಕಿದ ಜನರವರು! ಸ್ವಲ್ಪವೇನಾದರೂ ನೀನು ಮಾತಾಡುತ್ತಿದ್ದರೆ ಪೆಟ್ಟೇ ತಿಂದು ಬರಬೇಕಿತ್ತು! ನಿನ್ನದೇ ಆದೊಂದು ಕಲ್ಪನಾ ರಾಜ್ಯದಲ್ಲಿ ವಿಹರಿಸುತ್ತಿದ್ದೆ ನೀನು ಈ ವರೆಗೆ. ಅದಕ್ಕೂ ವ್ಯವಹಾರ ಜಗತ್ತಿಗೂ ಎಷ್ಟೊಂದು ಅಂತರವಿದೆಯೆಂದು ಈಗ ತಿಳಿಯಿತೆ ನಿನಗೆ? ಮತ್ತೇನಾಯಿತು ಹೇಳು?

ರಾ:—ಅಲ್ಲೇ ಸ್ವಲ್ಪ ಸಮಯ ನಿಂತುಕೊಂಡೆ. ಕೂಲಿಗಳೆಲ್ಲಾ ಒಬ್ಬೊಬ್ಬರಾಗಿ ನನಗೆ ತಮಾಷೆ ಮಾಡತೊಡಗಿದರು. ಅದನ್ನು ತಡಕೊಳ್ಳಲಾರದೆ ಅಲ್ಲಿಂದ ಹೊರಟು ಬಂದೆ. ಅವರೆಲ್ಲರೂ ಗೊಳ್ಳೆಂದು ನಕ್ಕು ಕೈ ಚಪ್ಪಾಳೆ ಬಡೆದು, ನಾನು ಕಣ್ಮರೆಯಾಗುವನಕ, 'ಕೂಲಿ! ಕೂಲಿ!!' ಎಂದು ಕೂಗಿಕೂಗಿ ಗೇಲಿ ಮಾಡಿದರು.

ಲ:—ರೈಲ್ವೇ ಸ್ಟೇಶನಿನಿಂದ ಸಂಭ್ರಮದ ವಿದಾಯ ಪಡೆದು ಮತ್ತೆಲ್ಲಿ ಹೋದೆ?

ರಾ:—ಆ ಮೇಲೆ ಎರಡು ಮೂರು ಕಾಫಿ ಹೊಟೆಲಿಗೆ ಹೋಗಿ ನಿಂತುಕೊಂಡೆ. 'ಕಾಫಿಯೋ ಚಾವೋ ನಿಮಗೆ?' ಎಂದು ಅಲ್ಲಿಯ ಕೆಲಸದವರು ಹಲವು ಸಲ ವಿಚಾರಿಸಿದರು ನನ್ನೊಡನೆ. ನಾನು ಮತ್ತೂ ಸುಮ್ಮಗೆ ನಿಂತುಕೊಂಡೆ. 'ಇಲ್ಲಿ ನಿಲ್ಲಬಾರದು. ಹೊರಗೆ ಮೈದಾನಿಗೆ ಹೋಗಿ ನಿಲ್ಲಬೇಕು' ಎಂದರವರು. ಏನಾದರೂ ಕೆಲಸವಿದೆಯೋ ಎಂದು ಕೇಳಿದೆ ನಾನು. "ಕೆಲಸ! ಕೆಲಸ ಹೆಣ ಹೊರುವದು ಇಷ್ಟು ದೊಡ್ಡ ಕೊಂಟೆ ಕೋಣನಿಗೆ ನಿನಗೆ! ಹೋಗುತ್ತಿಯೋ ಇಲ್ಲವೋ ಇಲ್ಲಿಂದ!" ಎಂದು ಬಾಯಿಗೆ ಬಂದಂತೆ ಮಾತಾಡಿ ಹೊರಗಟ್ಟಿದರು.

ಲ:—ಇಷ್ಟೆಯೋ, ಇನ್ನೇನಾದರೂ ಅಮೂಲ್ಯ ಅನುಭವದ ಸಂಪಾದನೆಯಾಗಿದೆಯೋ?

ರಾ:—ಅನಂತರ ಬಂದರಿಗೆ ಹೋದೆ. ನಾಲ್ಕೈದು ಕಡೆ ಹೋಗಿ ಕೆಲಸವೇನಾದರೂ ಇದೆಯೋ ಎಂದು ವಿಚಾರಿಸಿದೆ. "ಸಮುದ್ರ ಬದಿಗೆ ಹೋಗು ಮಾರಿಬಲೆ ಎಳೆಯಲಿಕ್ಕೆ! ಕುತ್ತಿಗೆಗೊಂದು ಕಲ್ಲು ಕಟ್ಟಿ ಸಮುದ್ರಕ್ಕೆ ಹಾರು" ಎಂಬ ನಾನಾಬಗೆಯ ಹೃದಯರಹಿತ ಉತ್ತರಗಳನ್ನೆಲ್ಲಾ

ಪಡೆದು, ಮುಂದೇನು ಮಾಡುವುದೆಂದು ತಿಳಿಯದೆ ಅತ್ತಿತ್ತ ಅಡ್ಡಾಡುತ್ತಾ ಕಡೆಗೆ 'ದಕ್ಕೆ'ಗೆ ಹೋಗಿ ಕುಳಿತೆ.

ಲ:—ಇಷ್ಟರ ವರೆಗೂ ಅಲ್ಲಿಯೇ ಇದ್ದೆಯೋ? ಕಾಫಿ ಸಹ ಕುಡಿಯಲಿಲ್ಲವೇ?

ರಾ:—ನನಗೆ ಜೀವನವೇ ಭಾರವಾಗಿ ತೋರಿತು ನಾರಾಯಣ. ದಕ್ಕೆಯಲ್ಲಿ ಒಬ್ಬನೇ ಕುಳಿತು ಯೋಚಿಸತೊಡಗಿದೆ. ಅಲೆಗಳು ಒಂದನ್ನೊಂದು ಬೆಂಬತ್ತಿ ಬಂದು ದಕ್ಕೆಯ ಕಂಬಗಳಿಗೆ ಬಡಿದು ಪಳಪಳ ಶಬ್ದ ಮಾಡುತ್ತಿದ್ದುವು. ನನ್ನಲ್ಲಿ ನಾನಾ ಯೋಚನಾ ತರಂಗಗಳೆದ್ದು ಹೃದಯವನ್ನು ಉದ್ವೇಗಗೊಳಿಸಿದುವು. ಒಂದೊವ್ಮೆ ಅದು ಬಿರಿದೇ ಹೋಗುವಂತಾಯಿತು! ನಾನು ಸುತ್ತುಮುತ್ತ ನೋಡಿದೆ. ಕೆಳಗೆ ಹಾರಿಬಿಡುವ ನಿರ್ಧಾರಮಾಡಿದೆ. ದೂರದ ದಿಗಂತದ ಕಡೆಗೆ ನೋಡಿ ನಿಟ್ಟುಸಿರಿಟ್ಟು ನೀರಿಗೆ ಹಾರಲೆದ್ದಾಗ, ಸುಂದರಿಯ ಸ್ಫುರದ್ರೂಪವು ಎದುರಿಗೆ ಬಂದು ನಿಂತು ಒಂದೇಸವನೆ ಕಣ್ಣೀರಿಡುತ್ತಿರುವುದು ತೋರಿಬಂತು. ನಾನಾ ದೃಶ್ಯವನ್ನೇ ನೋಡುತ್ತಾ ಕಣ್ಣೀರಿಟ್ಟು ಎಷ್ಟು ಸಮಯ ಕಳೆದೆನೋ ತಿಳಿಯದು! ಅಷ್ಟರಲ್ಲಿ ದಕ್ಕೆಗೆ ಕೆಲವು ಜನರು ಬಂದಿದ್ದರು. ನಾನು ಅಲ್ಲಿಂದೆದ್ದು ಬಂದೆ. ಎದುರು ಪಿಯರ್ಸ್‌ಲೆಸ್ಲಿ ಕಂಪೆನಿಯ ಆಫೀಸು ತೋರಿತು. ನೆಟ್ಟಗೆ ಒಳಗೆ ನಡೆದೆ.

ಲ:—ನೀನಿನ್ನು ಒಬ್ಬನಾಗಿ ಎಲ್ಲಿಗೂ ಹೋಗಬಾರದು ರಾಮು. (ಕರವಸ್ತ್ರ ತೆಗೆದು ತನ್ನ ಕಂಗಳಿಂದ ಹೊರಡಲುದ್ಯುಕ್ತವಾದ ಕಣ್ಣೀರನ್ನೊರಸಿಕೊಳ್ಳುವನು.)

ರಾಮು:—ನನಗೆ ನಾಳೆ ಒಂದು ಕೆಲಸ ಸಿಗುವ ಸಂಭವವಿದೆ ನಾರಾಯಣ.

ಲ:—ಏನು ಕೆಲಸ? ಎಲ್ಲಿ?

ರಾ:—ನಾನು ಪಿಯರ್ಸ್‌ಲೆಸ್ಲಿ ಕಂಪೆನಿಯ ಮೆನೇಜರರನ್ನು ಕೇಳಿದೆ, ಅವರಿಲ್ಲವೆಂದಾಯಿತು. ಹೆಡ್‌ಕ್ಲಾರ್ಕರ ಬಳಿಗೆ ಹೋದೆ. ಏನಾದರೂ ಕೆಲಸಕೊಡಬೇಕೆಂದು ಅತಿ ದೈನ್ಯದಿಂದ ಕೇಳಿಕೊಂಡೆ. ನಾನೊಬ್ಬ ಶಿಕ್ಷಿತ ತರುಣನೆಂದು ಅವರು ತಿಳಕೊಂಡು, 'ಕ್ಲಾರ್ಕ್' ಕೆಲಸವೇನೂ

ಖಾಲಿ ಇಲ್ಲವೇ ಇಲ್ಲೆಂದರು. "ನನಗೆ ಕ್ಲಾರ್ಕ್ ಕೆಲಸವೇ ಆಗಬೇಕೆಂದೇನೂ ಇಲ್ಲ. ಯಾವ ಕೆಲಸವೂ ಆದೀತು" ಎಂದೆ ನಾನು. ಅವರು ಸ್ವಲ್ಪ ವಿಸ್ಮಯಗೊಂಡು ನನ್ನ ಮುಖ ನೋಡಿ ಆ ಮೇಲೆ ಮೃದುಹಾಸ ಬೀರಿ, "ಹಂಗಾಮಿ ಪೇದೆ ಕೆಲಸವೊಂದು ಖಾಲಿ ಇದೆ. ಎರಡು ತಿಂಗಳು ಮಾತ್ರ. ನಿಮಗದು ಆಗಬಹುದಾದರೆ ಕೊಡಿಸಬಹುದು" ಎಂದರು. "ಆದಾದರೆ ಆದು. ನನಗೇನಾದರೂ ಕೆಲಸವಾದರೆ ಸರಿ" ಎಂದೆ ನಾನು. "ಇವತ್ತು ಧೊರೆಗಳು ಹೋಗಿ ಆಯಿತು. ನಾಳೆ ಬನ್ನಿ" ಎಂದರವರು. "ಆಯಿತು ಸ್ವಾಮಿ. ಹೇಗಾದರೂ ಒಂದು ಕೆಲಸ ಕೊಡಿಸುತ್ತಿದ್ದರೆ ಬಹಳ ಉಪಕಾರವಾಗುತ್ತಿತ್ತು" ಎಂದು ನಾನು ಸ್ವಲ್ಪಹೊತ್ತು ನಿಂತುಕೊಂಡೆ. "ಆಯ್ತಾಯ್ತು. ಇವತ್ತು ಹೋಗಿ, ನಾಳೆ ಸುಮಾರು 12 ಘಂಟೆಗೆ ಬನ್ನಿ" ಎಂದರವರು ಪುನಹ ಮುಗುಳ್ನಗೆ ನಕ್ಕು. ನಾನು ನಮಸ್ಕರಿಸಿ ಬಂದೆ

ಲ:—ಛೆ! ಪೇದೆ ಕೆಲಸವೇ? ಅದನ್ನು ನೀನು ಮಾಡಲು ತಯಾರಿರುವೆಯಾ ರಾಮು?

ರಾ:—ಅದೇ ಯಾಕೆ? ತೋಟಿ ಕೆಲಸಮಾಡುವುದಕ್ಕೂ ನಾನು ಸಿದ್ಧನಿದ್ದೇನೆ.

ಲ:—ಹಾಗಾದರೆ ಆದನ್ನೇ ಮಾಡಬಹುದಲ್ಲಾ? ಪೇದೆ ಕೆಲಸಕ್ಕಿಂತ ತೋಟಿ ಕೆಲಸದಲ್ಲಿ ಹೆಚ್ಚು ಸಂಬಳ ದೊರೆತೀತು. ಮತ್ತು ಆ ಕೆಲಸವೂ ಕಾಯಮಾಗಿ ಸಿಕ್ಕೀತು.

ರಾ:—ಈಗ ಸಿಗುವುದಾದರೆ ಇದನ್ನು ಬಿಟ್ಟು ನಾನು ಅದನ್ನೇ ಮಾಡುವೆನು. ತೋಟಿ ಕೆಲಸ ಕೂಡ ಸಿಗುವ ಹಾಗಿಲ್ಲ. ಈಗಿರುವ ತೋಟಿಗಳಿಗೇನೇ ಸಾಕಷ್ಟು ಕೆಲಸವಿಲ್ಲವಂತೆ. ಮುನಿಸಿಪಾಲಿಟಿಯವರು ಕೆಲವರನ್ನು ತೆಗೆಯಲಿದ್ದಾರಂತೆ.

ಲ:—ನೀನೊಬ್ಬ ವಿಚಿತ್ರಪ್ರಾಣಿ ರಾಮು. ನಾಳೆ ಪಿಯರ್ಸ್ ಲೆಸ್ಲಿಯಲ್ಲಿ ಏನಾಗುವುದೆಂದು ನೋಡಿ ಆ ಮೇಲೆ ತೋಟಿ ಕೆಲಸಕ್ಕೆ ಪ್ರಯತ್ನಿಸೋಣ. ತೋಟಿ ಕೆಲಸ ಸಿಕ್ಕಿದ ಮೇಲೆ 'ರಾಮು ಭಟ್ಟ, ಬಿ. ಎ.,

ಮುನಿಸಿಪಲ್ ತೋಟಿ' ಎಂದು ಬೇಕಾದರೆ ಪತ್ರಿಕೆಯಲ್ಲಿ ಜಾಹೀರು ಮಾಡೋಣ. ನಿನ್ನ ತಂದೆಯವರಿಗೆ ಬಹಳ ಸಂತೋಷವಾದೀತು ಆಗ!

ರಾ:—ನೀನೇಕೆ ಅಷ್ಟೊಂದು ತಮಾಷೆಮಾಡುವುದು? ತೋಟಿಕೆಲಸವೂ ಕೆಲಸ, ಕಲೆಕ್ಟರ್ ಕೆಲಸವೂ ಕೆಲಸ. ತೋಟಿಕೆಲಸಕ್ಕೆ ತಿಂಗಳೊಂದರ ರೂ. 160 ಸಂಬಳವಿದ್ದರೆ ಎಷ್ಟು ಮಂದಿ ನಿನ್ನ ಜಾತಿಯ ಬಿ. ಎ., ಎಮ್. ಎ. ಗಳೇ ಅದಕ್ಕೆ ಮೇಲಾಡುತ್ತಿದ್ದರೋ ಏನೋ?

ಲ:—ನಿನ್ನೊಡನೆ ತರ್ಕಿಸಲು ನನಗೆ ಸಾಧ್ಯವಿಲ್ಲ ರಾಮು. ಬಾ ಸ್ವಲ್ಪ ಕಾಪಿ ಕುಡಿಯುವ ತಾಜ್‌ಮಹಲ್ ಹೊಟೆಲಲ್ಲಿ. ಇಡೀ ದಿವಸ ಒಂದು ಗುಟುಕು ನೀರು ಸಹ ತೆಗೆದುಕೊಳ್ಳದೆ ನೀನು ಹೇಗೆ ತಿರುಗಿದೆಯೋ ಇಷ್ಟೆಲ್ಲ? ನನಗಾದರೆ ಹೆಜ್ಜೆ ಹಾಕಲು ಸಾಧ್ಯವಿರುತ್ತಿದ್ದಿಲ್ಲ.

ರಾ:—ಆವಶ್ಯಕತೆ, ನಾರಾಯಣ ಆವಶ್ಯಕತೆ! ಆವಶ್ಯಕತೆಯು ಈ ಲೋಕದಲ್ಲಿ ಮಾಡಿಸದ ಕೆಲಸವೇನಿದೆ?

ಲ:—ಅದು ಹೌದು. ಬಾ. ಸ್ವಲ್ಪ ಕಾಪಿಕುಡಿದು ಅನಂತರ ಬಿಡಾರಕ್ಕೆ ಹೋಗುವ. (ಇಬ್ಬರೂ ಕಾಪಿಕುಡಿಯಲು ತಾಜ್‌ಮಹಲ್ ಹೊಟೆಲಿಗೆ ಹೋಗುವರು.)

ನೋಟ ೪

(ಮನೆ. ದುಗ್ಗಪ್ಪ ಶೆಟ್ಟಿಯ ಹೆಂಡತಿ ನಾಗಮ್ಮ ಮಧ್ಯಾಹ್ನ ಊಟ ತೀರಿಸಿ ಚಾವಡಿಯ ಗೋಡೆಗೊರಗಿ ಕೂತು, ವೀಳ್ಯದ ಹರಿವಾಣ ಮುಂದಿಟ್ಟುಕೊಂಡು ಬಾಯಿ ತುಂಬಾ ವೀಳ್ಯ ಹಾಕಿ ಜಗಿಯುತ್ತಿರುವಾಗ ಬಂಟಪ್ಪ ಬಂದುದನ್ನು ಕಂಡು ಒಮ್ಮೆಯೇ ಸಿಟ್ಟೇರಿ ಆತನನ್ನು ಕರೆಯುವಳು. ಆಗ ಬಂಟಪ್ಪನು ಕಳ್ಳನಂತೆ ಮೆಲ್ಲಗೆ ಕೆಳ ಚಾವಡಿಗೆ ಬಂದು ಅತ್ಯಂತ ದೀನಮುಖಮುದ್ರೆಯ ನಟನೆಯಿಂದ ನಿಂತುಕೊಳ್ಳುವನು).

ನಾ:—ಇವತ್ತಾರ ಮನೆ ಸುಟ್ಟು ಹಾಕಲಿದೆ ಬಂಟಪ್ಪ? ಯಾವ ಹೆಂಗಸಿನ ಮೇಲೆ ಬಲಾತ್ಕಾರ ಮಾಡಲಿದೆ?

ಬ:—ಛೆ! ಏನು ಮಾತಿದಮ್ಮ! ಯಾರ ಮನೆ ಸುಟ್ಟುಹಾಕಿದೆ ನಾನು? ಯಾವ ಹೆಂಗಸಿನ ಮೇಲೂ ಬಲಾತ್ಕಾರ ಮಾಡಿಲ್ಲ.

ನಾ:—ಇಡೀ ಹಿಡಿಸೂಡಿ ಪುಡಿ ಮಾಡಿ ಬಿಟ್ಟೇನೀಗ ನಿನ್ನ ಬೆನ್ನ ಮೇಲೆ ಫಟಿಂಗ! ಸತ್ಯ ಹೇಳಿದೆಯಾಯಿತು! ಸುಂದರಿಯನ್ನು ನೀವು, ಅವಳ ದುರಾತ್ಮ ಅಣ್ಣನ ಸಹಾಯದಿಂದ ಬಲಾತ್ಕಾರದಿಂದೆಳೆದು ತರಲು ಹೋದಾಗ, ಅವಳ ತಮ್ಮನು ಲಂಡರಾದ ನಿಮ್ಮನ್ನು ಹೊಡೆದೋಡಿಸಲಿಲ್ಲವೇ? ಸುಂದರಿಯನ್ನೇನು ನಿನ್ನಂತಹ ಕೇಡಿಗೆ ಮದುವೆ ಮಾಡಬೇಕೆಂದಿರುವರೇ ನಿನ್ನ ಒಡೆಯರು? ನಿಮ್ಮ ಕೈಕಾಲು ಮುರಿದು ಹಾಕಬೇಕಿತ್ತವನು. ನನಗೆ ಗೊತ್ತಿದ್ದರೆ ನಾನು ಜನ ಕೊಡುತ್ತಿದ್ದೆ ಅವನ ಸಹಾಯಕ್ಕೆ!

ಬ:—ನನ್ನನ್ನೇಕೆ ನೀವು ಬೈಯುವುದಮ್ಮ? ನಾನೇನು ಮಾಡುವುದು?

ನಾ:—ಇಲ್ಲ, ಬೈಯುವುದಿಲ್ಲ ನಿನ್ನನ್ನಿನ್ನು! ನೀನು ನಾಳೆಯೇ ನನ್ನ ಸ್ಥಳದಿಂದೆದ್ದು ಹೋಗಬೇಕು.

ಬ:—ನಾನೇನು ಮಾಡಿದೆನಮ್ಮ, ನೀವು ನನ್ನ ಮೇಲೆ ಅಷ್ಟು ಸಿಟ್ಟುಗೊಳ್ಳಲಿಕ್ಕೆ?

ನಾ:—ಇನ್ನೇನು ಮಾಡಬೇಕು ನೀನು! ನಿನ್ನ ಮುಖ ನೋಡಿದರೆ ಪಾಪತಟ್ಟೇತು! ಮನೆಯವರೆಲ್ಲಾ ಒಳಗೆ ಮಲಗಿರುವಾಗ ರಾತ್ರಾರಾತ್ರಿ ಮನೆಗೆ ಬೆಂಕಿಕೊಡುವುದಕ್ಕಿಂತ ಪೈಶಾಚಿಕ ಕೃತ್ಯವಾದರೂ ಇನ್ನೇನಿದೆ ನರಾಧಮ! ಆ ಸುಬ್ಬನಲ್ಲದಿದ್ದರೆ ಕಿಟ್ಟುವಿನ ಪ್ರಾಣವುಳಿಯುತ್ತಿತ್ತೇ? ಅವಳ ಸೊಸೆಯೂ ಮಗುವೂ ಸತ್ತೇ ಹೋಗುತ್ತಿದ್ದರಲ್ಲ?

ಬ:—ನಾನೇನೂ ಬೆಂಕಿಕೊಟ್ಟದ್ದಲ್ಲಮ್ಮ. ಯಾರ‍್ಯಾರ ಚಾಡಿ ಕೇಳಿ ನೀವು ಸುಮ್ಮನೆ ನನ್ನನ್ನು ಬೈಯುತ್ತಿದ್ದೀರಿ. ನಾನು ಬೆಂಕಿ ಕೊಟ್ಟದ್ದೆಂದು ಯಾರು ಹೇಳಿದ್ದಮ್ಮ ನಿಮಗೆ?

ನಾ:—(ಸಿಟ್ಟಿನಿಂದ ಕಿಡಿಕಿಡಿಯಾಗಿ) ಏನು, ಯಾರು ಹೇಳಿದ್ದೇ? ನಿನ್ನಂತಹ ಪಾಪಿಗಳು ಇರುವರೇ ಲೋಕದಲ್ಲಿ! ಇನ್ನು ನನ್ನ ಮನೆ ಮೆಟ್ಟಲಿಗೆ ನೀನು ಕಾಲಿಟ್ಟರೆ ತೆಂಗಿನ ಮರಕ್ಕೆ ಕಟ್ಟಿ ಹಾಕಿಸುವೆನು. ಜಾಗ್ರತೆ! ತೊಲಗಿಲ್ಲಿಂದ! ದೊಡ್ಡ ಕೇಡಿ ನೀನು!

ಬ:—(ಕಣ್ಣೀರಿಳಿಸಿ) ಅಮ್ಮಾ, ನಾನೇನು ಮಾಡಲಿ! ಒಡೆಯರು ಹೇಳಿದಂತೆ—......

ನಾ:—ಮುಚ್ಚು ಬಾಯಿ ನಾಯಿ! ಒಡೆಯರೇನು ನಿನ್ನನ್ನು ಶೂಲಕ್ಕೇರಿಸುವರೆ ಅವರು ಹೇಳಿದಂತೆ ಕೇಳದಿದ್ದರೆ? ಇತರ ಒಕ್ಕಲು ಗಳೆಲ್ಲಾ ನಿನ್ನಂತೆಯೇ ಮಾಡುವರೇ? ನಿನಗೆ ಚೆನ್ನಾಗಿ ಕುಡಿಯಲಿಕ್ಕೆ ಸಿಕ್ಕಿದರೆ ಸರಿ, ಎಂತಹ ಅತ್ಯಾಚಾರ ಮಾಡಲಿಕ್ಕೂ ಮುಂದಾಗುವೆ ಯಲ್ಲವೇ? ನಿನ್ನಂಥವರು ಇದ್ದ ಊರಲ್ಲಿ ಮಳೆ ಬಂದೀತೇ?

ಬ:—ಒ-ಒ-ಒಡೆಯರು ಒತ್ತಾಯ ಮಾಡುವಾಗ......

ನಾ:—ನಿನ್ನ ಒಡೆಯರೂ ನೀನೂ ಒಟ್ಟು ಹೊರಡಬೇಕು. ನನ್ನ ಮನೆಗೆ ಕಾಲಿಡಬಾರದು. ತುಂಬಾ ವೈರಿಗಳಿರುವ ತನ್ನ ಒಬ್ಬಳೇ ಪ್ರೀತಿಯ ಮಗಳಿಗೆ ಕಾರುಬಾರಿನ ಗಂಡನೊಬ್ಬನು ಅತ್ಯಗತ್ಯವೆಂದು ತಂದೆಯು ವರು ನನಗೊಂದು ಮದುವೆ ಮಾಡಿ ನಾನು ಅನುಭವಿಸಿದ ಸುಖಸಾಕು! ಮುಖವೆತ್ತಿ ಹೊರಗೆ ಹೋಗಲಿಕ್ಕಿಲ್ಲ ನನಗೆ! ಮಕ್ಕಳ ಸುಖವಂತೂ ನನ್ನ ಹಣೆಯಲ್ಲಿಯೇ ಬರೆದಿಲ್ಲವೆನ್ನುವ! (ಏರಿಬರುವ ಉದ್ವೇಗದಿಂದ ಮಾತಾಡಲಾರದೆ ತುಸುಹೊತ್ತು ಮೌನವಾಗಿದ್ದು ಆ ಮೇಲೆ ನಿಟ್ಟುಸಿರಿಡು ವಳು. ಕಂಗಳಲ್ಲಿ ತುಂಬಿ ಬಂದ ನೀರನ್ನು ಸೆರಗಿನ ತುದಿಯಿಂದೊರಸಿಕೊಳ್ಳು ವಳು. ಅಷ್ಟರಲ್ಲಿ ದುಗ್ಗಪ್ಪ ಶೆಟ್ಟಿಯು ಹೆಬ್ಬಾಗಿಲಿನಿಂದ ಒಳಹೊಕ್ಕು ಅಂಗ ಳಕ್ಕೆ ಕಾಲಿಡುವಾಗಲೆ "ಬಂಟಪ್ಪ! ಬಂಟಪ್ಪ! ಎಲ್ಲಿ ಸತ್ತುಹೋದಿಯೋ ಸೂಳೆ ಮಗನೆ!" ಎಂದು ಅಬ್ಬರಿಸಿ ಕರೆಯುತ್ತಾ ಚಾವಡಿಯ ಕಡೆಗೆ ಬರುವನು. ದುಗ್ಗಪ್ಪ ಶೆಟ್ಟಿಯ ಸ್ವರ ಕೇಳಿದೊಡನೆಯೇ ನಾಗಮ್ಮನಿಗೆ ಪುನಹ ಸಿಟ್ಟೇರು ವುದು.)

ನಾ:—ಯಾಕೆ ಬಂಟಪ್ಪ ನಿಮಗೆ? ಇವತ್ತು ಯಾರ ಮನೆ ಗುಂಡಾಂತರ ಮಾಡಲಿದೆ?

ದು:—(ಒಮ್ಮೆಯೇ ಕ್ರೋಧಗೊಂಡು ನಾಗಮ್ಮನನ್ನೊಮ್ಮೆ ಕಣ್ಣು ಕೆರಳಿಸಿ ನೋಡಿ ಆಮೇಲೆ ಸಿಟ್ಟನ್ನು ನುಂಗಿಕೊಂಡು) ಏನು? ನಾನು ಯಾರ್ಯಾರ ಮನೆ ಗುಂಡಾಂತರ ಮಾಡುವವನೇ?

ನಾ:—ಅಲ್ಲ, ಉದ್ಧಾರ ಮಾಡುವವರು! ಊರಲ್ಲೆಲ್ಲಾ ನಿಮ್ಮ ಹೊಗಳಿಕೆಯೇ ಹಬ್ಬಿದೆ! ನನಗೆ ಕಿವಿಬಿಟ್ಟು ಹೊರ ಹೋಗಲಿಕ್ಕಿಲ್ಲ!

ದು:—ಸತ್ತರವರು ನನ್ನನ್ನು ದೂರುವವರು!

ನಾ:—ಅವರು ಸತ್ತು ಫಲವೇನು? ಊರಿಗೆ ಉಪದ್ರವ ತಪ್ಪು ವಂತಾಗುವದೇ?

ದು:—ಮತ್ತಾರು, ನಾನು ಸಾಯಬೇಕೆನ್ನುವುದೇ ನೀನು?

ನಾ:—ನನ್ನನ್ನು ಪ್ರತಿದಿನವೂ ಸಜೀವವಾಗಿ ಕೊಂದು ಹೂಳು ತ್ತಿರುವ, ಊರಿಗೇನೇ ಮಾರಿಯೋಪಾದಿಯಾಗಿ ಜನರನ್ನೆಲ್ಲಾ ಗೋಳಿ ಡಿಸುತ್ತಿರುವ ನೀವು ಇದ್ದರೇನು, ಇಲ್ಲದಿದ್ದರೇನು?

ದು:—(ಕಿಡಿಕಿಡಿಯಾಗಿ) ಏನಂದಿ? (ನಾಗಮ್ಮನ ಮೇಲೆ ಕೈ ಮಾಡಲು ಮುಂದುವರಿಯುವನು.)

ನಾ:—(ಕ್ರೋಧೋನ್ಮತ್ತತೆಯಿಂದ ನೆಟ್ಟಗೆ ನಿಂತು) ಏನು ನನಗೆ ಹೊಡೆಯಲು ಮುಂದಾಗುವಿರಾ? ಸ್ವಲ್ಪತಡೆಯಿರಿ! ಒಮ್ಮೆಯೇ ದುಡುಕಿ ಬಿಟ್ಟರೆ ಹೇಗೆ? ನಿಮಗೆ ಅಭ್ಯಾಸವಾಗಿಹೋಗಿದೆ ಸಿಕ್ಕಿದ ಬಡಬಗ್ಗರಿ ಗೆಲ್ಲಾ ಹೊಡೆದು! ಧೈರ್ಯವಿದ್ದರೆ ನನ್ನ ಮೇಲೊಮ್ಮೆ ಕೈಮಾಡಿ ನೋಡಿ! ಈಕ್ಷಣವೇ ಹೊರಡಬೇಕು ಇಲ್ಲಿಂದ ನೀವು!

ದು:—ನನಗೇನು ನನ್ನ ಮನೆ ಇಲ್ಲವೆ? ನಿನ್ನ ತಂದೆಯುವರು ಒತ್ತಾಯಮಾಡಿ ನನ್ನನ್ನಿಲ್ಲಿ ಕರತಂದು, ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇನೆಂದೆಲ್ಲಾ ಆಶೆ ತೋರಿಸಿ ಕೂತು ಕೊಳ್ಳಿಸಿದುದಲ್ಲವೇ? ನಿನ್ನದೀಗ ದೊಡ್ಡಕಾರುಬಾರಾಗಿ ಹೋಯಿತಲ್ಲ!

ನಾ:—ತಂದೆಯುವರು ಮಾಡಿದುದನ್ನು ಕೊನೆಗೆ ಅವರೇ ಎರಡು ಕೈಗಳಲ್ಲಿಯೂ ತಿಂದು ತಿಂದು ಜೀರ್ಣಿಸಿಕೊಳ್ಳಲಾರದೆ ಕೊರಗಿ ಕೊರಗಿ ಸತ್ತರು. ಅವರ ಹಾಗೆ ಸಾಯಲು ನಾನು ಸಿದ್ಧಳಿಲ್ಲ. ನನಗೆ ಕೆಲ ದಿನ ಬಡುಕಬೇಕೆಂಬ ಆಸೆಯಿದೆ.

ದು:—ಈಗ ಹೀಗೆಲ್ಲಾ ಹೇಳುವವಳು ನೀನು ಆಗ ನನ್ನನ್ನು ಮದುವೆಯಾದುದೇಕೆ? ನನಗೆ ಬೇರೆ ಯಾರಾದರೂ ಹೆಣ್ಣು ಕೊಡುವವರಿ ದ್ದಿಲ್ಲವೇ? ಸಾವಿರಗಟ್ಲೆ ವರದಕ್ಷಿಣೆ ಕೊಡುವೆವೆಂದು ಎಷ್ಟು ಮಂದಿ ಮೇಲಾಡುತ್ತಿದ್ದರೆಂದು ನಿನಗೆ ಗೊತ್ತಿದೆಯೇ?

ನಾ:—ನಾನು ನಿಮಗೆ ಮೆಚ್ಚಿ ಹೂಮಾಲೆ ಹಾಕಿ ಸ್ವಯಂವರ

ಮಾಡಿ ಕೊಂಡುದಲ್ಲವೇ? ಹೆಂಗಸರ ಮಾತಿಗೆ ಗಂಡಸರು ಕಿವಿಗೊಡುವು ದಾದರೆ ಸಮಾಜದಲ್ಲಿ ನಡೆಯುವ ಹೆಚ್ಚಿನ ಅನಿಷ್ಟಗಳು ನಡೆಯಲು ಸಾಧ್ಯವಿದೆಯೇ? ನಾನು ಎಷ್ಟು ಹೇಳಿದರೂ ತಂದೆಯವರು ಕೇಳದೆ, ತನಗೊಬ್ಬ ಕಾರುಬಾರಿನ ಅಳಿಯ ಬೇಕೆಂದು ನಿಮಗೆ ನನ್ನನ್ನು ಬಲಿ ಕೊಟ್ಟರು. ನೀವು ಕಾರುಬಾರೀಗ ನಡಿಸುತ್ತಿರುವಿರಲ್ಲ!

ದು:—ತುಂಡು ಹೆಂಗಸರ ಮಾತು ಕೇಳುವ ಗಂಡಸವನು ಅಂಥ ವನೇ ಆಗಿರಬೇಕು!

ನಾ:—ಅಂಥವನೇ ಅಂದರೆ ಎಂಥವನು?

ದು:—ಗಂಡಸುತನವಿಲ್ಲದ ಕೇವಲ ಲಂಡಿ!

ನಾ:—ಯಾರ್ಯಾರ ಮನೆ ಹಾಳು ಮಾಡುವ, ಸಿಕ್ಕಿದ ಹೆಂಗಸರ ಮಾನಕೆಡಿಸುವ ನಿಮ್ಮ ಗಂಡಸುತನಕ್ಕೆ ಬೆಂಕಿಬೀಳಲಿ!

ದು:—ಯಾರ ಮನೆ ಹಾಳು ಮಾಡಿದೆ ನಾನು? ಯಾರ್ಯಾರ ಚಾಡಿ ಮಾತುಕೇಳಿ ನೀನು ಮನಬಂದಂತೆ ಮಾತಾಡುವದೇ? ನಿನಗಾ ಕಿಟ್ಟುವಿನ ಸುಟ್ಟುಹೋದ ಮನೆ ಕಟ್ಟಿಕೊಡುವ ಅವಶ್ಯವೇನಿತ್ತು? ಹೆಣ್ಣು ಹೆಂಗಸಾದ ನೀನು ಗಂಡಸರಂತೆ ಅನಾವಶ್ಯಕವಾದ ಕೆಲಸಗಳ ಲ್ಲೆಲ್ಲಾ ಕೈಹಾಕತೊಡಗಿರುವುದೇಕೆ? ನಿನ್ನ ಆಶಯವಿಲ್ಲದಿದ್ದರೆ ಆ ಸುಬ್ಬನು ಅಷ್ಟೊಂದು ಅಹಂಕಾರದಿಂದ ನನ್ನನ್ನು ಧಿಕ್ಕರಿಸಲೆದೆಗೊಳ್ಳು ತ್ತಿದ್ದನೇ?

ನಾ:—ಸುಬ್ಬನು ನಿಮ್ಮನ್ನೆಲ್ಲಾ ಧಿಕ್ಕರಿಸುವುದು ಮಾತ್ರವಲ್ಲ, ಕೊಂದುಹಾಕಿದರೂ ತಪ್ಪಾಗಲಾರದು. ನಿಮ್ಮ ಹಸ್ತಕರಾಗಲಿ, ನೀವಾ ಗಲಿ ಅವನ ಮನೆಗೆ ಇನ್ನು ಮುಂದೆ ಕಾಲಿಟ್ಟಲ್ಲಿ ಕೈಕಾಲು ಮುರಿದೇ ಹಾಕಬೇಕೆಂದು ಹೇಳಿದ್ದೇನೆ. ಅವನಿಗೆ ಬೇಕಾದ ಸಹಾಯ ನಾನು ಕೊಡುವೆನೆಂದು ಭರವಸೆ ಕೊಟ್ಟಿದ್ದೇನೆ. ನಿಮ್ಮ ಗಂಡಸುತನವ ನ್ನೊಮ್ಮೆ ಪರೀಕ್ಷಿಸಿಯೇ ಸಿದ್ಧ ನನಗೆ! ನೋಡುವ ನೀವು ಏನೆಲ್ಲ ಮಾಡುತ್ತೀರೆಂದು!

ದು:—ಏನು, ನೀನೇ ನನ್ನನ್ನೆದುರಿಸುವೆಯಾ?

ನಾ:—ಹೌದು, ನಾನು ಒಂದೋ ಈ ಊರಿಗೆ ನಿಮ್ಮಿಂದಾಗು

ತ್ತಿರುವ ಉಪಟಳವನ್ನು ನಿಲ್ಲಿಸಬೇಕು. ಇಲ್ಲವೆ ಊರುಬಿಟ್ಟು ಎಲ್ಲಿಗಾದರೂ ಹೊರಟುಹೋಗಬೇಕಾಗಿದೆ. ನನಗೆ ಸಾಕಾಯಿತು ಪ್ರತಿನಿತ್ಯ ನಿಮ್ಮ ದೂರು ಕೇಳಿ ಕೇಳಿ! ಇನ್ನು ನನಗೆ ಸಹಿಸಿಕೊಂಡಿರಲು ಸಾಧ್ಯವಿಲ್ಲ. ಸಾಧ್ಯವಾದರೆ ನಿಮ್ಮ ಕಾರುಬಾರನ್ನು ನಿಲ್ಲಿಸುವೆನು; ಇಲ್ಲವಾದರೆ ಕುತ್ತಿಗೆಗೆ ಹಗ್ಗ ಹಾಕಿಕೊಂಡು ಸಾಯುವೆನು.

ದು:— ನೀನೇಕೆ ಕುತ್ತಿಗೆಗೆ ಹಗ್ಗ ಹಾಕಿಕೊಳ್ಳುವುದು? ನಾನೇ ಈ ಮನೆಬಿಟ್ಟು ಹೋದರಾಯಿತಲ್ಲವೇ?

ನಾ:—ಅದಕ್ಕೆ ನನ್ನ ಆಕ್ಷೇಪವಿದೆಯೆಂದು ಭಾವಿಸಿದಿರಾ?

ದು:—ನಿನ್ನನ್ನೊಂದು ಮದುವೆಯಾಗಿ ತ್ರಿಶಂಕುವಿನ ಅವಸ್ಥೆಯಾಯಿತಲ್ಲ ನನಗೆ ಮಹಾರಾಯಿತಿ! ನಾಸೀ ಪ್ರಾಯದಲ್ಲಿನ್ನು ಮನೆಬಿಟ್ಟು ಎಲ್ಲಿ ಹೋಗಲಿ? ನಿನಗಾಗಿ ನನ್ನ ಕುಟುಂಬದವರನ್ನು ಮೊದಲೇ ದೂರೀಕರಿಸಿದ್ದೇನೆ.

ನಾ:—ನಿಮಗೇನಂತಹ ಅವಸ್ಥೆ ಬಂದುದೀಗ? ಈ ವರೆಗೆ ಕಾರುಬಾರು ಮಾಡಿದುದೇನು ಕಡಿಮೆಯಾಯಿತೆ? ಮರ್ಯಾದೆಯಿಂದ ಮನೆಯಲ್ಲಿರಲು ಸಾಧ್ಯವಾದರೆ ಸಂತೋಷದಿಂದಿರಬಹುದು ಇಲ್ಲವಾದರೆ ನಿಮ್ಮ ದಾರಿ ನೀವು ಹಿಡಿಯಬಹುದು.ನನ್ನ ಆಕ್ಷೇಪವೇನೂ ಇರಲಾರದದಕ್ಕೆ.

ದು:—ಮರ್ಯಾದೆಯಿಂದೆಂದರೆ ಹೇಗೆ?

ನಾ:—ಇನ್ನು ಮುಂದೆ ಪ್ರತಿದಿನ ನಿಮಗೆ ನಾನು ಪಾಠ ಕಲಿಸಿದರಾಗಬಹುದೇ? ಮರ್ಯಾದೆಯಿಂದ ನಡೆಯುವುದು ಹೇಗೆಂದು?

ದು:— ಆಯ್ತಪ್ಪ, ಇನ್ನು ನಿನ್ನಿಂಥಾದರೂ ಪಾಠ ಕಲಿಯುವ! ಬೆಳಿಗ್ಗೆ ಎಷ್ಟು ಘಂಟೆಗೆ ಎದ್ದು ಬರಬೇಕು? ಸ್ಲೇಟುಪುಸ್ತಕವೇನಾದರೂ ತರಬೇಕೆ? ಚಿಕ್ಕಂದಿನಲ್ಲಿ ನಾನು ಶಾಲೆಗೆ ಸರಿಯಾಗಿ ಹೋಗುತ್ತಿದ್ದುದೇ ಇಲ್ಲವಂತೆ!

(ಬಂಟಪ್ಪ ಹಲ್ಲು ಬಿಟ್ಟು ನಗುವನು)

ನಾ:—ಮಂಗನ ಹಾಗೆ ಹಲ್ಲುಬಿಟ್ಟರೆ ಹಲ್ಲೆಲ್ಲ ಉದುರಿಸಿ ಬಿಟ್ಟೇನು ಫಟಿಂಗ! ತೊಲಗಾಚೆ! ನಿನ್ನನ್ನಿಲ್ಲಿ ನಿಲ್ಲ ಹೇಳಿದವರಾರು?

ದು:—ಇವತ್ತೇನಾಗಿದೆ ನಿನಗೆ? ನಿನ್ನದೇ ಆಯ್ತಲ್ಲ ಎಲ್ಲ! ಅವನನ್ನು ಬರಹೇಳಿದುದೂ ನೀನು. ಈಗ ತೊಲಗೆನ್ನುವುದೂ ನೀನೆ!

ನಾ:—ಹೌದು, ನನ್ನ ಮನೆಯಲ್ಲಿ ನನ್ನದೇ ಕಾರುಬಾರು! ಅನ್ಯರ ಮನೆಯಲ್ಲಲ್ಲ. ನನ್ನ ವಕ್ಕಲವ. ಅವನನ್ನು ಬೇಕಾದಾಗ ಬರಹೇಳುವ ಮತ್ತು ತೊಲಗೆನ್ನುವ ಅಧಿಕಾರ ನನಗಿದೆ. (ಮತ್ತೂ ನಿಂತಿರುವ ಬಂಟಪ್ಪನನ್ನು ಧುರಧುರನೆ ನೋಡಿ) ನಡಿಯುತ್ತಿಯೋ ಇಲ್ಲಿಂದ, ಹಿಡಿ ಸೂಡಿ ಪೂಜೆಬೇಕೋ? (ಬಂಟಪ್ಪನು ದುಗ್ಗಪ್ಪಶೆಟ್ಟಿಯನ್ನು ಮುಖ ತಿರುಗಿಸಿತಿರುಗಿಸಿ ನೋಡುತ್ತಾ ಹೋಗಿಬಿಡುವನು).

ದು:—ಅಲ್ಲ, ಮಾತಾಡುವುದಕ್ಕೊಂದು ಕ್ರಮವಿಲ್ಲವೇ ನಾಗಿ? ನಾನು ನಿನ್ನ ಗಂಡನಲ್ಲವೇ? ಆ ಬಂಟಪ್ಪನಿದಿರಲ್ಲಿ ನನ್ನ ಮರ್ಯಾದೆ ತೆಗೆದುಬಿಟ್ಟೆಯಲ್ಲ ನೀನು?

ನಾ:—ಮರ್ಯಾದೆ ಇದ್ದರಲ್ಲವೇ ತೆಗೆಯುವುದು?

ದು:—ಒಟ್ಟಾರೆ ಸಿಕ್ಕಿಬಿದ್ದೆನಲ್ಲ ನಿನ್ನ ಕೈಯಲ್ಲಿ ನಾನೀಗ.

ನಾ:—ಏನು, ನನ್ನ ಕೈಯಲ್ಲಿ ನೀವು ಸಿಕ್ಕಿಬಿದ್ದುದೇ? ಎಲುಬಿಲ್ಲದ ನಾಲಿಗೆಯನ್ನು ಮನಬಂದಂತೆ ನಲಿದಾಡಿಸಬೇಡಿ. ಯಾವ ಜನ್ಮ ದಲ್ಲೋ ಮಾಡಿದ ಪಾಪದ ಫಲವನ್ನನುಭವಿಸುತ್ತಿರುವುದೀಗ ನಾನು. ಸಾವು ಯಾವಾಗ ಬರುವುದೆಂದು ನಿರೀಕ್ಷಿಸುತ್ತಿರುವೆನು. ಈ ಅವಸ್ಥೆ ಯಲ್ಲಿ ಬದುಕಿ ಫಲವೇನು? (ಕಣ್ಣೀರಿಳಿದು ಬರುವುದು.)

ದು:—(ಅತ್ಯಂತ ಪಶ್ಚಾತ್ತಾಪ ನಟಿಸಿ ನಾಗಮ್ಮನ ಕೈ ಹಿಡಿದು) ನಾಗಿ, ನಿನ್ನಾಣೆಯಿದೆ, ನಾನಿನ್ನೇನಾದರೂ ಮರ್ಯಾದೆಗೆಟ್ಟು ನಡೆ ದರೆ! ಇನ್ನು ಮುಂದೆ ನೀನು ಹೇಳಿದ್ದನ್ನು ಕೇಳದಿದ್ದರೆ ನಿನಗೆ ತೋರಿ ದಂತೆ ಮಾಡಬಹುದು.

ನಾ:—(ಕೈಕೊಡಹಿ) ಸಾಕು, ಸುಮ್ಮಗಿರಿ! ಎಷ್ಟು ಸಲ ಹೀಗೆ ಆಣೆಹಾಕಲಿಲ್ಲ ನೀವು?

ದು:—ಈ ಸಲ ಪರೀಕ್ಷೆಮಾಡಿ ನೋಡು ನಾಗಿ. ಈಗಲೇ ಪ್ರತಿಜ್ಞೆಮಾಡುವೆನು, ಇನ್ನು ಮುಂದೇನೂ ಅನಾಚಾರ ಮಾಡು ವುದಿಲ್ಲೆಂದು.

ನಾ:—ನೀವು ಮುಂದಾದರೂ ಒಳ್ಳೆಯವರಾದರೆ ನನ್ನ ಭಾಗ್ಯೋ ದಯವೇ ಸರಿ. (ಇಬ್ಬರೂ ಒಳಹೋಗುವರು.)

ಅಂಕ ೩

ನೋಟ ೧

(ಮನೆ ಸುಡುವಾಗ, ಮನೆಯೊಳಗೇನೇ ಬಿದ್ದು ಸಾಯುವೆನೆಂದು ಛಲ ಹಿಡಿದ ಕಿಟ್ಟುವನ್ನೆತ್ತಿ ಹೊರತರುವಾಗ, ಮತ್ತು ಮನೆಗೆ ಬೆಂಕಿ ಹಿಡಿದಿದೆ ಯೆಂದು ಸುಬ್ಬನ ಬೊಬ್ಬೆ ಕೇಳಿದೊಡನೆಯೇ ಗಾಬರಿಗೊಂಡು ಮಗುವನ್ನು ತೊಟ್ಟಿಲಲ್ಲೇ ಬಿಟ್ಟು ಹೊರಗೋಡಿ ಬಂದು, ಆ ಮೇಲೆ ಥಕ್ಕನೆ ಮಗುವಿನ ನೆನಪಾಗಿ ಒಮ್ಮೆಯೇ ಒಳಗೋಡಿ ಬೆಂಕಿಯಲ್ಲಿ ಸಿಕ್ಕಿಬಿದ್ದ ಲಕ್ಷ್ಮಿಯನ್ನೂ, ಅವಳ ಮಗುವನ್ನೂ ರಕ್ಷಿಸುವಾಗ ಮೈಯೆಲ್ಲಾ ಸುಟ್ಟುಹೋಗಿ, ಪ್ರಾಣಾಪಾಯಕ್ಕೊಳಗಾಗಿದ್ದ ಸುಬ್ಬನ ಆರೈಕೆಯನ್ನು ಹಲವು ದಿನ ರಾತ್ರಿ ಹಗಲು ನಡಿಸಿ ಸುಂದರಿಯ ಆರೋಗ್ಯವು ಬಹಳವಾಗಿ ಕೆಟ್ಟುಹೋಗುವುದು. ಈ ಘೋರ ಸಂಕಷ್ಟಗಳಿಗೆಲ್ಲಾ ತಾನೇ ಕಾರಣವೆಂಬ ಸಂತಾಪವು ಸುಂದರಿಯ ಹೃದಯವನ್ನು ದಹಿಸಿಬಿಡುವುದು. ತಾನು ಮನೆ ಬಿಟ್ಟು ಹೋಗದೆ ಮನೆಯವರಿಗೆ ಉಳಿಗಾಲವಿಲ್ಲವೆಂಬ ಚಿಂತೆಯು ಅವಳನ್ನು ಕಂಗೆಡಿಸಿ ಕಡೆಕಡೆಗೆ ಅವಳು ಅರೆಭ್ರಾಂತಳಂತಾಗಿ ಮಾತಾಡುವುದನ್ನೇ ನಿಲ್ಲಿಸಿ ಮೌನವಾಗಿರತೊಡಗುವಳು. ಇದರಿಂದ ಕಿಟ್ಟು ಮತ್ತು ಲಕ್ಷ್ಮಿ ಬಹಳ ತಳಮಳಗೊಳ್ಳುವರು. ಸುಂದರಿಯು ಒಂದು ದಿನ ಮುಂಜಾನೆ ಎದ್ದವಳೇ, ಯಾರೊಡನೆಯೂ ಮಾತಾಡದೆ ಮನೆ ಬಿಟ್ಟು ಹೋಗಿ ಬಿಡುವಳು. ಸ್ವಲ್ಪ ದೂರ ಹೋದೊಡನೆಯೇ ತಾನು ಹಿಂದೆ ರೆಂಜೆ ಹೂ ಹೆಕ್ಕಿದ್ದ ರೆಂಜೆ ಮರವು ಅವಳ ಕಣ್ಣಿಗೆ ಬೀಳುವುದು. ರಾಮುಭಟ್ಟನು ಸುಗಂಧಿ ಹೂ ಕೊಟ್ಟು ಪ್ರಥಮವಾಗಿ ಪ್ರೇಮ ಪ್ರದರ್ಶನ ಮಾಡಿದ ಸುಮಧುರ ಸ್ಮರಣೆಯು ಒಮ್ಮೆಯೇ ಸುಂದರಿಯ ಮನಸ್ಸಿನ ಮ್ಯೇಲೆ ಮಾಂತ್ರಿಕ ಪರಿಣಾಮವನ್ನುಂಟು ಮಾಡುವುದು. ಅದು ರೆಂಜೆ ಬೀಳುವ ಸಮಯವೇ ಅಲ್ಲದಿದ್ದರೂ ಅವಳು ರೆಂಜೆ ಹೂಗಳನ್ನು ಹುಡುಕಿ ಒಂದೂ ಸಿಗದಿರಲು ತೀವ್ರ ನಿರಾಶೆಗೊಂಡು ನಿಟ್ಟುಸಿರಿಡುವಳು)

ಪದ:—(ಬಾಲಮು ಆಯು..........) ಎಂಬಂತೆ.

ಜೀವನವಿದು ಯಮ ಯಾತನೆಯಕಟ
ತಾಳಲೆಂತಹಹ-ದಾರುಣ ದುಃಖ
ಹೃದಯ ದುಗುಡದ–ನೆಲೆಯಾಗಿರುತ
ಮನವೇ ಶಾಂತಿ–ಹೀನವು ಸತತ
ದಯೆದೋರೆಯೊ ನೀ ದೇವ ॥ ಜೀವನ ॥

ಪ್ರಣಯಾನಲವ-ತಣಿಸಿ ಸುಖಿಸುವ
ಯೋಗವಿಹೀನ-ಜೀವನವೆನ್ನ
ಸುಡುಗಾಡಿನ ಪರಿ-ಯಾಗಿಹುದೀಗ
ಸಹಿಸೆ ಜೀವನವಿದನಾ || ಜೀವನ ||

(ಲಕ್ಷ್ಮಿಯು ಎದ್ದು ನೋಡುವಾಗ ಸುಂದರಿಯು ಇಲ್ಲದಿರುವುದನ್ನು ಕಂಡು ಒಮ್ಮೆಯೇ ದಿಗಿಲುಗೊಳ್ಳುವಳು. ತುಸುಹೊತ್ತು ಯೋಚಿಸಿ ಕಿಟ್ಟುವಿಗೇನೂ ಹೇಳದೆ ಮನೆಯಿಂದ ಹೊರಟು ಸುಂದರಿಯನ್ನು ಹುಡುಕುತ್ತಾ ಹೋಗಿ, ಅವಳು ರೆಂಜೆ ಮರದಡಿಯಲ್ಲಿ ನಿಂತು ಭ್ರಾಂತಳಂತೆ ಹಾಡುವುದನ್ನು ಕಂಡು ಹೋದ ಪ್ರಾಣ ಬಂದಂತಾಗಿ, ಅವಳೇನು ಮಾಡುವಳೆಂದು ಹತ್ತಿರದ ಮುಳ್ಳಿನ ಪೊದೆಯ ಮರೆಯಲ್ಲಿ ತುಸುಹೊತ್ತು ನಿಂತು ಪರೀಕ್ಷಿಸುವಳು.)

ಸು:—ಇಲ್ಲಿ ಒಂದೇ ಒಂದು ರೆಂಜೆ ಹೂವು ಇಲ್ಲ; ಅವರೂ ಕಾಣು ವುದಿಲ್ಲ. ಕಡು ಪಾಪಿಯಾದ ನನಗೆ ಅವರ ಆ ಸುಂದರ ಹಸ್ತದಿಂದ ಮನೋಹರ ಸುಗಂಧಿ ಪುಷ್ಪಗಳನ್ನು ಪಡೆಯುವ ಸುಯೋಗವು ಇನ್ನೊಮ್ಮೆ ಬರಲಾರದು! ಅವರ ಗತಿಯೇನಾಗಿರುವುದೋ? ದುರಂತದ ಪ್ರತಿಸ್ವರೂಪವೇ ಆಗಿರುವ ಈ ಹಾಳು ಬಾಳನ್ನು ನಾನು ಇನ್ನೂ ಇಟ್ಟು ಕೊಂಡರೆ, ನನ್ನ ಮುದಿ ತಾಯಿಯು, ಮುದ್ದು ಸಹೋದರನು, ಸಚ್ಚರಿತೆ ಲಕ್ಷ್ಮಿ ಮತ್ತು ನನ್ನಪ್ರಾಣಪ್ರಿಯನು ಇನ್ನೆಂತಹ ಭಯಂಕರ ವಿಪತ್ತಿ ಗೊಳಗಾಗುವರೋ! ನಾನೊಬ್ಬಳು ಸತ್ತರೆ ಎಲ್ಲರ ಆಪತ್ತೂ ದೂರವಾಗು ವುದು ಕೂಡದು. ನಾನಿನ್ನು ಬದುಕಿರಕೂಡದು. (ನಿರ್ಧಾರ ಮಾಡಿ ಅತ್ಯವಸರದಿಂದ ಹೊರಟುಹೋಗುವಳು).

ಲಕ್ಷ್ಮಿ:—(ಪೊದೆಯ ಮರೆಯಿಂದ ಹೊರಬಂದು ಸುಂದರಿಯ ಹಿಂದೋಡಿ ಅವಳ ಸೆರಗು ಹಿಡಿದೆಳೆದು) ಸುಂದರಿ, ಎಲ್ಲಿ ಹೋಗುತ್ತಿ ರುವೆ ಇಷ್ಟೊಂದು ಅವಸರದಿಂದ?

ಸುಂದರಿ:—(ಹಿಂತಿರುಗಿ ಲಕ್ಷ್ಮಿಯ ಕಡೆಗೆ ಕ್ರೂರದೃಷ್ಟಿ ಬೀರಿ ಸೆರಗನ್ನವಳ ಕೈಯಿಂದೆಳೆದು) ಎಲ್ಲಿ ಹೋದರೂ ನೀನು ನನ್ನ ಬೆನ್ನು ಬಿಡ ಲಾರೆಯಲ್ಲ ಲಕ್ಷ್ಮಿ? ನಿನಗೆ ಬೇರೆ ಕೆಲಸವಿಲ್ಲವೇ? ನಾನು ಎಲ್ಲಿ ಹೋದರೆ ನಿನಗೇನು? ನನ್ನಿಂದಾಗಿ ನೀವು ಅನುಭವಿಸಿದ ಸುಖ ಸಾಲದೇ? ಇನ್ನೂ ಬೇಕೆ?

ಲ:—(ಒಂದೇ ಸವನೆ ಕಣ್ಣೀರಿಳಿಸಿ ಬಾಯ್ಬಿಟ್ಟು ಅಳುವಳು. ತುಸು ಹೊತ್ತಿನ ಮೇಲೆ ಬಹಳ ಕಷ್ಟದಿಂದ ದುಃಖವನ್ನು ನುಂಗಿಕೊಂಡು ಗದ್ಗದ ಕಂಠದಿಂದ) ಇನ್ನೂ ಬೇಕು ಸುಂದರಿ. ನಿನ್ನಿಂದಾಗಿ ಎಷ್ಟುಕಷ್ಟ ಬಂದರೂ ನಾವದನ್ನು ಸಂತೋಷದಿಂದ ತಾಳಿಕೊಳ್ಳುವೆವು.

ಸು:—(ಕೂಡಲೇ ಕಾಠಿಣ್ಯವು ತೊಲಗಿ ಹೃದಯವು ಕರಗಿ ನೀರಾಗಿ ಲಕ್ಷ್ಮಿಯ ಕೈಹಿಡಿದು) ಲಕ್ಷ್ಮೀ, ನಾನು ತಪ್ಪಿ ಮಾತಾಡಿದುದನ್ನು ಕ್ಷಮಿಸುವೆಯಾ?

ಲ:—ಆ ಮಾತಂತಿರಲಿ. ನೀನೀಗ ಒಬ್ಬಳೇ ಎಲ್ಲಿಗೆ ಹೊರಟು ದುದು?

ಸು:—ಎಲ್ಲಿಗಾದರೂ ಹೋಗಿಬಿಡುವೆನೆಂದು.

ಲ:—ನೀನೇ ಪಂಚಪ್ರಾಣವಾಗಿರುವ ನಿನ್ನ ಮುದಿತಾಯಿ ಯನ್ನು ಬಿಟ್ಟು, ನಿನಗಾಗಿ ಪ್ರಾಣವನ್ನೇ ಕೊಡಲು ಸಿದ್ಧನಿರುವ ತಮ್ಮನ ಮೈ ಹುಣ್ಣುಗಳೆಲ್ಲಾ ಸಂಪೂರ್ಣ ಗುಣವಾಗಿ ಅವನು ಹಾಸಿಗೆ ಬಿಟ್ಟೇ ಳುವ ಮೊದಲು, ಯಾರೊಡನೆಯೂ ಒಂದು ಮಾತು ಕೂಡಾ ಹೇಳದೆ ಹೊರಟುಹೋಗುವಷ್ಟರ ಹೃದಯಹೀನಳೇ ನೀನು ಸುಂದರಿ? ಅದನ್ನು ನಾನು ನಂಬಲಾರೆ. ನೀನು ನನ್ನೊಡನೆ ಸುಳ್ಳು ಹೇಳುವೆ.

ಸು:—ಲಕ್ಷ್ಮೀ, ನನಗೀಗೀಗ ಹುಚ್ಚು ಹಿಡಿದಂತಾಗಿದೆ. ನಾನೇನು ಮಾಡುವೆನೆಂದು ನನಗೇನೇ ತಿಳಿಯದು.

ಲ:—ನೀನು ಆತ್ಮಹತ್ಯೆ ಮಾಡಿಕೊಳ್ಳಲು ಹೊಳೆಯ ಕಡೆಗೆ ಧಾವಿ ಸುತ್ತಿದ್ದುದಲ್ಲವೇ? ರೆಂಜೆ ಮರದಡಿಯಲ್ಲಿ ನಿಂತು ಆ ನಿರ್ಧಾರವನ್ನೇ ನೀನು ಮಾಡಿದುದಲ್ಲವೇ?

ಸು:—ಹೌದು, ಲಕ್ಷ್ಮೀ ಹೌದು. ನಾನು ಏತಕ್ಕಾಗಿ ಈ ಬಾಳ ನ್ನಿಟ್ಟುಕೊಳ್ಳಬೇಕು ಹೇಳು?

ಲ:—ನಿನಗಾಗಿ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿ ಬೀದಿ ಭಿಕಾರಿಯಂತಾಗಿರುವ ರಾಮಭಟ್ಟರಿಗಾಗಿ. ನೀನೇ ತಮ್ಮ ಪ್ರಾಣದ ಪ್ರಾಣವಾಗಿರುವ ನಿನ್ನ ತಾಯಿ ಮತ್ತು ತಮ್ಮನಿಗಾಗಿ. ನೀನು ಆತ್ಮ ಘಾತ ಮಾಡಿಕೊಂಡರೆ ಅವರು ಬದುಕುವರೆಂದು ಬಗೆದೆಯಾ ಸುಂದರಿ?

ಒಂದೊಮ್ಮೆ ಬದುಕಿದರೂ ಜೀವನ್ಮೃತರಾಗಿರಬೇಕಾಗುವುದಲ್ಲವೆ ಅವರು? ಇಷ್ಟೊಂದು ವಿಚಾರ ಮಾಡದಾದೆಯಾ ನೀನು?

[ಸುಂದರಿಯು ಉದ್ವೇಗದಿಂದ ಮಾತಾಡಲಾರದೆ ಧಾರಾವಾಹಿಯಾಗಿ ಕಣ್ಣೀರಿಳಿಸುತ್ತಾ ನಿಂತು ಬಿಡುವಳು.]

ಸುಂದರಿ, ಯಾಕೆ ಮಾತಾಡಲಾರೆ? ಇನ್ನು ಸ್ವಲ್ಪ ಕಾಲ ಮಾತ್ರ ನೀನು ತಾಳ್ಮೆಯಿಂದಿದ್ದರೆ ನಿನ್ನ ಮತ್ತು ನಮ್ಮೆಲ್ಲರ ಕಷ್ಟವೂ ಪರಿಹಾರ ವಾಗಬಹುದು. ನಿನ್ನಂಥವರಿಗೆ ಸುಖ ದೊರೆಯದಿದ್ದರೆ ಲೋಕದಲ್ಲಿ ನೀತಿ ನ್ಯಾಯಕ್ಕೆ ಜಯವೇ ಇಲ್ಲವೆಂದಾಗುವುದಿಲ್ಲವೇ ಸುಂದರಿ?

ಸು:—ನ್ಯಾಯ ಅನ್ಯಾಯ ಮತ್ತು ಸುಖದುಃಖಗಳಿಗೇನೂ ಸಂಬಂಧವಿಲ್ಲ ಲಕ್ಷ್ಮಿ. ಜನತೆಯ ದೃಷ್ಟಿಯ ಸುಖದುಃಖದ ತಕ್ಕಡಿ ಯಿಂದ ದೈವನ್ಯಾಯವನ್ನು ತೂಕಮಾಡಲು ಸಾಧ್ಯವಿಲ್ಲ.

ಲ:—ನೀನೇನು ಬೇಕಾದರೂ ಹೇಳು ಸುಂದರಿ. ಒಂದಲ್ಲೊಂದು ದಿನ ನಿನಗೆ ಸುಖ ದೊರೆಯುವುದೆಂದು ನನ್ನ ಅಂತರಂಗವು ಹೇಳುತ್ತಿರು ವುದು. ನಿನ್ನ ಆತ್ಮಹತ್ಯೆಯ ನಿರ್ಧಾರವು, ನಮ್ಮೆಲ್ಲರ ಮತ್ತು ಮುಖ್ಯ ವಾಗಿ ರಾಮಭಟ್ಟರ ಸುಖವನ್ನು ಮಣ್ಣುಗೂಡಿಸುವ ಪಾಪಕೃತ್ಯವಾಗಿದೆ. ನನ್ನ ಹಾಗಾದರೆ ನೀನೇನು ಮಾಡುತ್ತಿದ್ದೆ ಸುಂದರಿ?

ಸು:—ತಾಳ್ಮೆಯ ಪ್ರತಿಮೂರ್ತಿ ನೀನು! ಅಹ! ಸೋಮು ಹೀಗಾ ಗುವನೆಂದು ಯಾರು ಬಗೆದಿದ್ದರು? ನೀನು ನಿನ್ನ ತವರುಮನೆಗಾದರೂ ಹೋಗಿ ಕೆಲ ದಿನ ಸುಖವಾಗಿರಬಾರದೇ?

ಲ:—ಛೆ, ಏನು ಹೇಳುವೆ ಸುಂದರಿ? ಈ ಕಷ್ಟದಲ್ಲಿ ನಿಮ್ಮನ್ನೆಲ್ಲಾ ಬಿಟ್ಟು ನಾನೊಬ್ಬಳು ತವರು ಮನೆಗೆ ಹೋಗಿ ಸುಖವಾಗಿರುವುದೇ?

ಸು:—ಲಕ್ಷ್ಮಿ, ನೀನು ಹೇಳುವಂತೆ ಒಂದೊಮ್ಮೆ ನನಗೆ ಮುಂದೆ ಸುಖವುಂಟಾಗಬಹುದಾದರೂ ನಿನ್ನ ಪಾಡೇನು? ಸೋಮುನಿನ್ನು ಒಳ್ಳೇ ದಾಗುವನೆಂಬ ಆಶೆಯಿದೆಯೇ?

ಲ:—ಒಳ್ಳೇದಾಗಲಿ, ಕೆಟ್ಟದಾಗಲಿ, ಮದುವೆಯಾದ ಮೇಲೆ ಏನ ನ್ನಾದರೂ ಅನುಭವಿಸಲು ಸಿದ್ಧಳೇ ಇರಬೇಕಲ್ಲವೆ ಹೆಂಗಸಾದವಳು? ಒಳ್ಳೇದಾಗುವುದೂ, ಕೆಟ್ಟದಾಗುವುದೂ ಅವಳವಳ ಭಾಗ್ಯಪದು.

ಸು:—ನೀನು ಕೆಲಸಮಯ ನಿನ್ನ ತಾಯಿಮನೆಗೆ ಹೋಗು ಲಕ್ಷ್ಮಿ; ನಾನು ಮಂಗಳೂರಿಗಾದರೂ ಹೋಗಿಬಿಡುವೆನು. ಆ ಮೇಲಾದರೂ ಸೋಮನು ಸುಖವಾಗಿರಲಿ ಮನೆಯಲ್ಲಿ.

ಲ:—ಒಳ್ಳೇ ಮಾತಿದು ಸುಂದರಿ! ನೀನು ಕಲಿತವಳಾಗಿ ಈ ರೀತಿ ಮಾತಾಡುವುದೇ? ಈ ಕಾಲದಲ್ಲಿ ನಾನವರನ್ನು ಬಿಟ್ಟುಹೋದರೆ ಅವರು ಮನೆಗೆ ಬರುವುದನ್ನೇ ನಿಲ್ಲಿಸಿ ಆ ಕೇಡಿಗಳೊಂದಿಗೇನೇ ವಾಸಿಸಿ, ಸಂಪೂರ್ಣವಾಗಿ ಅವರಂಕೆಯೇ ಆಗಿಹೋಗುವುದಿಲ್ಲವೇ? ಈಗ ಒಂದಲ್ಲೊಂದು ದಿನ ಅವರ ಸಹವಾಸಬಿಟ್ಟು ಒಳ್ಳೆಯವರಾಗಬಹುದೆಂಬ ಆಶೆ ಇಲ್ಲವೇ?

ಸು:—ಮೊದಲಾಗಿ ನಾನೊಬ್ಬಳು ಇಲ್ಲಿಂದ ಹೋದರೆ ನಿಮಗೆಲ್ಲರಿಗೂ ಸುಖವಾಗುವುದು ಲಕ್ಷ್ಮಿ. ಇಡೀ ಮನೆಗೇನೇ ಶನಿಸ್ವರೂಪಳು ನಾನು. ಸೋಮನೂ ಒಳ್ಳೇದಾಗಬಹುದು. ನಿಮ್ಮ ಈಗಣ ಅಸಹನೀಯ ಪೀಡೆಯೂ ದೂರವಾಗಬಹುದು.

ಲ:—ಅದು ಹೇಗೆ ಸುಂದರಿ? ರಾಮಭಟ್ಟರ ಕಾಗದ ಬಾರದೆ ನೀನು ಮಂಗಳೂರಿಗೆ ಹೋಗುವುದು ಸರಿಯಲ್ಲ. ಅವರನ್ನು ಮತ್ತಷ್ಟು ಕಷ್ಟದಲ್ಲಿ ಹಾಕುವಂತಾಗುವುದು.

ಸು:—ಮಂಗಳೂರಿಗಲ್ಲದಿದ್ದರೂ ನಾನಿಲ್ಲಿಂದ ಎಲ್ಲಿಗಾದರೂ ಹೋಗಿಬಿಟ್ಟರೆ ಪಟೇಲ ದುಗ್ಗಪ್ಪಶೆಟ್ರು ಸೋಮನಿಗೆ ಹಣವೇನೂ ಕೊಡದೆ ಅವನಷ್ಟಕ್ಕೇನೇ ಬಿಟ್ಟುಬಿಡುವರು. ಆಗ ಅವನು ವಿವೇಕ ತಳೆದು ಒಳ್ಳೆಯವನಾಗಬಹುದು. ಮನೆಯಲ್ಲಿ ನೀವೆಲ್ಲರೂ ಶಾಂತಿಯಿಂದಿರುವ ಸುಯೋಗ ಬರಬಹುದು.

ಲ:—ಎಲ್ಲಿಗಾದರೂ ಅಂದರೆ ಎಲ್ಲಿಗೆ ಹೋಗುವೆ ಸುಂದರಿ? ಚಿಕ್ಕ ಜವ್ವನೆಯೂ, ಅತ್ಯಂತ ರೂಪವತಿಯೂ ಆದ ನೀನು ಎಲ್ಲಿ ಹೋದರೂ ತೊಂದರೆ ತಪ್ಪುವುದೇ? ಕಾವಲಿಯಿಂದ ಹಾರಿ ಒಲೆಗೆ ಬಿದ್ದಂತಾದರೆ ಹೇಗೆ ಸುಂದರಿ?

ಸು:—ಹಾಗಾದರೆ ನಾನೇನು ಮಾಡಲಿ?

ಲ:—ನೀನೇನೂ ಮಾಡುವುದು ಬೇಡ. ಎಂದಿನಂತೆ ಇನ್ನು ಮುಂದೆಯೂ ಸ್ವಲ್ಪ ಸಮಯ ತಾಳ್ಮೆಯಿಂದಿದ್ದರಾಯಿತು. ನಿನಗೆ

ಖಂಡಿತ ಒಳ್ಳೆದಾಗುವುದು. ಆ ಪುಣ್ಯಾತ್ಮೆ ನಾಗಮ್ಮ ಶೆಟ್ಟಿಯವರನ್ನು ದೇವರೇ ನಮ್ಮ ಸಹಾಯಕ್ಕಾಗಿ ಒದಗಿಸಿಕೊಟ್ಟಿಹು. ಅವರಲ್ಲದಿರುತ್ತಿದ್ದರೆ ನಮಗೆ ಈ ಊರಲ್ಲೇ ಇರಲು ಸಾಧ್ಯವಿದ್ದಿಲ್ಲ. ಅವರು ನಮ್ಮನ್ನಿನ್ನು ಬಿಟ್ಟುಹಾಕುವ ಹಾಗಿಲ್ಲ. ನಮಗಾಗಿ ಅವರು ತನ್ನ ಗಂಡನನ್ನೇ ಮನೆಯಿಂದ ಹೊರಹಾಕಲು ಕೂಡಾ ಸಿದ್ಧರಿರುವರೆಂದ ಮೇಲೆ ನಾವಿನ್ನು ಹೆಚ್ಚಿಗೆ ಭೀತಿಪಡಲು ಕಾರಣವಿಲ್ಲ. ಅವರೇ ದುಗ್ಗಪ್ಪಶೆಟ್ರ ಕಾರುಬಾರನ್ನೆಲ್ಲಾ ನಿಲ್ಲಿಸಿಬಿಡುವ ದಿನವು ಬಲು ದೂರವಿರಲಾರದು.

ಸು:—ಅದು ಹೌದು. ಅವರ ಉಪಕಾರವನ್ನು ನಾವು ಜನ್ಮ ಜನ್ಮಕ್ಕೂ ಮರೆಯಲು ಸಾಧ್ಯವಿಲ್ಲ. ದುಗ್ಗಪ್ಪಶೆಟ್ರು ಎಣಿಸಿದುದೊಂದು, ಆದುದು ಮತ್ತೊಂದು, ಆ ದಿವಸ ಅವರ ಮನೆಯಲ್ಲಿ. ನಮ್ಮನ್ನು ದುಗ್ಗಪ್ಪಶೆಟ್ರು ಅಂದು ವಂಚಿಸಿ ಕರೆಸಿದುದು ಒಂದು ದೃಷ್ಟಿಯಿಂದ ಒಳ್ಳೇದೇ ಆಯಿತು. ತನ್ನ ಕೇಡನ್ನೇ ಅವರು ಮಾಡಿಕೊಂಡಂತಾಯಿತು. ಎಲ್ಲವೂ ದೈವತಂತ್ರ.

ಲ:—ಅಂದಮೇಲೆ ಎಲ್ಲವನ್ನೂ ನೀನು ದೈವಕ್ಕೊಪ್ಪಿಸಿ ತಾಳ್ಮೆಯಿಂದಿರದೆ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾದುದೇಕೆ?

ಸು:—ಅಮ್ಮನೊಡನೆ ಆ ಪ್ರಸ್ತಾಪ ಎತ್ತಬಾರದು ನೀನು ಲಕ್ಷ್ಮಿ. ನನ್ನಾಣೆ ಉಂಟು ಎತ್ತಿದರೆ!

ಲ:—ನೀನಿನ್ನು ಇಂದಿನಂತೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲೆಂದು ನನ್ನಾಣೆಯಿಟ್ಟು ಹೇಳುವೆಯಾ?

ಸು:—ಆಯ್ತು ಲಕ್ಷ್ಮಿ; ನಿನ್ನಾಣೆಯಿಡೆ—ನಾನಿನ್ನೇನಾದರೂ ಅಂತಹ ಕೆಲಸ ಮಾಡಿದರೆ! ಇನ್ನು ಮುಂದೆ ನಿನ್ನೊಡನೆ ಅಭಿಪ್ರಾಯ ಕೇಳದೆ ನಾನಾವ ಕೆಲಸವನ್ನೂ ಮಾಡಲಾರೆ. ಕಲಿತವಳಾದ ನನಗಿಂತಲೂ ಕಲಿಯದ ನೀನು ಎಷ್ಟೋ ವಿವೇಕಶಾಲಿಯಿರುವೆ.

ಲ:—ಸಾಕು, ಸಾಕು ತಮಾಷೆ; ನಡೆ ಹೋಗುವ ಮನೆಗೆ.

(ಇಬ್ಬರೂ ಕೈಕೈ ಹಿಡಿದುಕೊಂಡು ಹೋಗುವರು).

ನೋಟ ೨

(ಮಂಗಳೂರಿನ ಪಿಯರ್ಸ್ ಲೆಸ್ಲಿ ಆಫೀಸು. ರಾಮುಭಟ್ಟನು ಆಫೀಸಿನ ಟಪ್ಪಾಲನ್ನು ತಂದು,ಅದರಲ್ಲಿ ಸುಂದರಿಯಿಂದ ತನಗೆ ಬಂದಿದ್ದ ಪತ್ರವೊಂದನ್ನು ತೆಗೆದು ಒಡೆದೋದಿ ತುಸು ಹೊತ್ತು ಮೌನವಾಗಿ ಒಂದೆಡೆ ಕೂತು ಕಣ್ಣೀರಿಳಿಸುವನು. ಅಷ್ಟರಲ್ಲಿ ಆಫೀಸು ಗಡಿಯಾರವು ಘಂಟೆ 10 ಬಡಿಯಲು ಫಕ್ಕನೆ ಎದ್ದು ಮೇಜು ಕುರ್ಚಿಗಳನ್ನೊರಸುತ್ತಾ, ಹರಿದು ಬರುವ ಕಣ್ಣೀರನ್ನು ಆಗಾಗ ಒರಸಿಕೊಳ್ಳುವನು).

ರಾಮು:—(ದಾರಿದ್ರ್ಯ-ಪ್ರಾಣ ಪೀಡೆಯಿದು—ಎಂಬಂತೆ)

ಕಾರಿರುಳು-ಜೀವನವ ಕವಿದು-ಬೆಳಕೇ-ತೋರ
ದಾಗಿಹುದು । ಎಂದೆಂದು ।
ಅದೃಷ್ಟ ಫಲವದೇನಿರಲಿ-ದೇವನೀ-ಕರುಣನಿಧಿಯಾಗಿ ॥
ಕ್ಷಮೆಯ-ನೀಯುತೀ ದುರಂತ ।
ದಿಂದ ಪಾರುಗಾಣಿಸೆಯ । ಹೇ ದೇವ ॥

(ಮೇಜು, ಕುರ್ಚಿ ಒರಸಿ ಆದ ಮೇಲೆ ರಸ್ಯದ ಪ್ರಖ್ಯಾತ ಗ್ರಂಥಕರ್ತ ಮೆಕ್ಸಿಮ್ ಗೋರ್ಕಿಯ 'ಮದರ್' (ತಾಯಿ) ಎಂಬ ಕಾದಂಬರಿಯನ್ನು ಕವಾಟೊಂದರ ಮೇಲ್ಭಾಗದಿಂದ ತೆಗೆದು ಕೋಣೆಯ ಒಂದು ಮೂಲೆಯಲ್ಲಿ ಗೋಡೆಗೊರಗಿ ಕೂತು ಓದುವುದರಲ್ಲಿ ನಿರತನಾಗುವನು. ಮೆನೇಜರ್ ಸಾಹೇಬನು ಅಂದೇನೋ ಜರೂರು ಕೆಲಸದ ನಿಮಿತ್ತ ಅರ್ಧ ಘಂಟೆ ಮುಂದಾಗಿ ಆಫೀಸಿಗೆ ಫಕ್ಕನೆ ಪ್ರವೇಶಿಸುವಾಗ, ಪೇದೆ ರಾಮುಭಟ್ಟನು ಓದುತ್ತಾ ಕುಳಿತಿರುವುದನ್ನು ನೋಡುವನು).

ಮೆನೇಜರ್:—Peon, what are you doing?(ಪೇದೆಯೇ, ಏನು ಮಾಡುತ್ತಿರುವೆ?) (ನೆಟ್ಟಗೆ ರಾಮುಭಟ್ಟನ ಬಳಿಗೆ ಸರಿದು ಆತನ ಕೈಯಲ್ಲಿದ್ದ ಪುಸ್ತಕ ತೆಗೆದುಕೊಂಡು ನೋಡಿ ಆಶ್ಚರ್ಯಗೊಂಡು) Do you know English? Don't be afraid. Tel me the truth. (ನಿನಗೆ ಇಂಗ್ಲೀಷ್ ಗೊತ್ತಿದೆಯೇ? ಹೆದರಬೇಡ. ಸತ್ಯಹೇಳು).

ರಾ:—(ಕಂಗೆಟ್ಟು ಏನು ಉತ್ತರವೀಯುವುದೆಂದು ತುಸು ಹೊತ್ತು ಯೋಚಿಸಿ, ಆ ಮೇಲೆ ಸತ್ಯ ಹೇಳುವ ನಿರ್ಧಾರಮಾಡಿ) Yes sir! (ಹೌದು ಸ್ವಾಮಿ).

ಮೆ:—How far have you studied? (ನೀನೆಷ್ಟು ಕಲಿತಿರುವೆ?)

ರಾ:—I am a garduate sir! (ನಾನೊಬ್ಬ ಬಿ. ಎ. ಪದವೀಧರ ಸ್ವಾಮಿ!)

ಮೆ:—(ಚಕಿತನಾಗಿ) A graduate doing a peon's work (ಬಿ. ಎ. ಪದವೀಧರನು ಪೇದೆ ಕೆಲಸ ಮಾಡುವುದು!)

ರಾ:—Yes sir. Because I could not get any other job sir? (ಹೌದು ಸ್ವಾಮಿ. ನನಗೆ ಬೇರೇನೂ ಕೆಲಸ ಸಿಗಲಿಲ್ಲ.)

ಮೆ:—Are you not ashmed to serve as a peon? (ಪೇದೆಯ ಕೆಲಸ ಮಾಡಲು ನಿನಗೆ ನಾಚಿಕೆಯಾಗುವುದಿಲ್ಲವೇ?)

ರಾ:—Why should I sir? I was very much ashamed to be unemployed. Now I am proud that I have a job, that I am a peon at least. (ಯಾಕೆ ಸ್ವಾಮಿ? ನಿರುದ್ಯೋಗಿಯಾಗಿರಲು ನಾನು ಬಹಳ ನಾಚಿಕೆ ಪಡುತ್ತಿದ್ದೆ. ಈಗ ನನಗೊಂದು ಪೇದೆ ಕೆಲಸವಾದರೂ ಇರುವುದೆಂದು ಅಭಿಮಾನ ಪಡುತ್ತೇನೆ.)

ಮೆ:—(ಆಶ್ಚರ್ಯ ಮುಖಮುದ್ರೆಯಿಂದ ರಾಮಭಟ್ಟನನ್ನು ಈಕ್ಷಿಸಿ) I see. (ಪುಸ್ತಕ ನೋಡಿ) Where did you get this book from?(ಹಾಗೋ? ಈ ಪುಸ್ತಕವನ್ನೆಲ್ಲಿಂದ ಪಡಕೊಂಡೆ?)

ರಾ:—From a college friend of mine sir (ನನ್ನೊಬ್ಬ ಕೊಲೆಜ್ ಮಿತ್ರನಿಂದ)

ಮೆ:—Have you no parents or any other relatives? Are they all very poor? Are you married? (ನಿನಗೆ ತಂದೆ ತಾಯಿಗಳು ಮತ್ತು ಇತರ ಸಂಬಂಧಿಕರಾರೂ ಇಲ್ಲವೇ? ಅವರೆಲ್ಲರೂ ಬಹಳ ಬಡವರೇ? ನಿನಗೆ ಮದುವೆಯಾಗಿರುವುದೇ?)

ರಾ:—I come from a rich family sir. My father is a monied man. I am unmarried. (ನಾನೊಂದು ಶ್ರೀಮಂತ ಕುಟುಂಬದವ ಸ್ವಾಮಿ. ನನ್ನ ತಂದೆ ದುಡ್ಡಿದ್ದ ಮನುಷ್ಯ. ನನಗೆ ಮದುವೆಯಾಗಿಲ್ಲ.)

ಮೆ:—I see. Then why did you take up a peon's job? It looks very strange! (ಹಾಗಾದರೆ ನೀನು ಪೇದೆಯ ಕೆಲಸ ವಹಿಸಿಕೊಂಡುದೇಕೆ? ನಿನ್ನ ಸಂಗತಿ ಬಹಳ ಆಶ್ಚರ್ಯ ತೋರುತ್ತದೆ).

ರಾ:—I wanted to be independent sir. (ನಾನು ಸ್ವತಂತ್ರ ಜೀವನ ನಡಿಸಲೆಳಸುತ್ತೇನೆ ಸ್ವಾಮಿ.)

ಮೆ:—What independence can you have by being a peon? (ಪೇದೆಯಾಗಿ ಎಂತಹ ಸ್ವಾತಂತ್ರ್ಯವನ್ನು ನೀನು ಪಡೆಯಬಲ್ಲಿ?)

ರಾ:—I live upon my own earning sir. I stand on my legs. I am satisfied with that much for the present sir. (ನನ್ನ ಸಂಪಾದನೆಯಿಂದಲೇ ನಾನು ಜೀವನ ನಿರ್ವಾಹ ಮಾಡುತ್ತೇನೆ ಸ್ವಾಮಿ. ನನ್ನ ಕಾಲುಗಳ ಮೇಲೆಯೇ ನಿಂತಿರುತ್ತೇನೆ. ಪ್ರಕೃತ ಅಷ್ಟರಿಂದಲೇ ತೃಪ್ತನಿರುತ್ತೇನೆ).

ಮೆ:—You are a wonderful man Mr. Rama Bhat! You say your father is a monied man. Why could you not get some money from him and take to some business? Then you can be really independent. (ನೀನು ವಿಚಿತ್ರ ಮನುಷ್ಯ ರಾಮಭಟ್ಟ! ನಿನ್ನ ತಂದೆಯು ಹಣವಂತರೆಂದು ಹೇಳುವೆ. ಅವರಿಂದ ಹಣ ಪಡೆದು ಏನಾದರೂ ವ್ಯಾಪಾರ ಮಾಡಬಾರದೇಕೆ? ಆಗ ನೀನು ನಿಜವಾಗಿಯೂ ಸ್ವತಂತ್ರನಾಗಿರಬಹುದು).

ರಾ:—My father has checked me out of the

house sir. (ತಂದೆಯು ನನ್ನನ್ನು ಮನೆಯಿಂದ ಹೊರಹಾಕಿದ್ದಾರೆ ಸ್ವಾಮಿ).

ಮೆ:—Why for? (ಏತಕ್ಕಾಗಿ?)

ರಾ:—Oh, it is a long story sir. (ಅದೊಂದು ದೀರ್ಘವಾದ ಕತೆ ಸ್ವಾಮಿ).

ಮೆ:—Let me hear your long story. It seems to be very interesting. (ನಿನ್ನ ದೀರ್ಘ ಕತೆಯನ್ನು ಕೇಳಲೆಳಸುವೆನು. ಅದು ಬಹಳ ಸ್ವಾರಸ್ಯದ್ದಿರುವಂತಿದೆ.)

ರಾ:—I wanted to marry a girl companion of my boyhood of a lower caste than mine sir. (ನನಗಿಂತ ಕೆಳಜಾತಿಯ ನನ್ನ ಬಾಲ್ಯ ಗೆಳತಿಯೊಬ್ಬಳನ್ನು ನಾನು ಮದುವೆಯಾಗಲಿಚ್ಛಿಸಿದೆ ಸ್ವಾಮಿ).

ಮೆ:—Why, it is a very short story. Have you married that girl? (ಇದು ಬಹಳ ಸಣ್ಣಕತೆ! ನೀನು ಆ ಹುಡುಗಿಯನ್ನು ಮದುವೆಯಾಗಿರುವೆಯಾ?)

ರಾ:—No sir, I could not. I wanted to be an independent man and then marry her. (ಇಲ್ಲ ಸ್ವಾಮಿ, ನಾನು ಸ್ವತಂತ್ರನಾಗಿ ಆ ಮೇಲೆ ಅವಳನ್ನು ಮದುವೆಯಾಗಲೆಳಸುತ್ತೇನೆ).

ಮೆ:—(ನಸುನಕ್ಕು) What independence can you ever hope to have Mr. Rama Bhat as a poor peon? (ಒಬ್ಬ ಬಡಪೇದೆಯಾಗಿ ನೀನು ಎಂದಾದರೂ ಎಂತಹ ಸ್ವಾತಂತ್ರ್ಯ ಪಡೆಯಬಲ್ಲೆ ರಾಮಭಟ್ಟ?)

ರಾ:—I hope to get a better job sir. I am serving as a peon only untill that. (ಒಳ್ಳೇ ಕೆಲಸವೇನಾದರೂ ಸಿಕ್ಕೀತೆಂದು ಆಶಿಸುತ್ತೇನೆ ಸ್ವಾಮಿ. ಆ ವರೆಗೆ ಮಾತ್ರ ನಾನು ಪೇದೆ ಕೆಲಸಮಾಡುತ್ತಿರುವುದು.)

ಮೆ:—I see. Where is your girl now? (ಸರಿ. ನಿನ್ನ ಹುಡುಗಿ ಈಗ ಎಲ್ಲಿದ್ದಾಳೆ?)

ರಾ:—She was a teacher in a school near our village for sometime sir. Now she cannot go to that school lest my father's hirelings should molest her. On account of our love and my determination to marry her at all cost she is persecuted and her sufferings have become uubearable sir. Her very life is in danger. (ನಮ್ಮ ಹಳ್ಳಿ ಬಳಿಯ ಶಾಲೆಯೊಂದರಲ್ಲಿ ಅವಳು ಕೆಲಸಮಯ ಅಧ್ಯಾಪಕಿಯಾಗಿದ್ದಳು. ನನ್ನ ತಂದೆಯ ಹಸ್ತಕರ ಉಪಟಳದಿಂದಾಗಿ ಈಗ ಅವಳಿಗೆ ಶಾಲೆಗೆ ಹೋಗಲು ಅಸಾಧ್ಯವಾಗಿದೆ. ನಮ್ಮಿಬ್ಬರ ಪ್ರೇಮ ಮತ್ತು ಏನಾದರೂ ಅವಳನ್ನು ಮದುವೆಯಾಗಿಯೇ ಸಿದ್ಧವೆಂಬ ನನ್ನ ನಿರ್ಧಾರದ ನಿಮಿತ್ತ ಅವಳು ಕ್ರೂರಪೀಡೆಗೊಳಗಾಗಿ ಅವಳ ಸಂಕಷ್ಟವು ಅಸಹನೀಯವಾಗಿದೆ. ಅವಳ ಪ್ರಾಣಕ್ಕೇನೇ ಅಪಾಯವುಂಟಾಗಿದೆ).

ಮೆ:—Poor girl, I pity her. Why not get her here and try to get a teacher's job for her. (ಪಾಪ, ಅವಳ ಪರಿಸ್ಥಿತಿಯು ಕರುಣಾಜನಕವಿದೆ. ಅವಳನ್ನು ಇಲ್ಲಿಗೆ ಕರೆಸಿ ಎಲ್ಲಿಯಾದರೂ ಅಧ್ಯಾಪಕಿ ಕೆಲಸ ದೊರಕಿಸಿ ಕೊಡಲೆತ್ನಿಸಬಾರದೇಕೆ?)

ರಾ:—I am trying my level best to get her a teacher's post in the Mangalore Municipality sir. (ಮಂಗಳೂರು ಮುನಿಸಿಪಾಲಿಟಿಯಲ್ಲಿ ಅವಳಿಗೊಂದು ಅಧ್ಯಾಪಕಿ ಕೆಲಸ ಸಿಗುವಂತೆ ನಾನು ಸಾಧ್ಯವಾದ ಪ್ರಯತ್ನಮಾಡುತ್ತಿದ್ದೇನೆ ಸ್ವಾಮಿ).

ಮೆ:—Very well. The chairman of the Municipality is a friend of mine. I will give him a personal letter. I am sure your girl will get a

teacher's post. (ಒಳ್ಳೇದು, ಮುನಿಸಿಪಲ್ ಚೆಯರ್‌ಮೇನರು ನನ್ನ ಮಿತ್ರ. ಅವರಿಗೆ ನಾನೊಂದು ಕಾಗದ ಕೊಡುತ್ತೇನೆ. ನಿನ್ನ ಹುಡುಗಿಗೆ ಅಧ್ಯಾಪಕಿ ಕೆಲಸ ಸಿಗುವುದು ನಿಶ್ಚಯ).

ರಾ:—Sir-sir-sir! (ಕೃತಜ್ಞತಾಭಾವೋದ್ರೇಕದಿಂದ ಮಾತಾಡಲಾರದಾಗುವನು).

ಮೆ:—You need not express your heartfelt thanks to me Mr. Rama Bhat. I would like to ask you a question in this connection. Love is fickle you know, and woman is always frail. Will your girl marry a peon after she becomes a municipal teacher? (ನಿನ್ನ ಹಾರ್ದಿಕ ಕೃತಜ್ಞತೆಯನ್ನು ನೀನು ಬಾಯಿಂದ ಹೇಳುವ ಅವಶ್ಯವೇನೂ ಇಲ್ಲ ರಾಮಭಟ್ಟ. ಆದರೆ ಈ ಸಂಬಂಧವಾಗಿ ನಿನ್ನೊಡನೊಂದು ಪ್ರಶ್ನೆ ಕೇಳಬಯಸುತ್ತೇನೆ. ಪ್ರೇಮವು ಚಂಚಲವಾದುದು ನೋಡು. ಮತ್ತು ಸ್ತ್ರೀಯರು ಅತ್ಯಂತ ದುರ್ಬಲ ಹೃದಯರು. ನಿನ್ನ ಹುಡುಗಿಯು ಮುನಿಸಿಪಲ್ ಅಧ್ಯಾಪಕಿಯಾದ ಮೇಲೆ ಕೇವಲ ಪೇದೆಯಾಗಿರುವ ನಿನ್ನನ್ನು ಮದುವೆಯಾಗಲೊಪ್ಪಿಯಾಳೇ?)

ರಾ:—She is marrying me, and not the peon sir. Nothing on earth can change the path of our love. Only death can separate us. (ಅವಳು ನನ್ನನ್ನು ಮದುವೆಯಾಗುವುದು; ಪೇದೆಯನ್ನಲ್ಲ ಸ್ವಾಮಿ. ಲೋಕದಲ್ಲಿ ಯಾವುದರಿಂದಲೂ ನಮ್ಮ ಪ್ರೇಮಪಥವನ್ನು ಬದಲಾಯಿಸಲು ಸಾಧ್ಯವಿಲ್ಲ. ಮರಣ ಮಾತ್ರ ನಮ್ಮನ್ನು ಪ್ರತ್ಯೇಕಿಸಬಲ್ಲದು).

ಮೆ:—I see. (ತುಸುಹೊತ್ತು ಯೋಚಿಸಿ) Call the head clerk here. (ಹೆಡ್ ಕ್ಲಾರ್ಕನ್ನು ಇಲ್ಲಿಗೆ ಕರೆ.) (ರಾಮಭಟ್ಟನು ಹೋಗಿ ಹೆಡ್‌ಕ್ಲಾರ್ಕ ರಮೇಶರಾಯರನ್ನು ಬರಹೇಳುವನು. ಅವರು ಕೂಡಲೆ ಬಂದು ಮೆನೇಜರರಿಗೆ ವಂದಿಸಿ ನಿಲ್ಲುವರು.) Mr. Ramesh Rao, we have the unique honour or dishonour of

having a graduate peon. Do you believe it? (ರಮೇಶರಾಯರೇ, ಬಿ. ಎ. ಪದವೀಧರನೊಬ್ಬನು ನಮ್ಮ ಪೇದೆಯಾಗಿರುವ ಅಪೂರ್ವ ಗೌರವ ಅಥವಾ ಅಗೌರವವು ನಮಗುಂಟಾಗಿದೆ. ನೀವಿದನ್ನು ನಂಬುವಿರೋ?)

ರ:—No sir, I can never believe it. No graduate will ever think of becoming a peon sir. (ಇಲ್ಲ ಸ್ವಾಮಿ; ನಾನೆಂದೂ ನಂಬಲಾರೆ. ಬಿ. ಎ. ಪದವಿಧರನೆಂದಿಗೂ ಪೇದೆಯಾಗುವ ಆಲೋಚನೆ ಮಾಡಲಾರ.)

ಮ:—But facts are sometimes stranger than fiction. A graduate of the Madras University has been serving as a peon in our office since about seven weeks now. (ಆದರೆ ವಸ್ತುಸ್ಥಿತಿಯು ಕೆಲವು ವೇಳೆ ಕಲ್ಪನೆಗಿಂತಲೂ ವಿಚಿತ್ರವಾಗಿರುವುದು. ಮದ್ರಾಸ್ ವಿಶ್ವವಿದ್ಯಾಲಯದ ಬಿ. ಎ. ಪದವಿಧರನೊಬ್ಬನು ಈಗ ಸುಮಾರು 7 ವಾರಗಳಿಂದ ನಮ್ಮ ಆಫೀಸಿನ ಪೇದೆಯಾಗಿ ಕೆಲಸಮಾಡುತ್ತಿರುವನು.)

ರ:—(ವಿಸ್ಮಿತನಾಗಿ ರಾಮುಭಟ್ಟನನ್ನೊಮ್ಮೆ ನೋಡಿ) But he never told me about it sir. (ಆದರೆ ಆವನು ನನ್ನೊಡನೆ ಆ ವಿಷಯವನ್ನೇನೂ ಹೇಳಲಿಲ್ಲ ಸ್ವಾಮಿ.)

ಮ:—(ನಗುತ್ತಾ) If he had told you, perhaps he would not have got the peon's post even. I too was not aware of it untill I found him just now reading Gorki's 'Mother'. Then I questioned and got his whole story from him. It is very interesting. By becoming a peon in our office he gets a good job now. Is it not a blessing in disguise? (ಅವನು ತಾನೊಬ್ಬ ಬಿ. ಎ. ಪದವಿಧರನೆಂದು ಹೇಳಿದ್ದರೆ ಪ್ರಾಯಶಃ ಪೇದೆ ಕೆಲಸ ಕೂಡಾ ಅವನಿಗೆ ಸಿಗುತ್ತಿದ್ದಿಲ್ಲ. ಅವನು

ಈಗ ಗೋರ್ಕಿಯು 'ಮದರ್' ಎಂಬ ಪುಸ್ತಕವನ್ನೋದುತ್ತಿರುವುದನ್ನು ನಾನು ಕಂಡುಕೊಳ್ಳುವನಕ ನನಗೂ ಅವನಾರೆಂದು ತಿಳಿದಿರಲಿಲ್ಲ. ಆ ಮೇಲೆ ನಾನು ಪ್ರಶ್ನಿಸಿ ಅವನ ಕತೆಯನ್ನೆಲ್ಲಾ ತಿಳಿದೆ. ಅದು ಬಹಳ ಸ್ವಾರಸ್ಯದ್ದಿದೆ. ನಮ್ಮ ಆಫೀಸಿನಲ್ಲಿ ಅವನೊಬ್ಬ ಪೇದೆಯಾಗಿ ಈಗ ಅವನಿಗೊಂದು ಒಳ್ಳೇ ಕೆಲಸ ಸಿಗುವಂತಾಗಿದೆ. ಇದು ಶಾಪರೂಪದ ಆಶೀರ್ವಾದವಲ್ಲವೇ?)

ರಾ:—What job does he get sir and where? (ಅವನಿಗೆ ಎಂತಹ ಕೆಲಸ ಸಿಗುತ್ತದೆ ಮತ್ತೆ ಎಲ್ಲಿ ಸ್ವಾಮಿ?)

ಮೆ:—I appoint him straight away as our correspondence clerk on a monthly salary of Rs.60. Mr. Bhat, you may go now and come to the office to-morrow to take up your new job. Get your girl also here and marry her soon. I will see that she is appointed as a municipal teacher. (ನಾನು ಈಗಲೇ ಅವನನ್ನು ನಮ್ಮ ಪತ್ರವ್ಯವಹಾರ ಕ್ಲಾರ್ಕನಾಗಿ, ತಿಂಗಳೊಂದರ ರೂ. 60ರ ತಲಬಿನಲ್ಲಿ ನೇಮಿಸುತ್ತೇನೆ. ರಾಮಭಟ್ರೇ, ಈಗ ನೀವು ಹೋಗಬಹುದು. ನಾಳೆ ಆಫೀಸಿಗೆ ಬಂದು ನಿಮ್ಮ ಹೊಸ ಕೆಲಸವನ್ನಾರಂಭಿಸಬಹುದು. ನಿಮ್ಮ ಹುಡುಗಿಯನ್ನು ಬೇಗನೆ ಇಲ್ಲಿಗೆ ಕರೆಸಿ ಮದುವೆಯಾಗಿರಿ: ಅವಳು ಮುನಿಸಿಪಲ್ ಅಧ್ಯಾಪಕಿಯಾಗಿ ನೇಮಕ ಹೊಂದುವಂತೆ ನಾನು ನೋಡುವೆನು.)

(ರಾಮಭಟ್ಟನು ಆವೇಶಭರದಿಂದ ಫಕ್ಕನೆ ಮೆನೇಜರ್ ಸಾಹೇಬರ ಮತ್ತು ಹೆಡ್‌ಕ್ಲಾರ್ಕರ ಕಾಲಿಗೆರಗಿ ಧರಧರನೆ ಕಣ್ಣೀರಿಳಿಸುತ್ತಾ ಅವಾಕ್ಕಾಗಿ ನಿಂತುಕೊಳ್ಳುವನು).

ಮೆ:—What is this? Why do you fall upon our feet? Why are you shedding tears Mr. Bhat? (ಇದೇನಿದು? ನೀವು ನಮ್ಮ ಕಾಲ ಮೇಲೆ ಬೀಳುವುದೇಕೆ? ಕಣ್ಣೀರಿಳಿಸುತ್ತಿರುವುದೇಕೆ?)

ರ:—He is overwhelmed with joy and gratitude sir. What else could he do but shed tears of joy and gratefulness when his life is so suddenly transformed by your great kindness and generosity.) (ಅವರು ಆನಂದ ಮತ್ತು ಕೃತಜ್ಞತಾಭಾವಪರವಶರಾಗಿ ಹೋಗಿದ್ದಾರೆ. ತಮ್ಮ ಮಹತ್ತಾದ ಕರುಣೆ ಮತ್ತು ಉದಾರತೆಯಿಂದ ಅವರ ಜೀವನವು ಇಷ್ಟೊಂದು ಫಕ್ಕನೆ ಮಾರ್ಪಟ್ಟಿರುವಾಗ ಆನಂದ ಮತ್ತು ಕೃತಜ್ಞತೆಯ ಕಣ್ಣೀರಿಳಿಸದೆ ಅವರು ಮತ್ತೇನು ಮಾಡಿಯಾರು?)

ರಾ:—Why do I deserve all this kindness and generosity from you sir? When my father himself had turned me out of the door, when my relatives and my own people had heaped abuse upon me ahd refused to see my face, when my countrymen had spat upon my face as it were when I had gone to them in search of work, you sir, a foreigner have overwhelmed me with kindness and sympathy. In the darkest moment of my life God has come to my help sir through you. I pray God with all my heart and soul to shower his bountiest blessings upon you and your wife and children sir. (ತಮ್ಮಿಂದ ಇಂತಹ ಕರುಣೆ ಮತ್ತು ಉದಾರತೆಗೆ ನಾನು ಪಾತ್ರನಿರುವುದಾದರೂ ಹೇಗೆ? ನನ್ನ ತಂದೆಯೇ ನನ್ನನ್ನು ಮನೆಯಿಂದ ಹೊರಹಾಕಿರುವಾಗ, ನನ್ನ ಸಂಬಂಧಿಕರೂ, ನನ್ನವರಾದ ಜನರೂ ನನ್ನನ್ನು ಬೈದುಭಂಗಿಸಿ ನನ್ನ ಮುಖ ಸಹ ನೋಡಲು ನಿರಾಕರಿಸಿರುವಾಗ, ನಾನು ನನ್ನ ದೇಶಬಾಂಧವರ ಬಳಿಗೆ ಕೆಲಸ ಹುಡುಕುತ್ತಾ ಹೋಗಿದ್ದಾಗ ಅವರು ನನ್ನ ಮುಖದ ಮೇಲೆಂಬಂತೆಯೇ ಉಗುಳಿ

ನಿವಾಳಿಸಿರುವಾಗ, ವಿದೇಶಿಯರಾದ ತಾವು ತಮ್ಮ ಕರುಣೆ ಮತ್ತು ಸಹಾನುಭೂತಿಯಿಂದ ನನ್ನ ಮನಸ್ಸನ್ನು ಸಂಪೂರ್ಣವಾಗಿ ಸೂರೆಮಾಡಿಬಿಟ್ಟಿರುವಿರಿ. ಕಂಗಾಣದ ಕಾರಿರುಳು ನನ್ನ ಜೀವನವನ್ನಾವರಿಸಿದ್ದ ಸಂದಿಗ್ಧಕಾಲದಲ್ಲಿ ದೇವರು ತಮ್ಮ ಮೂಲಕ ನನ್ನ ಸಹಾಯಕ್ಕೆ ಬಂದಿರುವನು. ತಮಗೂ ತಮ್ಮ ಹೆಂಡತಿಮಕ್ಕಳಿಗೂ ದೇವರು ಅತ್ಯಂತ ಕೃಪಾಪೂರ್ವಕವಾದ ಆಶೀರ್ವಾದವನ್ನೀಯಲೆಂದು ನಾನು ನನ್ನ ಸಂಪೂರ್ಣ ಹೃದಯ ಮತ್ತು ಆತ್ಮದಿಂದ ಪ್ರಾರ್ಥಿಸಿಕೊಳ್ಳುವೆನು.)

ಮೆ:—I wish you well Mr. Bhat. You may go now. (ರಾಮಭಟ್ರೇ ನಿಮಗೆ ಒಳ್ಳೇದಾಗಲಿ. ಈಗ ನೀವು ಹೋಗಿರಿ).

ರಾ:—Thank you very much sir. (ತುಂಬಾ ಉಪಕೃತನಾದೆ ಸ್ವಾಮಿ). (ನಮಸ್ಕರಿಸಿ ಹೋಗುವನು).

ನೋಟ ೩

(ಹಳ್ಳಿದಾರಿ. ವೆಂಕಟ್ರಮಣ ಭಟ್ಟನು ಗೇಣಿ ವಸೂಲಿಗಾಗಿ ಒಕ್ಕಲೊಬ್ಬನ ಮನೆಗೆ ಹೋದವನು ಹಿಂತಿರುಗಿ ಬರುವಾಗ, ದಾರಿಯಲ್ಲಿ ಬಹಳ ಸಿಟ್ಟುಗೊಂಡು ಉರಿಮೊಗದಿಂದ ಆತನನ್ನೇ ಹುಡುಕಿಕೊಂಡು ಬರುವ ದುಗ್ಗಪ್ಪ ಶೆಟ್ಟಿಯನ್ನು ಸಂಧಿಸಿ ಭೀತಿಗೊಂಡು ಅವಾಕ್ಕಾಗಿ ನಿಂತು ಬಿಡುವನು. ದುಗ್ಗಪ್ಪ ಶೆಟ್ಟಿಯು ಅವನನ್ನು ಕಣ್ಣು ಕೆರಳಿಸಿ ನೋಡಿ ಮನಬಂದಂತೆ ಬೈಯತೊಡಗುವನು.)

ದು:—ಮೂರು ಕಾಸಿನವರ ಹಾಗೆ ಮಾಡಬಾರದು ಭಟ್ರೆ. ಬಹಳ ಬುದ್ಧಿವಂತರಾಗಿದ್ದೀರಿ ಈಗ ನೀವು. ನಿಮ್ಮ ಬುದ್ಧಿವಂತಿಕೆಯನ್ನೆಲ್ಲಾ ಒಂದೇ ಒಂದು ಗಳಿಗೆಯಲ್ಲಿ ಇಳಿಸಿಬಿಟ್ಟೇನು! ಜಾಗ್ರತೆ!

ವೆ:—ನನ್ನದೇನು ಬುದ್ಧಿವಂತಿಕೆ ಶೆಟ್ರೆ? ನಾನೇನು ಊರು ಬಿಟ್ಟು ಹೋಗಬೇಕೆನ್ನುವುದೋ ನೀವು!

ದು:—ಊರುಬಿಟ್ಟು ಹೋದರೇನು ಬಿಡುವ ಆಸ್ವಾಮಿ ಎಂದು ನೆನಸಿದರಾ ಈ ದುಗ್ಗಪ್ಪ ಶೆಟ್ಟಿ!

ವೆ:—(ದೃಢಚಿತ್ತದಿಂದ) ಅದೆಲ್ಲಾ ಗೊತ್ತುಂಟೆನ್ನುವ. ನಾನು

ಈ ವರೆಗೆ ನಿಮಗೆ ಕೊಟ್ಟ ಹಣ ರೂ: ಎರಡು ಸಾವಿರವಾಯಿತು. ನಾನೇ ಈಗ ಯಾರ್ಯಾರ ಸಾಲದಲ್ಲಿ ಸಿಕ್ಕಿ ನರಳುತ್ತಿದ್ದೇನೆ. ಇನ್ನು ನನ್ನಿಂದ ನಿಮಗೆ ಹಣಕೊಡಲು ಸಾಧ್ಯವಿಲ್ಲ. ನೀವು ಏನು ಬೇಕಾದರೂ ಮಾಡಬಹುದು.

ದು:—(ವೆಂಕಟ್ರಮಣಭಟ್ಟನ ಬಲಗೈಯನ್ನು ಗಟ್ಟಿಯಾಗಿ ಹಿಡಿದು ಮುಂದಕ್ಕೆಳೆದು) ಏನು ಹೇಳಿದಿರಿ? ಒಂದೇ ಒಂದು ಪೆಟ್ಟಿನಲ್ಲಿ ನಿಮ್ಮ ಹಲ್ಲೆಲ್ಲಾ ಉದುರಿಸಿಬಿಟ್ಟೇನು ಹೆಚ್ಚು ಕಡಿಮೆ ಮಾತಾಡಿದರೆ! ಇನ್ನು ಮುಂದೆ ನನ್ನ ಖರ್ಚನ್ನೆಲ್ಲಾ ನೀವೆ ಕೊಡಬೇಕು. ನಿಮ್ಮಿಂದಾಗಿಯಲ್ಲವೆ ನನ್ನನ್ನು ನನ್ನ ಹೆಂಡತಿಯು ಮನೆಯಿಂದ ಹೊರಹಾಕಿದುದು? ಇಲ್ಲವಾದರೆ ನನಗೇನು ಕಡಿಮೆಯಿತ್ತು? ನಾನೊಬ್ಬ ತುಂಡರಸನಂತಿರಲಿಲ್ಲವೇ ಈ ಊರಲ್ಲಿ? ನಿಮಗೋಸ್ಕರ ನಾನು ಏನೆಲ್ಲಾ ಮಾಡಿಲ್ಲ? ಕಿಟ್ಟುವಿನ ಮನೆ ಸಹ ಸುಟ್ಟು ಹಾಕಿಸಿರುವುದಿಲ್ಲವೇ?

ವೆ:—ನನ್ನ ಕೈಯಲ್ಲೊಂದು ಚಿಕ್ಕಾಸೂ ಇಲ್ಲದೆ ನಾನೇ ಸಾಲದಲ್ಲಿ ಮುಳುಗಿರುವಾಗ ನಿಮಗೆಲ್ಲಿಂದ ಪ್ರತಿನಿತ್ಯವೆಂಬಂತೆ ಹಣಕೊಡಲಿ? ನೀವು ಹಣವನ್ನೆಲ್ಲಾ ಏನುಮಾಡುತ್ತೀರಿ?

ದು:—ನಾನು ತಿನ್ನುತ್ತೇನೆ ನಿಮ್ಮ ಹಣವನ್ನು! ನೀವು ಹೇಳಿದ ಕೆಲಸಗಳನ್ನೆಲ್ಲಾ ಮಾಡಿಸಲಿಕ್ಕೆ ನನಗೆ ಎಷ್ಟು ಖರ್ಚಾಗಿದೆಯೆಂದು ನಿಮಗೆ ಗೊತ್ತಿದೆಯೇ? ಮನೆಸುಟ್ಟ ವಿಷಯವನ್ನು ಅಡಗಿಸಲು ಪೋಲೀಸ್ ಸರ್ಕ್ಲ್ ಇನ್‌ಸ್ಪೆಕ್ಟರರಿಗೇ ಒಂದೇ ಸಾರಿ ಮುನ್ನೂರು ರೂಪಾಯಿ ಕೊಟ್ಟಿದ್ದೇನೆ. ಎಷ್ಟು ಖರ್ಚಾದರೂ ನಾನು ಕೊಡುತ್ತೇನೆ ಎಂದು ಎದೆ ತಟ್ಟಿದ ನೀವು ಈಗ ಹಣವಿಲ್ಲೆಂದು ಮೊರೆಯಿಟ್ಟರೆ ಯಾರು ಕೇಳುತ್ತಾರೆ!

ವೆ:—ನೀವು ನನ್ನನ್ನು ಏನು ಬೇಕಾದರೂ ಮಾಡಿ ಶೆಟ್ರೆ. ಕೊಲ್ಲುವುದಾದರೆ ಕೊಲ್ಲಿ. ನನ್ನಿಂದಿನ್ನು ಒಂದು ಪೈ ಕೂಡಾ ಕೊಡಲು ಸಾಧ್ಯವಿಲ್ಲ.

ದು:—(ಕೋಪೋದ್ರೇಕಗೊಂಡು) ಏನು, ಒಂದು ಪೈ ಕೂಡಾ

ಕೊಡಲು ಸಾಧ್ಯವಿಲ್ಲವೇ? ಬನ್ನಿ ಮನೆಗೆ. ನಿಮ್ಮ ಕೈಯಲ್ಲಿ ಹಣ ಉಂಟೋ ಇಲ್ಲವೋ ಎಂದು ನಾನೇ ನೋಡುತ್ತೇನೆ. ಕೊಡಿ ನಿಮ್ಮ ಬೀಗದ ಕೈಗೊಂಚಲಿಲ್ಲಿ. (ಹಿಡಿದೆಳೆದೊಯ್ಯುವನು)

ವೇ:—(ಕಂಗೆಟ್ಟು) ಶೆಟ್ರೆ, ನನ್ನ ಕೈಬಿಡಿ, ಅಷ್ಟು ಮಾಡಿ. ಮನೆಯಲ್ಲಿ ನನ್ನ ಹೆಂಡತಿಯ ಚಿನ್ನಾಭರಣಗಳ ಹೊರತು ಮತ್ತೇನೂ ಇಲ್ಲ.

ದು:—ಇನ್ನೇಕೆ ನಿಮಗೆ ಚಿನ್ನಾಭರಣ? ಅವನ್ನು ನನಗೆ ಕೊಟ್ಟರೂ ಆದೀತು. ನಗ್ದಿ ಹಣವೇ ಬೇಕಾಗಿಲ್ಲ.

ವೇ:—ನಾನವನ್ನು ಈ ವರೆಗೆ ಕರಡಿಗೆ ಬಾಯಿತೆರೆದು ಕೂಡಾ ನೋಡಿಲ್ಲ ಶೆಟ್ರೆ. ಅವನ್ನು ನಿಮಗೆ ತೆಗೆದು ಕೊಡಲು ಸಾಧ್ಯವೇ ಇಲ್ಲ. ಸಾಲಗಾರರು ನನ್ನನ್ನೀಗ ರಾತ್ರಿ ಹಗಲು ಕಾಡುತ್ತಿರುವರಾದರೂ ನಾನು ಆ ಆಭರಣಗಳನ್ನು ಮಾರುವ ಆಲೋಚನೆ ಮಾಡಿಲ್ಲ.

ದು:—ಈಗ ಆ ಆಲೋಚನೆ ಮಾಡಿ. ಇಲ್ಲವಾದರೆ ನಿಮ್ಮ ವಜ್ರದ ವಂಟಿಗಳನ್ನಿಲ್ಲಿಯೇ ಕಿತ್ತುಕೊಳ್ಳುವೆನು. ನನಗೆ ನಾಳೆಯೊಳಗೆ ಇನ್ನೂರು ರೂಪಾಯಿ ಇಲ್ಲದೆ ನಿರ್ವಾಹವೇ ಇಲ್ಲ. ನನ್ನ ಮೇಲೊಂದು ಸಿವಿಲ್ ವಾರಂಟು ಹೊರಟಿದೆ.

ವೇ:—ಏನು ಕಿವಿವಂಟಿ ಕಿತ್ತುಕೊಳ್ಳುವಿರೇ? ಅದಕ್ಕಿಂತ ನೀವು ದೊಣ್ಣೆ ಹಿಡಿದು ದರೋಡೆ ಮಾಡುವುದು ಲೇಸಲ್ಲವೇ?

ದು:—ನೀವು ಹಣ ಮಾತ್ರ ಇವತ್ತು ಕೊಡದಿರಬೇಕು! ನಿಮ್ಮ ಮನೆಯನ್ನೇ ಲುಟಾಯಿಸಿ ಸುಟ್ಟುಹಾಕುವುದಿಲ್ಲವೋ ನೋಡಿ! ಪಾಪ, ಆ ಕಿಟ್ಟುವಿನ ಮನೆಯನ್ನು ಸುಟ್ಟುಹಾಕಿ ಫಲವೇನು? ನಿಮ್ಮ ಒಕ್ಕಲೊಬ್ಬನಾದರೂ ನಿಮಗೆ ಗೇಣಿ ಕೊಡದಂತೆ ಮಾಡುವೆನು, ಕಡೆಗೆ ನಿಮ್ಮನ್ನು ಕೊಂದಾದರೂ ಸೇಡು ತೀರಿಸಿಕೊಳ್ಳುವೆನು. ನನ್ನ ಪ್ರಾಣದಾಶೆಯಂತೂ ನನಗಿಲ್ಲ.

ವೇ:—ನನ್ನ ಮೇಲೆ ಸೇಡು ತೀರಿಸಲು ನಾನೇನು ಮಾಡಿದ್ದೇನೆ ನಿಮಗೆ? ನೀವು ಕೇಳಿದಂತೆ ಹಣಕೊಟ್ಟುದು ತಪ್ಪಾಯಿತೇ?

ದು:—ನೀವೇನು ನನಗೆ ಧರ್ಮಕ್ಕೆ ಹಣಕೊಟ್ಟಿರುವಿರೇ? ಹುಂ, ಕೊಡುವ ಆಸಾಮಿ ನೀವು! ಆ ಬಣ್ಣಗಳೆಯೆಲ್ಲಾ ನನಗೀಗ ಬೇಡ.

ನನಗಿವತ್ತು ರೂ. 200 ಕೊಡುವಿರೋ ಇಲ್ಲವೋ ಹೇಳಿ. ನನಗೆ ನಗ್ದಿ ಹಣವೇ ಬೇಕೆಂದಿಲ್ಲ. ಆಭರಣವಾದರೂ ಆದೀತು. ಕಡೆಗೆ ನಿಮ್ಮ ಕಿವಿ ಒಂಟಿಯಾದರೂ ಆದೀತು. ನನಗಿಲ್ಲಿ ಪ್ರಾಣಕ್ಕೆ ಬಂದಿರುವಾಗ ನೀವು ವಜ್ರದ ಕಿವಿ ಒಂಟಿ ಇಟ್ಟುಕೊಂಡು ಮೆರೆದಾಡುವುದೆಂದರೆ! ನಾನು ಯಾರಿಗಾಗಿ ಈ ಅವಸ್ಥೆಗೊಳಗಾದುದೆಂದು ಭಾವಿಸುತ್ತೀರಿ ನೀವು?

ವೆ:—(ದೀರ್ಘ ಶ್ವಾಸಬಿಟ್ಟು)ಆಯ್ತಪ್ಪ, ನನ್ನ ಹೆಂಡತಿಯ ಆಭರಣಗಳನ್ನಾದರೂ ಒತ್ತೆ ಇಟ್ಟು ನಾಳೆಯೊಳಗೆ ಇನ್ನೂರು ರೂಪಾಯಿ ಕೊಡುವೆನು. ಆದರೆ ಇನ್ನು ಮುಂದೆ ನನ್ನ ಬಳಿಗೆ ನೀವು ಬರಬಾರದು. ನಿಮ್ಮ ಉಪಕಾರವನ್ನು ನಾನು ಜನ್ಮ ಜನ್ಮಾಂತರಕ್ಕೂ ಮರೆಯಲಾರೆ! ದೊಡ್ಡದೊಂದು ನಮಸ್ಕಾರ ನಿಮಗೆ!

ದು:—ಹಾಗೆಂದರೆ? ಮತ್ತೆ ನಾನೆಲ್ಲಿ ಹೋಗುವುದಿನ್ನು? ನನಗೆ ಈ ಊರಲ್ಲೇ ಇದ್ದು ನನ್ನ ಹೆಂಡತಿಯು ಏನೆಲ್ಲಾ ಕಾರುಬಾರು ಮಾಡುತ್ತಾಳೆಂದು ಪರೀಕ್ಷಿಸಬೇಕಾಗಿದೆ ನಿಮ್ಮ ಒಕ್ಕಲು ನಾಗಪ್ಪನ ಮನೆಯನ್ನು ನನಗೆ ಉಳಕೊಳ್ಳಲು ಬಿಟ್ಟುಕೊಡಬೇಕು. ನನ್ನ ಖರ್ಚನ್ನೆಲ್ಲಾ ನೀವೇ ನೋಡಬೇಕು.

ವೆ:—ಅಷ್ಟೆಯೋ, ಇನ್ನೇನಾದರೂ ಇದೆಯೋ? ಏನೂ ಬಾಕಿ ಮಾಡಿಕೊಳ್ಳಬೇಡಿ. ಒಮ್ಮೆಯೇ ಹೇಳಿಬಿಡಿ!

ದು:—ಹೇಳದೆ ಮತ್ತೆ ನಿಮ್ಮ ಹೆದರಿಕೆಯೋ? ನನ್ನ ಮತ್ತು ನನ್ನ ಅನುಯಾಯಿಗಳ ಹಲವರ ಅನ್ನ ತೆಗೆದವರು ನೀವಲ್ಲವೇ? ಅವರಿಗೂ ಅವಶ್ಯಬಿದ್ದರೆ ಅನ್ನ ಕೊಡಬೇಕಾದೀತು.

ವೆ:—ಇಡೀ ಊರಿಗೇನೇ ನಾನು ಅನ್ನ ಕೊಡಬೇಕಾಗಿಲ್ಲವಲ್ಲ— ನಿಮ್ಮ ಸಂಗದೋಷದ ಪ್ರಾಯಶ್ಚಿತ್ತಕ್ಕಾಗಿ?

ದು:—ಮತಿಗೆಟ್ಟು ಮಾತಾಡಿದರೆ ಜಾಗ್ರತೆ! ಬನ್ನಿ ಹೋಗುವ ಮನೆಗೆ. ಮೊದಲು ನನಗೆ ಇನ್ನೂರು ರೂಪಾಯಿ ಕೊಡಿ ಈಗ. ಅನಂತರ ಬಾಕಿ ವಿಚಾರವೆಲ್ಲ. (ವೆಂಕಟ್ರಮಣ ಭಟ್ಟನನ್ನು ಎಳೆದೊಯ್ಯುವನು).

ವೆ:—(ಫಕ್ಕನೆ ಕೈ ಎಳೆದು ಬಿಡಿಸಿ) ಶೆಟ್ಟಿ, ನೀವು ಹಾಗೆಲ್ಲ ಕೈ

ಹಿಡಿದು ಎಳೆಕೊಂಡು ಹೋಗುವುದೆಂದರೇನು ಅರ್ಥವಿಲ್ಲವೆ? ನಿಮಗೆ ಹಣ ಬೇಕಾದರೆ ಏನಾದರೂ ಮಾಡಿ ನಾಳೆ ಸಂಜೆಯೊಳಗೆ ಕೊಡುವೆನು. ಅದಕ್ಕೋಸ್ಕರ ನೀವೇನೂ ನನ್ನ ಮನೆಗೆ ಬರುವ ಅವಶ್ಯವಿಲ್ಲ. ನೀವು ಹೇಳಿದಲ್ಲಿಗೆ ತಂದುಕೊಡುವೆನು.

ದು:—ಹಾಗೆ ಬನ್ನಿ. ಮೊದಲೇ ಈ ಮಾತು ಹೇಳುತ್ತಿದ್ದರೆ ಇಷ್ಟೆಲ್ಲಾ ಗಲಾಟೆಯಿತ್ತೇ ಭಟ್ರೇ?

ವೆ:—ಮರ್ಯಾದೆಗೆ ಹೆದರಬೇಕಲ್ಲವೇ ಶೆಟ್ರೆ.

ದು:—ಏನೆಂದಿರಿ?

ವೆ:—ಅಲ್ಲ. ನಿಮ್ಮ ಮೇಲೆ ವಾರಂಟು ಹೊರಟಿರುವಾಗ ನಿಮಗೆ ಜೈಲಿಗೆ ಹೋಗಲು ಸಾಧ್ಯವಿದೆಯೆ? ನೀವು ಮರ್ಯಾದೆ ಕಾಪಾಡಿಕೊಳ್ಳಬೇಕಲ್ಲವೇ ಎಂದು ಹೇಳಿದುದು,

ದು:—ಹಾಗೋ. ಹೌದು, ಮತ್ತೆ? ನಮ್ಮ ಮನೆತನಕ್ಕೇನೇ ದೊಡ್ಡ ಕಳಂಕ ಬಂದುಬಿಟ್ಟೀತು! ನನಗೆ ವಾರಂಟು ಹೊರಟಿರುವುದೆಂಬುದೇ ದೊಡ್ಡ ಅವಮಾನ. ಇದಕ್ಕೆಲ್ಲಾ ಮತ್ತಾರಲ್ಲ, ನನ್ನ ಹೆಂಡತಿಯೇ ಕಾರಣ ನೋಡಿ.

ವೆ:—ನಿಮಗೂ ನಿಮ್ಮ ಹೆಂಡತಿಗೂ ಇನ್ನು ರಾಜಿಯಾಗಲು ಸಾಧ್ಯವಿಲ್ಲವೇ?

ದು:—ನೀವು ಆ ಪ್ರಯತ್ನಮಾಡಿ ಜೈಸಿದರೆ ನಿಮ್ಮ ಉಪಕಾರವನ್ನು ಎಂದೆಂದಿಗೂ ಮರೆಯಲಾರೆ. ಆದರೆ ಮಹಾ ಹಠಮಾರಿ ಅವಳು. ಬಂಟಪ್ಪನು ನನ್ನೊಂದಿಗೆ ಬರುತ್ತಾನೆಂದು ಅವನನ್ನು ಒಳ್ಳೆಲೆಬ್ಬಿಸಿಬಿಟ್ಟಿದ್ದಾಳೆ!

ವೆ:—ನೀವು ನನ್ನನ್ನು ಬೆದರಿಸುವವರು ಹೆಂಡತಿಯೆಂದರೆ ಗಡಗುಟ್ಟಿ ನಡುಗುತ್ತಿದ್ದೀರಿ!

ದು:—ಬಂಟರ ಹೆಂಗಸರ ಕಾರುಬಾರು ನಿಮಗೆ ಗೊತ್ತಿಲ್ಲ ಭಟ್ರೆ. ನಾನು ಈ ಲೋಕದಲ್ಲಿ ಅವಳೊಬ್ಬಳ ಹೊರತು ಮತ್ತಾರಿಗೂ ಹೆದರಲಾರೆ. ಅವಳೆದುರಲ್ಲಿ ನನ್ನ ಯಾವ ಆಟವೂ ನಡೆಯುವುದಿಲ್ಲ. ಅವಳೊಮ್ಮೆ ದಿಟ್ಟಿಸಿ ನೋಡಿದಳೆಂದರೆ ನಾನು ಸ್ತಂಭಿತನಾಗಿ ಹೋಗಿಬಿಡುತ್ತೇನೆ. ಯಾವ ಮಂತ್ರಶಕ್ತಿ ಇರುವುದೋ ಅವಳ ನೋಟದಲ್ಲಿ!

ವೆ:—ನಾನು ಇವತ್ತೇ ಮಾತಾಡಿ ನೋಡುತ್ತೇನೆ ಶೆಟ್ರಿ.

ದು:—ಆಯ್ತು ಭಟ್ರೆ. ನಮ್ಮೊಳಗೆ ಹೇಗಾದರೂ ಒಮ್ಮೆ ರಾಜಿ ಮಾಡಿ ಹಾಕಿದರೆ ನಿಮಗೆ ಮತ್ತೆ ನಾನು ಯಾವ ರೀತಿಯ ಉಪದ್ರವವನ್ನೂ ಕೊಡುವ ಹಾಗಿಲ್ಲ. ಮಾತ್ರವಲ್ಲದೆ ಸಾಧ್ಯವಾದಷ್ಟು ಉಪಕಾರಮಾಡುವೆನು.

ವೆ:—ಆಯ್ತು ನೋಡುವ. ನನಗೆ ಪೂಜೆಗೆ ಹೊತ್ತಾಯಿತು. ಹೋಗುತ್ತೇನೆ.

ದು:—ಆಯ್ತು ನಮಸ್ಕಾರ. ನಾಳೆ ರೂಪಾಯಿ ತಂದುಕೊಡಲು ಮರೆಯಬಾರದು. ನನ್ನ ಮರ್ಯಾದೆ ಹೋದೀತು!

ವೆ:—ಆಯ್ತಪ್ಪ, ಎಲ್ಲಿಗೆ ತಂದು ಕೊಡಬೇಕು?

ದು:—ಸಾವುಕಾರ್ ಮಾಧವ ಪಡಿಯಾರರ ಅಂಗಡಿ ಮಾಳಿಗೆಗೆ ತಂದುಕೊಡಿ. ನಾಳೆ ಮಧ್ಯಾಹ್ನದ ನಂತರ ನಾನು ಅಲ್ಲಿಯೇ ಇದ್ದೇನೆ. ಅಲ್ಲೊಂದು ಪಂಚಾಯಿತಿಕೆ ಇದೆ.

ವೆ:—ಆಯ್ತು. (ಶೆಟ್ಟಿಯನ್ನೊಮ್ಮೆ ದಿಟ್ಟಿಸಿ ನೋಡಿ ಹೋಗುವನು. ಶೆಟ್ಟಿಯು ಇನ್ನೆಲ್ಲಿ ಹೋಗುವುದೆಂದು ತಿಳಿಯದೆ ಪೇಟೆಯ ದಾರಿ ಹಿಡಿದು ಹೋಗುವನು.)

ನೋಟ ೪

(ಲಕ್ಷ್ಮೀನಾರಾಯಣ ರಾಯನು ತನ್ನ ಬಿಡಾರದಲ್ಲಿ ಒಬ್ಬನೇ ಆರಾಮು ಕುರ್ಚಿಯಲ್ಲಿ ಕೂತು ಶಿಳ್ಳುಹಾಕುತ್ತಾ ಏನೋ ಆಲೋಚಿಸುತ್ತಿರುವಾಗ ಸುಂದರಿಯು ಟ್ರಂಕೊಂದನ್ನು ಒಬ್ಬ ಹುಡುಗನೊಡನೆ ಹಿಡಿಸಿಕೊಂಡು ಬಂದು ಅಂಗಳದಲ್ಲಿ ನಿಲ್ಲುವಳು.)

ಹುಡುಗ:—ಇದು ಯಾರ ಬಿಡಾರ ಸ್ವಾಮಿ? ಲಕ್ಷ್ಮೀನಾರಾಯಣ ರಾಯರದೇ?

ಲ:—(ಶಿಳ್ಳು ಹಾಕುವುದನ್ನು ಒಮ್ಮೆಯೇ ನಿಲ್ಲಿಸಿ ಎದ್ದು ನಿಂತು ಬಂದವಳು ಸುಂದರಿಯೆಂದು ನಿರ್ಧರಿಸಿ ನಸುನಕ್ಕು) ಹೌದು, ಯಾಕೆ?

ಹು:—ಇಲ್ಲಿ ರಾಮಭಟ್ಟರೆಂಬವರಿದ್ದಾರೆಯೇ?

ಲ:—ಈಗ ಇಲ್ಲಿಲ್ಲ, ಆಫೀಸಿಗೆ ಹೋಗಿದ್ದಾರೆ. ಆದರೆ ಅವರು ಇರುವುದು ಇಲ್ಲಿಯೇ.

ಸು:—ಅವರು ಬರುವ ವರೆಗೆ ನಾನಿಲ್ಲಿರಬಹುದೇ? ಅವರ ಊರಿಂದ ಬಂದವಳು ನಾನು.

ಲ:—ಓಹೋ,ಅದಕ್ಕೇನಡ್ಡಿ? (ಹುಡುಗನನ್ನು ಉದ್ದೇಶಿಸಿ) ಟ್ರಂಕು ಒಳಗೆ ತೆಕ್ಕೊಂಡು ಹೋಗಿ ಇಡು. (ಅಂಗಳದಲ್ಲಿ ನಿಂತು ಸಂದೇಹ ಪಡುತ್ತಿರುವ ಸುಂದರಿಯನ್ನು ಕುರಿತು) ಒಳಗೆ ಬನ್ನಿ ಅಮ್ಮ. ಕೂತುಕೊಳ್ಳಿ. ರಾಮಭಟ್ಟರು ಬರುವಾಗ ಸ್ವಲ್ಪ ಹೊತ್ತಾದೀತು.

ಸು:—(ಬಹಳವಾಗಿ ನಾಚಿ ಒಳಗೆ ಹೋಗಿ ನಿಂತುಕೊಂಡು ಹುಡುಗನಿಗೆ 2 ಅಣೆ ಕೊಟ್ಟು ಕಳುಹಿಸಿ) ಅವರು ಬರುವಾಗ ಎಷ್ಟು ಹೊತ್ತಾದೀತು?

ಲ:—ಸುಮಾರು ಆರು, ಆರೂವರೆ ಘಂಟೆಯಾದೀತು. ನಿಮಗೆ ಬಾಯಾರಿಕೆ ಆಗುವುದೇ?

ಸು:—ಇಲ್ಲ, ಆಗುವುದಿಲ್ಲ.

ಲ:—ನಿಮ್ಮ ಹೆಸರೇನಮ್ಮ?

ಸು:—ನನ್ನನ್ನು ಅಮ್ಮನೆಂದು ಕರೆಯಬೇಡಿ. ನಾನು ಕೀಳು ಜಾತಿಯವಳು.

ಲ:—ಕೀಳಾಗಲಿ ಮೇಲಾಗಲಿ ಹೆಂಗಸಾದವರನ್ನೆಲ್ಲಾ ಅಮ್ಮನೆಂದು ಸಂಭೋದಿಸುವ ಪದ್ಧತಿ ನಮ್ಮದು!

ಸು:—ನನ್ನ ಹೆಸರು ಸುಂದರಿಯೆಂದು. ನನ್ನ ವಿಷಯ ನಿಮಗೆ ಅವರು ಹೇಳಿರಬಹುದು. ಸುಂದರಿಯೆಂದು ನನ್ನನ್ನು ನೀವು ಕರೆದರಾಯಿತು.

ಲ:—ಒಹೋ, ನೀವು ಸುಂದರಿಯೇ? ನಿಮ್ಮ ವಿಷಯ ಬಹಳ ಹೇಳಿದ್ದಾನೆ ನನಗೆ ರಾಮಭಟ್ಟ. ಪ್ರತಿನಿತ್ಯ ಹೇಳುತ್ತಿದ್ದಾನೆ. ಇವತ್ತೂ ಹೇಳಿದ ಆಫೀಸಿಗೆ ಹೋಗುವ ಮೊದಲು.

ಸು:—ಬಹುವಚನದಿಂದಲೂ ನನ್ನನ್ನು ನೀವು ಕರೆಯಬಾರದು.

ಲ:—ಆಯ್ತಪ್ಪಾ, ನೀವು ಹೇಳಿದ ಹಾಗೆ ಮಾಡುವ. ಇನ್ನು ನೀವು ನಮ್ಮವರೆಂದಾಯಿತಲ್ಲವೇ? ಸುಂದರಿ, ಇದನ್ನು ನಿನ್ನ ಮನೆಯೆಂದೇ ಭಾವಿಸು. ನನ್ನನ್ನು ನಿನ್ನ ಅಣ್ಣನೆಂದು ತಿಳಕೋ. ಒಳಗೆ ಹೋಗು. ಕೈಕಾಲು ಮುಖ ತೊಳೆದು ಬಾ. (ಬಾಬು, ಎಂಬ ಚಾಕರಿಹುಡುಗನನ್ನು ಕರೆದು ಸುಂದರಿಯನ್ನು ಬಚ್ಚಲಿಗೆ ಕರಕೊಂಡು ಹೋಗಹೇಳಿ ತಾನು ಸ್ವತಹ ಹತ್ತಿರದ ಕಾಫಿ ಹೊಟೆಲಿಗೆ ಹೋಗಿ ಕಾಫಿ ತಿಂಡಿ ತರಿಸಿ ಸುಂದರಿಯು ಬೇಡ ವೆಂದರೂ ಒತ್ತಾಯ ಮಾಡಿ ಕೊಡುವನು. ಸುಂದರಿಯು ಒಳಗೆ ಕಾಫಿ ಕುಡಿಯುತ್ತಿರುವಾಗ ಬಹಳ ಉತ್ಸಾಹದಿಂದ ರಾಮಭಟ್ಟನು ಬರುವುದನ್ನು ದೂರದಲ್ಲೇ ಲಕ್ಷ್ಮೀನಾರಾಯಣರಾಯನು ಕಂಡು "ಸುಂದರಿ, ರಾಮಭಟ್ಟ ಬಂದ. ಈಗ ಒಂದು ತಮಾಷೆಮಾಡುವ. ನೀನು ಸುಮ್ಮನಿರು ಒಳಗೆ" ಎಂದು ಎದುರಿನ ಬಾಗಿಲು ಹಾಕಿ ಈಸಿಚೇಯರಿನಲ್ಲಿ ಶಿಳ್ಳುಹಾಕುತ್ತಾ ಕೂತುಕೊಳ್ಳುವನು)

ರಾ:—(ಒಳಗೆ ಬಂದವನೇ ತನ್ನ ಟೊಪ್ಪಿ, ಕೋಟನ್ನೆಲ್ಲಾ ತೆಗೆದು ಒಂದು ಮೂಲೆಗೆ ಬಿಸಾಡಿ)ನಾರಾಯಣಾ! ನನಗೊಂದು ನಿಧಿ ಸಿಕ್ಕಿತೊಂದು ನಿಧಿ! ಆ ದಯಾನಿಧಿಯ ಕೃಪೆಯಿಂದ! ಆ ಧೊರೆಗಳೇ ನನ್ನ ಪಾಲಿನ ದೇವರು!

ಲ:—(ವಿಸ್ಮಿತನಾಗಿ ಫಕ್ಕನೆ ಎದ್ದು ರಾಮಭಟ್ಟನ ತೋಳುಗಳೆರಡನ್ನೂ ಹಿಡಿದು ಚೆನ್ನಾಗಿ ಕುಲುಕಿಸಿ) ನಿನಗೇನು ತಲೆಕೆಟ್ಟಿದೆಯೋ ಇವತ್ತು? ಏನಾಯಿತು? ಏನಾಯಿತು ರಾಮು?

ರಾ:—ಹೇಳಿದೆನಲ್ಲ ನನಗೊಂದು ನಿಧಿ ಸಿಕ್ಕಿತು! ನಾನು ಸುಂದರಿಯನ್ನು ನಾಳೆಯೇ ಮದುವೆಯಾಗಬಹುದು.

ಲ:—ಹಾಗಾದರೆ ನಾನವಳನ್ನು ಇವತ್ತೇ ಕರತರಲೇ? ಈಗಲೇ ಬಸ್ಸಿದೆ ಉಡುಪಿಗೆ, ಹೊರಡಲೆ?

ರಾ:—ಆಯ್ತು, ಹೊರಡು, ನಾರಾಯಣ ಹೊರಡು.

ಲ:—ಟಿಕೇಟಿಗೆ ಹಣ?

ರಾ:—ಓಹೋ ಹಣಬೇಕಲ್ಲವೇ ಟಿಕೇಟಿಗೆ?

ಲ:—ಮತ್ತವರು ಧರ್ಮಕ್ಕೆ ಕೊಡುತ್ತಾರೆಯೋ? ನಿನಗೇನು ಬುದ್ಧಿಭ್ರಂಶವಾಗಿದೆಯೋ?

ರಾ:—ಹಾಗಾದರೆ ನಾಳೆ ಹೋಗು ನಾರಾಯಣ. ನಾಳೆ ನನಗೆ ಒಮ್ಮೆಯೇ 500 ರೂಪಾಯಿ ಸಿಗುತ್ತದೆ.

ಲ:—ಒಮ್ಮೆಯೇ 500 ರೂಪಾಯಿ ಎಲ್ಲಿಂದ? ನಿನಗೇನು ಇವತ್ತು ತಲೆಕೆಟ್ಟಿದೆಯೋ?

ರಾ:—ನಾಳೆ ಸಂಜೆ ನಾನು 500 ರೂಪಾಯಿ ತಂದು ನಿನ್ನ ಮುಂದೆ ಟನ್-ಟನ್-ಟನ್ ಎಂದು ಬಿಸಾಡದಿದ್ದರೆ ನನಗೆ ತಲೆಸಮವಿಲ್ಲವೆನ್ನು.

ಲ:—ಎಲ್ಲಿಂದ ರಾಮು, ಹೇಳಬಾರದೆ?

ರಾ:—ಮೆನೇಜರ್ ಸಾಹೇಬರು ನನ್ನ ಕಥೆಯನ್ನೆಲ್ಲಾ ಅವರ ಪತ್ನಿಯೊಡನೆ ಹೇಳಿದರಂತೆ. ಅವರ ಹೃದಯ ಕರಗಿ, ನನ್ನ ಮತ್ತು ಸುಂದರಿಯ ವಿವಾಹ ಕೂಡಲೆ ನಡೆಯುವಂತೆ ಬೇಕಾದ ಹಣ ಕೂಡಾ ಸಹಾಯಮಾಡಬೇಕೆಂದು ಆಗ್ರಹತೊಟ್ಟರಂತೆ. ಇವತ್ತು ಧೊರೆಗಳು ನನ್ನನ್ನು ಕರೆದು ನಸುನಗುತ್ತಾ, ನನ್ನ ಮದುವೆಗೆ ಎಷ್ಟು ವೆಚ್ಚ ತಾಗುವುದೆಂದು ಕೇಳಿದರು. ನಾನು ಸುಮಾರು 200 ರೂಪಾಯಿ ಬೇಕಾದೀತೆಂದೆ. "ಒಳ್ಳೇದು, 500 ರೂಪಾಯಿ ತೆಗೆದುಕೊಳ್ಳು ಆಫೀಸಿನಿಂದ. ಹೆಡ್ ಕ್ಲಾರ್ಕರೊಡನೆ ಹೇಳಿದ್ದೇನೆ. ಕೂಡಲೆ ಸುಂದರಿಯನ್ನು ಕರೆಸಿ ಮದುವೆಮಾಡಿಕೋ. ನಿನ್ನ ಮದುವೆಯ ವಿಷಯದಲ್ಲಿ ನನ್ನ ಪತ್ನಿಯೂ ಬಹಳ ಅಸಕ್ತಳಿದ್ದಾಳೆ. ನೀನು ಈ ಹಣವನ್ನು ನಿನಗೆ ಸಾಧ್ಯವಾದಷ್ಟು ಪ್ರತಿತಿಂಗಳ ಸಂಬಳದಿಂದ ಕೊಡುತ್ತಾ ಬಾ" ಎಂದರು. ಎಂತಹ ಕರುಣೆಯ ಕರುಳು ಮೆನೇಜರ್ ಸಾಹೇಬರ ಹೆಂಡತಿದ್ದು ಕೂಡಾ ನಾರಾಯಣ!

ಲ:—(ರಾಮುಭಟ್ಟನ ಬೆನ್ನು ತಟ್ಟಿ) ನಿನ್ನ ಮತ್ತು ಸುಂದರಿಯ ಭಾಗ್ಯೋದಯ ನಾರಾಯಣ. ಈ ಬಿಳಿ ಜನರಲ್ಲಿ ತುಂಬಾ ಸಹಾನುಭೂತಿಯ ಹೃದಯವಿದೆ, ಔದಾರ್ಯವಿದೆ, ಮಾನವತೆಯಿದೆ. ಇಂದೀಗ ನಿನ್ನ ಕಷ್ಟ ಸುಖದ ಪರಮಾವಧಿಗಳೊಂದುಗೂಡಿವೆ.

ರಾ:—ಅದು ಹೌದು. ಆದರೆ ಸುಂದರಿಯ ಗತಿಯೇನಾಗಿರುವುದೋ? ಅವಳು ಈ ವರೆಗೂ ಬಾರದಿರಲು ಕಾರಣವೇನು? ಕಾಗದ ಕೂಡಾ ಬರೆದಿಲ್ಲ.

ಲ:—ನಿನ್ನ ವಿಚಿತ್ರ ಭಾಗ್ಯೋದಯದೊಂದಿಗೆ ನಾನಿನ್ನೊಂದು ವಿಚಿತ್ರಮಾಡಿದರೆ ನೀನು ನನ್ನನ್ನು ಮಹಾ ಮಂತ್ರವಾದಿಯೆಂದು ಪೂಜಿಸುವೆಯಾ?

ರಾ:—ಸಾಕು ನಿನ್ನ ತಮಾಷೆ. ಸುಮ್ಮನಿರು.

ಲ:—ತಮಾಷೆಯಲ್ಲ ರಾಮು. ಪ್ರತ್ಯಕ್ಷ ನೀನೇ ನೋಡಿದರೆ ಸಮಾಧಾನವಾಗುವುದಲ್ಲವೇ?

ರಾ:—ಆಯ್ತು. ಏನದು ನೀನು ಮಾಡುವ ವಿಚಿತ್ರ? ನೋಡುವ.

ಲ:—ಒಂದೇ ಒಂದು ಕ್ಷಣದಲ್ಲಿ ಸುಂದರಿಯನ್ನಿಲ್ಲಿ ಕರತಂದು ನಿನ್ನ ಮುಂದೆ ನಿಲ್ಲಿಸುವೆನು.

ರಾ:—ಸಾಕೋ! ಯಾವಾಗಲೂ ತಮಾಷೆ ಉಂಟೇ ಉಂಟು ನಿನ್ನದು ಏನಾದರೂ.

ಲ:—ಸುಂದರಿಯನ್ನು ಪ್ರತ್ಯಕ್ಷ ತೋರಿಸಿಕೊಡುವೆನೆಂದರೂ ನೀನು ನಂಬಲಾರೆಯಾ?

ರಾ:—ಆಯ್ತು, ತೋರಿಸಿಕೋಡು ನೋಡುವ. ಆಗ ನನ್ನ ಆನಂದಕ್ಕೆ ಪಾರವೇ ಇಲ್ಲವಾಗುವುದು.

ಲ:—ಅದಕ್ಕೆ ಸ್ವಲ್ಪ ಮಂತ್ರ ತಂತ್ರವೆಲ್ಲಾ ಮಾಡಬೇಕು. ಮತ್ತೆ ಸುಮ್ಮಗಾಗುವುದೇನು? ನಿನ್ನ ಕಣ್ಣಿಗೆ ಒಂದು ಕ್ಷಣ ವಸ್ತ್ರ ಸುತ್ತಬೇಕು. (ರಾಮುಭಟ್ಟನ ಕಣ್ಣಿಗೆ ಕರವಸ್ತ್ರ ಸುತ್ತಲು ಬರುವನು)

ರಾ:—ನಿನಗೇನೂ ಕೆಲಸವಿಲ್ಲ ಮತ್ತೆ? ಹೋಗಾಚೆ! (ದೂಡುವನು)

ಲ:—ನಿನ್ನ ಸುಂದರಿ ಇನ್ನೊಂದು ಕ್ಷಣದಲ್ಲಿ ನಿನ್ನ ಮುಂದೆ ನಿಲ್ಲುವಂತಾಗುವುದು ಬೇಡವಾದರೆ ಬೇಡ, ಹೋಗು. ನಿನ್ನಾಣೆ ಸತ್ಯ ರಾಮು (ರಾಮುಭಟ್ಟನ ಗಲ್ಲಹಿಡಿಯುವನು.)

ರಾ:—ನೋಡುವ ಹಾಗಾದರೆ ನಿನ್ನದೆಲ್ಲಾ ಏನು ತಮಾಷೆಯೆಂದು. ಕಟ್ಟು ಕಣ್ಣಿಗೆ ವಸ್ತ್ರ.

(ಲಕ್ಷ್ಮೀನಾರಾಯಣನು ರಾಮುಭಟ್ಟನ ಕಣ್ಣಿಗೆ ಗಟ್ಟಿಯಾಗಿ ವಸ್ತ್ರ ಬಿಗಿದು ನೋವು ಮಾಡುವನು.)

ರಾ:—"ಅಯಿ ಅಯಿ" ಅಷ್ಟು ಗಟ್ಟಿ ಬಿಗಿಯ ಬೇಡ. ಎಂತಹ ಹುಡುಗಾಟಿಕೆ ನಿನ್ನದು. ಕಣ್ಣು ತೆಗೆಯುವೆಯಾ?

ಲ:—ಮತ್ತೇನು ಸುಲಭವಾಗಿ ಸುಂದರಿ ನೋಡಸಿಗುವಳೇ? ನಾನು ಹೇಳುವ ವರೆಗೆ ಹಿಂತಿರುಗಿ ನೋಡಬಾರದು. ನೋಡಿದರೆ ಮಾಯವಾಗಿ ಹೋದಾಳು! ಎಚ್ಚರಿಕೆ.

ರಾ:—ನೋಡುವ ನಿನ್ನ ಆಟವೆಲ್ಲ! ಸುಳ್ಳಾಗಬೇಕು. ಸರೀ ಕಟ್ಟಿ ಹೊಡೆದೇ ನಿನ್ನ ತಲೆ ಬಾತುಹೋಗುವಂತೆ ಮಾಡದಿರಲಿಕ್ಕಿಲ್ಲ!

ಲ:—ಏನು ಬೇಕಾದರೂ ಮಾಡಬಹುದು. ಸತ್ಯವಾದರೆ ನಾನು ನಿನ್ನ ಮೂಗು ಕೊಯ್ದು ಹಾಕಬಹುದೇ?

ರಾ:—ಅಡ್ಡಿಯಿಲ್ಲ.

ಲ:—ಹಾಗಾದರೆ ಮಾತಾಡಬೇಡ. ಸುಮ್ಮನಿರು ಒಂದು ನಿಮಿಶ. ನಾನು ಮಂತ್ರ ಮಾಡುತ್ತೇನೆ. (ಮೆಲ್ಲಗೆ ಬಾಗಿಲು ತೆರೆದು ನಗೆಯನ್ನು ತಡೆಗಟ್ಟಲು ಬಾಯಿಗೆ ಸೆರಗನ್ನು ತುರುಕಿಗೊಂಡಿದ್ದ ಸುಂದರಿಯನ್ನು ಮೆಲ್ಲಗೆ ಬೊರಗೆ ಬರಹೇಳಿ ರಾಮಭಟ್ರ ಹಿಂದೆ ನಿಲ್ಲಹೇಳುವನು. ಆನಂತರ ಮಂತ್ರಗಾರನಂತೆ ಏನೇನೋ ಹೇಳುತ್ತಾ ಕೈಚಪ್ಪಾಳೆ ಬಡೆದು) ಹೊಂ ಬಂದಳು, ಬಂದಳು. ಅದೋ ಸುಂದರಿ ಬಂದೇ ಬಂದಳು. (ರಾಮ ಭಟ್ಟನ ಕಣ್ಣಿನ ವಸ್ತ್ರ ಬಿಡಿಸಿ ಅವನನ್ನು ಫಕ್ಕನೆ ತಿರುಗಿ ನಿಲ್ಲಿಸುವನು. ಅವನು ಎದುರು ಸುಂದರಿಯು ನಿಂತಿರುವುದನ್ನು ಕಂಡು ವಿಸ್ಮಿತನಾಗುವನು. ಸುಂದರಿ ಹೌದೋ ಅಲ್ಲವೋ ಎಂದು ಸಂದೇಹಗೊಂಡು ಕಣ್ಣು ತಿಕ್ಕಿ ತಿಕ್ಕಿ ಮತ್ತೂ ಪರೀಕ್ಷಿಸುವನು.)

ಸು:—ಮತ್ತೂ ಮತ್ತೂ ಪರೀಕ್ಷಿಸುವುದೇನನ್ನು? ನಾನೇ ಸುಂದರಿ. ಇಂದು ಮಧ್ಯಾಹ್ನದ ಬಸ್ಸಿನಲ್ಲಿ ಬಂದುದು.

ಲ:—ನೋಡು ಸುಂದರಿಯಲ್ಲವೇ? ನಿನ್ನ ಸುಂದರಿಯೋ ಅಲ್ಲವೋ? ನಾನು ಮಹಾ ಮಂತ್ರವಾದಿಯಲ್ಲವೇ?

ರಾ:—(ನಕ್ಕು) ಅದಕ್ಕೇನಡ್ಡಿ? (ಮುಂದೆ ಸುಂದರಿಯೊಡನೆ ಏನು ಮಾತಾಡುವುದೆಂದು ತಿಳಿಯದೆ ಸುಮ್ಮನೆ ನಿಲ್ಲುವನು.)

ಲ:—ಈಗ ನಾನೇ ಪುರೋಹಿತನಾಗಿ ನಿಮ್ಮಿಬ್ಬರ ಕೈ ಕೈ ಹಿಡಿಸಿ ಧಾರೆಯೆರೆದು ಮದುವೆ ಮಾಡಿಬಿಡಲೇ?

ರಾ:—ಸಾಕುಮಾಡಿನ್ನು ತಮಾಷೆ ನಾರಾಯಣ.

ಲ:—ಓಹೋ ಈಗ ಪೇದೆಯಲ್ಲ, ಕರೆಸ್ಪೊಂಡೆಂಟ್ ಕ್ಲಾರ್ಕ್! ಆದುದರಿಂದಲೇ ಈ ದರ್ಪ! ಪಕ್ಕಾ ಪೇದೆಯಾಗಿದ್ದಾಗ ನೀನು ಇವನನ್ನು ನೋಡಬೇಕಿತ್ತು ಸುಂದರಿ. ನಿನಗಾಗಿ ಇವನು ತೋಟ ಕೆಲಸ ಮಾಡಲೂ ಸಿದ್ಧನಿದ್ದ.

ಸುಂದರಿ:—(ಫಕ್ಕನೆ ತುಂಬಿ ಬಂದ ಕಣ್ಣೀರನ್ನು ಸೆರಗಿಂದೊರಸಿ ಕೊಳ್ಳುವಳು.)

ರಾ:—ಅದೆಲ್ಲಾ ಹಾಗಿರಲಿ. ಸುಂದರಿಯು ಚಾಯಾರಿಕೆ ಕುಡಿದಿರುವಳೇ?

ಸು:—ನೀವು ಬರುವ ಮೊದಲೇ ಅವರು ಬೇಕಷ್ಟು ಉಪಚಾರವನ್ನೆಲ್ಲಾ ಮಾಡಿದ್ದಾರೆ. ಅವರು ನನ್ನಣ್ಣನಂತೆ; ಈ ಮನೆ ನನ್ನ ಮನೆಯಂತೆ. ಕ್ಷಣಮಾತ್ರದಲ್ಲಿ ಅವರು ನಿಜವಾಗಿಯೂ ನನ್ನಣ್ಣನಾಗಿ ಹೋಗಿದ್ದಾರೆ.

ರಾ:—ಸುಂದರಿ, ನೋಡಿದೆಯಾ ನಾರಾಯಣನ ಮೈತ್ರಿಯ ರೀತಿಯನ್ನು! ಇಂತಹ ಮಿತ್ರರಿದ್ದರೆ ತಂದೆ ತಾಯಿ ಯಾಕೆ? ಬಂಧುಬಳಗವೇಕೆ?

ಲ:—ಸುಂದರಿ ಹೆಂಡತಿ ಏಕೆ? ಅಲ್ಲವೇ ರಾಮು?

ರಾ:—ಸುಮ್ಮನಿರು ನೀನು ಸ್ವಲ್ಪ.

ಲ:—ನೀನು ಸುಮ್ಮನಿರು ಮೊದಲು. ನನ್ನನ್ನಿನ್ನು ಹೊಗಳಿದರೆ ನಿನ್ನ ಸುಂದರಿಯ ಆಣೆ ಉಂಟು. ಅವಳು ಬಂದು ಬಹಳ ಹೊತ್ತಾಯಿತು. ಸ್ನಾನ ಊಟವೇನೂ ಆಗಿಲ್ಲ. ಅವಳು ಸ್ನಾನ ಮಾಡಲಿ. ನಾನು ಚಾಬುವನ್ನು ಕರಕೊಂಡು ಹೋಗಿ ಊಟ ತರುವೆನು. (ಹೋಗುವನು)

ನೋಟ ೫

(ಕಿಟ್ಟುವಿನ ಮನೆಗೆ ಕಾಗದ ಬಟ್ವಾಡೆ ಮಾಡಲೆಂದು ಹೋಗುತ್ತಿದ್ದ ಪೇದೆಯು ದಾರಿಯಲ್ಲಿ ಸೋಮು ಮತ್ತು ಬಂಟಪ್ಪನನ್ನು ಕಂಡು, ಕಿಟ್ಟುವಿನ ವಿಳಾಸಕ್ಕೆ ಬಂದಿದ್ದ ಕಾಗದವೊಂದನ್ನು ಸೋಮುನೊಡನೆ ಕೊಟ್ಟು ಹೋಗುವನು. ಸೋಮುನು ಅದನ್ನು ಹಿಡಿದುಕೊಂಡು ಮನೆಗೆ ಹೋಗುವುದರಲ್ಲಿರುವಾಗ, ಬಂಟಪ್ಪನು ಅದು ಪ್ರಾಯಶಃ ಸುಂದರಿಯ ಕಾಗದವಿರಬೇಕೆಂದು

ಅದನ್ನು ಒಡೆದೋದಲು ಒತ್ತಾಯ ಪಡಿಸುವನು. ಸೋಮನು ಅದನ್ನೊಡೆದೋದಿ ಒಮ್ಮೆಯೇ ಸಂತಾಪಗೊಂಡು ಕಣ್ಣೀರಿಳಿಸುವನು.)

ಬಂಟಪ್ಪ:—ಯಾರ ಕಾಗದವದು ಸೋಮ? ನೀನೇಕೆ ಕಣ್ಣೀರಿಳಿಸುತ್ತಿರುವುದು?

ಸೋಮ:—ಸುಂದರಿಯ ಕಾಗದ. ನಾನು ಹೋಗಿ ಅಮ್ಮನಿಗಿದನ್ನು ಕೊಡುವೆನು. ನೀನು ಹೋಗು ಬಂಟಪ್ಪ.

ಬ:—ನಾನೆಲ್ಲಿಗೆ ಹೋಗುವದು ಸೋಮ? ಶೆಟ್ಟರ ಬಂಟನಾಗಿದ್ದುದಕ್ಕಾಗಿ ಶೆಡ್ತಿಯವರು ನನ್ನನ್ನು ಒಕ್ಕಲೆಬ್ಬಿಸಿ ಮನೆಯಿಂದ ಹೊರ ದೂಡಿಸಿದರು. ಈಗ ಶೆಟ್ರೇ ಸಿವಿಲ್ ಜೈಲಿಗೆ ಹೋದ ಮೇಲೆ ನಾನು ಈ ಊರಲ್ಲಿ ಇನ್ನಾರ ಆಶಯ ಪಡೆಯವುದು? ನಾವಿಬ್ಬರೂ ಊರುಬಿಟ್ಟು ಘಟ್ಟಕ್ಕೆ ಹೋಗೋಣವೇ? ಇನ್ನು ಮುಂದೆ ಈ ಊರಲ್ಲಿರಲು ನಮಗೆ ಸಾಧ್ಯವಿಲ್ಲ.

ಸೋ:—ನೀನು ಏನು ಬೇಕಾದರೂ ಮಾಡು. ನಿನ್ನ ಗೊಡವೆ ನನಗೆ ಬೇಡ. ಸಾಕು ನನಗೆ ನಿಮ್ಮ ಸಹವಾಸ. ನಾನು ಮನೆಗೆ ಹೋಗುವೆನು.

ಬ:—ನಾವು ಈ ವರೆಗೆ ಅಣ್ಣ ತಮ್ಮಂದಿರಂತೆ ಒಟ್ಟಗಿದ್ದು ಈಗ ನನ್ನನ್ನೊಬ್ಬನನ್ನೇ ಬಿಟ್ಟು ಹೋಗುವೆಯಾ? ನಾನಿನ್ನೇನು ಮಾಡುವುದು? ಎಲ್ಲಿಗೆ ಹೋಗುವುದು? ಇನ್ನಾರು ನನಗೆ ಆಶಯ ಕೊಡುವರು?

ಸೋ:—ನಿನಗಿಚ್ಛೆ ಬಂದಲ್ಲಿಗೆ ಹೋಗು. ಶೆಡ್ತಿರ ಕಾಲಿಗೇನೇ ಅಡ್ಡ ಬಿದ್ದು ಕ್ಷಮಾಪಣೆ ಕೇಳು. ಅವರು ಕ್ಷಮೆ ಕೊಟ್ಟಾರು.

ಬ:—ಮತ್ತೇನು ಮಾಡುವುದು? ಅದಂತಿರಲಿ, ಸುಂದರಿಯು ಏನು ಬರೆದಿದ್ದಾಳೆ ಕಾಗದದಲ್ಲಿ?

ಸೋ:—ಅದನ್ನೆಲ್ಲಾ ನಾನು ನಿನಗೆ ಹೇಳಬೇಕಾಗಿಲ್ಲ. ತಾಯಿಯ ಕಾಗದವನ್ನು ನಾನು ಒಡೆದೋದಿದುದೇ ತಪ್ಪು. ನನಗಿನ್ನು ನಿಲ್ಲಲು ಸಾಧ್ಯವಿಲ್ಲ. ಹೋಗುವೆನು. (ಹೋಗುವನು.)

ಬ:—(ಸ್ವಗತ) ವೆಂಕಟ್ರಮಣ ಭಟ್ಟರು ಶೆಟ್ರನ್ನು ನಂಬಿಸಿ ಮೋಸಮಾಡಿ ಪರಾರಿಯಾಗಿಬಿಟ್ಟರು. ಶೆಟ್ಟರು ಸಿವಿಲ್ ಜೈಲಿಗೆ

ಹೋಗಿಬಿಟ್ಟರು. ಸೋಮನೀಗ ಮೊದಲಿನ ಸೋಮನೇ ಅಲ್ಲ. ಆ ಕಾಗದವು ಅವನನ್ನು ಸಂಪೂರ್ಣ ಮಾರ್ಪಡಿಸಿ ಬಿಟ್ಟಿದೆ. ಅವನಿಗೆ ಸ್ವಂತ ಮನೆಯಿದೆ. ನಾನೇನು ಮಾಡುವುದಪ್ಪ! ಸೋಮನಂದಂತೆ ನಾನು ಶೆಟ್ಟಿಯವರ ಬಳಿಗೆಹೋದರೆ ಅವರು ನನ್ನ ಬೆನ್ನಲ್ಲಿಯೇ ಹಿಡಿ ಹೊಡಿ ಪುಡಿಪುಡಿ ಮಾಡದಿರಲಾರರು. ಆದರೂ ಚಿಂತೆಯಿಲ್ಲ. ಕ್ಷಮೆ ಕೊಡುವ ವರೆಗೆ ಕಾಲು ಹಿಡಿದವ ಬಿಡುವುದೇ ಇಲ್ಲ. ನನ್ನ ಹೆಂಡತಿಯ ನ್ನಂತೂ ಅವರೇ ಮನೆಗೆ ಕರದೊಯ್ದು ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ನಾನು ಏನಾದರೂ ಅವರ ಚಾಕರಿ ಮಾಡುವೆನೆಂದು ಅಂಗಲಾಚಿ ಬೇಡಿ ಕೊಳ್ಳುತ್ತೇನೆ. ಎದುರು ಸಿಟ್ಟು ಶಾಂತವಾದ ಮೇಲೆ ಕ್ಷಮಿಸಿಯಾರು. ಹೃದಯ ಒಳ್ಳೇದು ಅವರದು. ನನ್ನ ಹೆಂಡತಿಯ ಹೃದಯವೂ ಕರಗೀತು ನೋಡುವ. (ಖಿನ್ನನಾಗಿ ತಲೆತಗ್ಗಿಸಿಕೊಂಡು ಹೋಗುವನು.)

ನೋಟ ೬

(ಕಿಟ್ಟುವಿನ ಮನೆ. ಜಗಲಿಯಲ್ಲಿ ಚಿಂತಾಮಗ್ನಳಾಗಿ ಕುಳಿತಿರುವ ಕಿಟ್ಟುವಿನ ಬಳಿಗೆ ಸೋಮನು ಹೋಗಿ ಒಮ್ಮೆಯೇ ಕಾಲಿಗೆ ಬಿದ್ದು ಕಣ್ಣೀರಿ ಡುವನು. ಕಿಟ್ಟುವು ತಳಮಳಗೊಳ್ಳುವಳು).

ಕಿಟ್ಟು:—(ಸೋಮನನ್ನು ಹಿಡಿದೆತ್ತಲೆತ್ನಿಸಿ ಎತ್ತಲಾರದೆ ಸೆರಗಿಂ ದವನ ಕಣ್ಣೀರೊರಸಿ) ಏನಾಯಿತು ಮಗು, ಏನಾಯಿತು? ಲಕ್ಷ್ಮಿ, ಲಕ್ಷ್ಮಿ, ಇಲ್ಲಿ ಬಾ, ಬೇಗ ಬಾ! ಸುಬ್ಬ, ಸುಬ್ಬ, ಇಲ್ಲಿ ಬಾ ಮಗ, ಓಡಿ ಬಾ!

ಲ:—(ದಿಗಿಲುಗೊಂಡು ಅಡಿಗೆ ಮನೆಯಿಂದೋಡಿ ಬಂದು ಕಿಟ್ಟು ವಿನ ಕಾಲ ಬುಡದಲ್ಲಿ ಬಿದ್ದಿರುವ ಸೋಮನನ್ನು ಕಂಡು) ಏನಾಯಿತಪ್ಪ! ಅಯ್ಯೋ! ಏನಾಯಿತು! (ಎಂದು ಸೋಮನನ್ನು ಹಿಡಿದೆತ್ತಿ ಒಂದೇ ಸವನೆ ಇಳಿದು ಬರುತ್ತಿರುವ ಕಣ್ಣೀರನ್ನು ಸೆರಗಿಂದೊರಸಿ ತಾನೂ ಬಾಯ್ಬಿಟ್ಟು ಅಳುತ್ತಾ) ಏನಾಯಿತೆಂದು ಹೇಳ ಬಾರದೆ? ಹೀಗೆ ಕಣ್ಣೀರಿಳಿಸುತ್ತಿರುವು ದೇಕೆ? ಏನಾಯಿತು? (ಮುಖವನ್ನೆಲ್ಲಾ ಒರಸುವಳು.)

ಕಿ.—(ಮಾತಾಡದೆ ಮೌನವಾಗಿರುವ ಸೋಮನ ಗಲ್ಲಹಿಡಿದು) ಏನಾಯಿತೆಂದು ಹೇಳು ಮಗು. ಏಕೆ ಕಣ್ಣೀರಿಡುತ್ತಿರುವೆ? ನನಗದನ್ನು ನೋಡಲು ಸಾಧ್ಯವಾಗುವುದಿಲ್ಲ.

ಸೋ:—ಅಮ್ಮಾ, ನನ್ನಂತಹ ಘೋರ ಪಾಪಿಯ ಕುರಿತು ಇನ್ನೂ ನಿನ್ನ ಹೃದಯದಲ್ಲಿ ಕನಿಕರದ ಒಸರಿರುವುದೇ? ಅದು ಇಷ್ಟರ ವರೆಗೆ ಬತ್ತಿ ಹೋಗಿಲ್ಲವೇ? ಮಾತೃದ್ರೋಹಿ, ಕುಟುಂಬ ಘಾತಕಿ, ಮತ್ತು ದುರಾಚಾರಿಯಾದ ನನ್ನ ಮುಖವನ್ನಾದರೂ ನೀವು ನೋಡಬಹುದೇ? ಅಮ್ಮಾ, ನನ್ನ ಗಲ್ಲ ಹಿಡಿದು ನಿನ್ನ ಪಾವನ ಹಸ್ತಗಳನ್ನು ಕಳಂಕಿತಗೊಳಿಸ ಬೇಡ. ಲಕ್ಷ್ಮಿ ಬಿಡು, ನನ್ನನ್ನು ಬಿಡು. ಪ್ರೀತಿ ಮತ್ತು ತಾಳ್ಮೆಯ ಪ್ರತಿಮೂರ್ತಿಯಾದ ನಿನ್ನ ಪತಿಯಲ್ಲ ನಾನು – ನಿನ್ನ ಧುರ್ದೈವದಿಂದ ನಿನ್ನನ್ನು ಪೀಡಿಸಲು ಗಂಟು ಬಿದ್ದಿರುವ ಪಿಶಾಚಿ. ಆಯ್ಯೋ ದೇವರೇ! ನನ್ನ ಹೃದಯ ಸುಡುತ್ತಿರುವುದೇ! ನಾನು ಮಾಡದ ದುಷ್ಕೃತ್ಯವಾದರೂ ಇನ್ನೇನಿದೆ?

ಕಿ:—ಲಕ್ಷ್ಮಿ ಹೋಗು, ಒಂದು ಲೋಟ ಹಾಲು ತಂದುಕೊಡು ಕುಡಿಯಲಿಕ್ಕೆ ಅವನಿಗೆ. ಅವನೆಷ್ಟು ಹಸಿದಿರುವನೋ? ಎಷ್ಟು ಬಾಯಾರಿಕೆಯಾಗಿರುವುದೋ?

ಸೋ:—ಅಮ್ಮಾ, ನನಗೆ ನೀವು ಹಾಲಲ್ಲ, ವಿಷಕೊಡಬೇಕು ಕುಡಿಯಲಿಕ್ಕೆ. ಆಗ ನನ್ನ ಹೃದಯದ ದಾಹವು ಶಾಂತವಾಗಬಹುದು. ಹಾಲು ಕೊಟ್ಟು ನನ್ನ ಸಂತಾಪಾಗ್ನಿಯನ್ನು ಮತ್ತೂ ಉರಿಸಬೇಡಿರಿ.

ಕಿ:—ಏನು ಮಾತಿದು ಮಗು? ಲಕ್ಷ್ಮಿ, ತಾ ಹಾಲು ತಾ.

(ಲಕ್ಷ್ಮಿಯು ಒಳಗೋಡಿ ಒಂದು ಲೋಟ ತುಂಬಾ ಹಾಲುತಂದು ಕಿಟ್ಟುವಿನೊಡನೆ ಕೊಡುವಳು) ಮಗು, ಇಗೋ ಹಾಲುಕುಡಿ. ಹಿಂದಾದುದನ್ನೆಲ್ಲಾ ಮರೆತು ಬಿಡು. ಮುಂದಿನ ವಿಚಾರಕ್ಕೆ ಗಮನ ಕೊಡು. ನನ್ನ ಕೈಯ ಈ ಕೆನೆಹಾಲೇ ನಿನ್ನ ಹೊಸ ಜೀವನಕ್ಕೆ ಅಮೃತ ಪ್ರಾಯವಾಗಲಿ.

ಸೋ:—(ಹಾಲು ತೆಗೆದುಕೊಂಡು ಕುಡಿದು) ಅಮ್ಮಾ, ಸುಬ್ಬ ನೆಲ್ಲಿ? ಅವನನ್ನಿಲ್ಲಿ ಕರೆ. ನನ್ನ ಮಗೀವೆಲ್ಲಿ? ಅದನ್ನಿಲ್ಲಿ ತಾ ಲಕ್ಷ್ಮಿ

(ಇಷ್ಟರಲ್ಲಿ ಸುಬ್ಬನು ಹುಲ್ಲುತಂದು ಹಟ್ಟಿಯಲ್ಲಿ ಹಾಕಿ ಮನೆಯೊಳಗೆ ಬಂದು ಅಲ್ಲಾರೂ ಇಲ್ಲದುದನ್ನು ನೋಡಿ, ತೊಟ್ಟಿಲಲ್ಲಿ ಮಲಗಿದ್ದು ಎಚ್ಚರವಾಗಿ ಆಡುತ್ತಿರುವ ಸೋಮನ ಮಗುವನ್ನು ಮುದ್ದಿಸಿ ಆಡಿಸುತ್ತಾ ಹೊರಗೆ ಬಂದು ಸೋಮನು ಕಣ್ಣೀರಿಳಿಸುತ್ತಾ ನಿಂತಿರುವುದನ್ನು ಕಂಡು ಆಶ್ಚರ್ಯಗೊಳ್ಳುವನು.) ಸುಬ್ಬ, ನೀನು ಸಕಾಲದಲ್ಲಿ ನನ್ನ ಮಗುವನ್ನು ಹಿಡಿದುಕೊಂಡು ಬಂದೆ. ತಮ್ಮಾ, ನನ್ನ ಅಕ್ಷಮ್ಯ ಅಪರಾಧಗಳನ್ನು ಕ್ಷಮಿಸುವೆಯಾ? ಒಂದೇ ಕರುಳಲ್ಲಿ ಹುಟ್ಟಿದ ತನ್ನ ತಮ್ಮನನ್ನೇ ಕೊಲೆ ಮಾಡಲೆತ್ನಿಸಿದ ಮಹಾ ಪಾತಕಿ ನಾನು. ನನಗೆ ಕ್ಷಮೆಯೆಲ್ಲಿ?

ಸು:—ಅಣ್ಣಾ, ಏನು ಮಾತಿದು? ನನ್ನೊಡನೆ ನೀನು ಕ್ಷಮೆ ಕೇಳುವ ಅವಶ್ಯವಾದರೂ ಏನು? ದುಸ್ಸಹವಾಸದಲ್ಲಿ ಬಿದ್ದು ಎಂತಹ ಸತ್ಪುರುಷರು ಕೂಡ ಕೆಟ್ಟು ಹೋಗುವುದಿಲ್ಲ! ಇದೋ ನಿನ್ನ ಮುದ್ದು ಕುವರ. ಅವನನ್ನೊಮ್ಮೆ ಮುದ್ದಾಡಿ ಆನಂದಿಸು. ಆನಂದ ಪ್ರವಾಹ ದಲ್ಲಿ ಹಿಂದಿನ ಕೊಳೆ ಕಲ್ಮಶಗಳೆಲ್ಲಾ ಒಮ್ಮೆಯೇ ತೊಳೆದು ಹೋಗಲಿ.

ಸೋ:—ಅಹ! ಈ ನನ್ನ ಮುದ್ದು ಕೂಸಿನ ತೊಟ್ಟಿಲೇ ಅದರ ಚಿತೆಯಾಗಿ ಹೋಗುತ್ತಿದ್ದಿತಲ್ಲಾ ಸುಬ್ಬ ನೀನಲ್ಲದಿರುತ್ತಿದ್ದರೆ! ಅಂದು ನಾವು ಕುಡಿದು ತಲೆಗೆಟ್ಟು ಮನೆಗೆ ಬೆಂಕಿ ಕೊಟ್ಟಾಗ ಪ್ರಾಣದ ಹಂಗು ತೊರೆದು ಮಗುವನ್ನುಳಿಸಿದೆ. ತಮ್ಮಾ, ನೀನಲ್ಲದಿರುತ್ತಿದ್ದರೆ ಎಂತಹ ಘೋರ ಅನಾಹುತಕ್ಕೊಳಗಾಗುತ್ತಿದ್ದಿತೋ ನಮ್ಮ ಇಡೀ ಕುಟುಂಬ! ನಮ್ಮ ರಕ್ಷಕನೇ ನೀನು.

ಸು:—ಅಣ್ಣ, ನಾನೊಬ್ಬ ಪರಕೀಯನೆಂಬಂತೆ ನೀನು ಮಾತಾಡು ತ್ತಿರುವೆಯಲ್ಲ?

ಸೋ:—ಆಯ್ತು, ಇನ್ನು ಮಾತಾಡುವುದಿಲ್ಲ ಸುಬ್ಬ. ನನ್ನ ಗತ ಜೀವನವನ್ನೇ ಮರೆತು ಬಿಡುವೆನು. ಇಂದಿನಿಂದ ಹೊಸ ಜೀವನವನ್ನಾ ರಂಭಿಸಿ ನಿಮ್ಮೆಲ್ಲರ ಸೇವೆಮಾಡಿ ಸಾಧ್ಯವಾದಷ್ಟು ನಿಮ್ಮ ಋಣ ತೀರಿಸು ವೆನು.

ಸು:—ಪುನಃ ಇದೇನು ಮಾತಾಡುವೆ ಅಣ್ಣ? ನಿನ್ನ ಮಾತಿನ

ಪ್ರಕಾರ ನೀನೊಬ್ಬ ಪರಕೀಯನೆಂದಾಯಿತು. ಎಲ್ಲಿಯ ಋಣ? ಎಂತಹ ಸೇವೆ ಸಲ್ಲಿಸುವುದು?

ಸೋ:—ನನ್ನ ಹಿಂದಿನ ಜೀವನದ ಕುರಿತು ನಾನಿನ್ನೇನೂ ಮಾತಾಡುವುದಿಲ್ಲ. ನಿಮಗೀಗ ಅತ್ಯಂತ ಸಂತೋಷ ಸಂಗತಿಯೊಂದನ್ನು ತಿಳಿಸುವೆನು. ಅದನ್ನು ಆರಂಭದಲ್ಲೇ ನಾನು ನಿಮಗೆ ತಿಳಿಸಬೇಕಿತ್ತು; ಆದರೆ ಹೃದಯದ ಉದ್ವೇಗವನ್ನು ನನಗೆ ತಾಳಿಕೊಳ್ಳಲು ಸಾಧ್ಯವಿಲ್ಲ. ಇಂದು ಅಮ್ಮನಿಗೆ ಸುಂದರಿಯ ಕಾಗದವೊಂದು ಬಂದಿರುವುದು!

ಕಿ:—ಸುಂದರಿಯ ಕಾಗದ ಬಂದಿರುವುದೇ? ಏನು ಬರೆದಿದ್ದಾಳೆ ಮಗು? ಮದುವೆಯ ವಿಷಯವೇನಾದರೂ ಬರೆದಿರುವಳೇ? ಅವಳ ಕೆಲಸದ ಸುದ್ದಿ ಏನಾದರೂ ಇದೆಯೇ?

ಸೋ:—ಎಲ್ಲ ಬರೆದಿದ್ದಾಳೆ. ಅವಳಿಂದ ನಮ್ಮ ಭಾಗ್ಯೋದಯವೇ ಆಗಿದೆ. ಇನ್ನು ನಮ್ಮ ಕಷ್ಟವೆಲ್ಲಾ ಪಾರಾದಂತೆಯೇ ಸರಿ. ಅಮ್ಮಾ, ನೀನು ಇನ್ನು ಮುಂದಾದರೂ ಸುಖಪಡುವಂತೆ ದಯಾಮಯನಾದ ದೇವರು ಕರುಣೆ ತೋರಿಸಿರುವನು.

ಕಿ:—ಸುಂದರಿ ಏನು ಬರೆದಿದ್ದಾಳೆಂದು ಸ್ವಲ್ಪ ಹೇಳು ಮಗು. ಆ ಮೇಲೆ ಮಾತಾಡುವ ನಮ್ಮ ಭಾಗ್ಯೋದಯದ ವಿಷಯವನ್ನು.

ಸೋ:—ಇದೇ ತಿಂಗಳ 22ನೇ ತಾರೀಕು ಆದಿತ್ಯವಾರ ಮಂಗಳೂರಿನ ಆರ್ಯ ಸಮಾಜದಲ್ಲಿ ರಾಮಭಟ್ಟರಿಗೂ ಸುಂದರಿಗೂ ಮದುವೆಯಂತೆ. ಅವಳಿಗೆ ತಿಂಗಳಿಗೆ 20 ರೂಪಾಯಿ ಸಂಬಳದ ಉಪಾಧ್ಯಾಯಿನಿ ಕೆಲಸ ಸಿಕ್ಕಿದೆಯಂತೆ. ರಾಮ ಭಟ್ಟರ ಮದುವೆ ವೆಚ್ಚಕ್ಕಾಗಿ ಅವರ ಕಂಪೆನಿಯ ಧೊರೆಗಳು ರೂ 200 ಎಡ್ವಾನ್ಸಾಗಿ ಕೊಟ್ಟಿರುವರಂತೆ. ನಾವೆಲ್ಲಾ ಮದುವೆಗಿಂತ ಎರಡು ದಿವಸ ಮುಂಚೆಯೇ ಮಂಗಳೂರಿಗೆ ಹೋಗಬೇಕಂತೆ. ನಮ್ಮ ವೆಚ್ಚಕ್ಕಾಗಿ ನಿನ್ನ ಹೆಸರಲ್ಲಿ 50 ರೂಪಾಯಿ ಮನಿಯಾರ್ಡರ್ ಮಾಡಿದ್ದಾಳಂತೆ. ಇನ್ನೂ ವಿಶೇಷ ಸಂಗತಿಯೆಂದರೆ ರಾಮ ಭಟ್ರಿಗೂ ಅವರ ತಂದೆ ವೆಂಕಟ್ರಮಣ ಭಟ್ರಿಗೂ ರಾಜಿಯಾಗಿ ಅವರ ಒಪ್ಪಿಗೆ ಮೇರೆಗೇನೇ ಈ ಮದುವೆ ನಡೆಯುವುದೆಂಬುದು. ವೆಂಕ

ಟ್ರಮಣ ಭಟ್ಟರು ಈಗ ಸಂಪೂರ್ಣ ಮಾರ್ಪಾಟ ಹೊಂದಿ ಆರ್ಯಸಮಾಜಕ್ಕೆ ಸೇರಿರುವರಂತೆ.

ಕಿಟ್ಟು:—(ಆನಂದ ತುಂದಿಲಾಂತರಂಗಳಾಗಿ)ನನ್ನ ಮಗಳು ಎಷ್ಟು ಕಷ್ಟಪಟ್ಟರೂ, ಆ ರಾಮ ಭಟ್ಟರಿಂದಾಗಿ ಇಂದು ಸುಖಪಡುವಂತಾಯಿತು. ನಮ್ಮ ಪಾಲಿನ ದೇವರೆಂದರೆ ರಾಮ ಭಟ್ಟರು. ಸುಂದರಿಗಾಗಿ, ನಮಗಾಗಿ ಅವರೆಷ್ಟು ಕಷ್ಟಕ್ಕೊಳಗಾಗಲಿಲ್ಲ! ದೇವರ ದಯೆಯಿಂದೆ ನಮ್ಮ ಕಷ್ಟಪರಂಪರೆಗಳೆಲ್ಲಾ ಪಾರಾಗುವಂತಾಯಿತು. ಇನ್ನು ನಾನು ಸತ್ತರೂ ಚಿಂತೆಯಿಲ್ಲ.

ಸೋ:—ಯಾಕೆ ಸಾಯುವುದಮ್ಮಾ? ನೂರು ವರ್ಷದ ವರೆಗೆ ಬಾಳಬೇಕಮ್ಮ ನೀನು.

ಲಕ್ಷ್ಮಿ:—ಅದಂತಿರಲಿ, ಮತ್ತೇನು ಬರೆದಿದ್ದಾಳೆ ಲಕ್ಷ್ಮಿ?

ಸೋ:—(ಲಕ್ಷ್ಮಿಯ ಮುಖ ನೋಡಿ ನಸುನಕ್ಕು) ನಿನ್ನ ವಿಷಯ ಬಹಳ ಬರೆದಿದ್ದಾಳೆ. ಆ ಅಂಶ ಓದಿ ಹೇಳುತ್ತೇನೆ ಕೇಳು. "ನಮ್ಮ ಮನೆಯ ಲಕ್ಷ್ಮಿಯೇ ಆಗಿರುವ ಲಕ್ಷ್ಮಿಗೆ ನನ್ನ ಅನಂತ ವಂದನೆಗಳು. ಅವಳು ಬಾರದಿದ್ದರೆ ನನಗೆ ನನ್ನ ಮದುವೆಯೂ ಸಂತೋಷದ ಸಂದರ್ಭವಾಗಲಾರದು. ಆದರೆ ಅಣ್ಣನು ಬಾರದೆ ಅವಳು ಬರಲಾರಳು. ಅಣ್ಣನನ್ನೂ ನೀವು ಕರಕೊಂಡು ಬರಲು ಪ್ರಯತ್ನಮಾಡಬೇಕು. ಅವರಿಬ್ಬರೂ ಒಟ್ಟಿಗೆ ಬಂದರೆ ನನ್ನ ಆನಂದಕ್ಕೆ ಪಾರವೇ ಇಲ್ಲದಾಗುವುದು, ಅಮ್ಮಾ, ಏನಾದರೂ ಮಾಡಿ ನೀವು ಅವರಿಬ್ಬರನ್ನೂ ಕರತರಲೇ ಬೇಕು. ಅಣ್ಣನಿಗೆ ನಾನೇನಾದರೂ ತಪ್ಪುಮಾಡಿದ್ದಿದ್ದರೆ ಅವನ ಕಾಲಿಗೆ ಬಿದ್ದು ಕ್ಷಮೆ ಬೇಡುವೆನು. ಅವನಿನ್ನಾದರೂ ದುಸ್ಸಹವಾಸ ಬಿಟ್ಟು ಹಿಂದಿನಂತೆ ಒಳ್ಳೆಯವನಾಗಿ ಬಾಳುವಂತಾಗಲೆಂದು ಅನುನಿತ್ಯವೂ ದೇವರನ್ನು ಪ್ರಾರ್ಥಿಸುತ್ತಿರುವೆನು. ಆ ಕುರಿತು ಹರಿಕೆ ಕೂಡಾ ಹೇಳಿರುವೆನು. ಅಷ್ಟೊಂದು ಸಾಧು ಸಜ್ಜನನಾಗಿದ್ದ ಅವನಿಗೆ ಈ ಬುದ್ಧಿ ಏಕೆ ಬಂತೋ! ಅದು ನಮ್ಮ ದುರ್ದೈವ. ಪಾಪ, ಲಕ್ಷ್ಮಿಗೆ ನಮ್ಮ ಮನೆಗೆ ಬಂದ ಮೇಲೆ ಒಂದು ದಿನ ಸುಖವಿಲ್ಲ. ಅವಳೆಂದ......(ಕಂಠವು ರುದ್ಧವಾಗಿ ಮುಂದೆ ಓದಲಾರದೆ ಸುಮ್ಮನಾಗಿ ಪುನಃ ಕಣ್ಣೀರಿಳಿಸ ಹತ್ತುವನು.)

ಸು:—ಅಣ್ಣಾ, ಆನಂದಬಾಷ್ಪ ಸುರಿಸುವ ಸಂದರ್ಭವಿದು. ನೀನು ಅಳುತ್ತಿರುವುದೇಕೆ? (ಕಾಗದವನ್ನು ಅವನಿಂದ ತೆಗೆದುಕೊಂಡು ಆದ್ಯಂತ ಓದಿ) ಅಮ್ಮಾ, ಇದರಲ್ಲಿ ಇನ್ನೂ ಒಂದು ವಿಷಯವಿದೆ. ಅದನ್ನು ಅಣ್ಣ ಹೇಳಲೇ ಇಲ್ಲ. ವೆಂಕಟ್ರಮಣ ಭಟ್ಟರು ಇನ್ನು ಮಂಗಳೂರಲ್ಲೇ ವಾಸಿಸುವರಂತೆ. ಅವರ ಆಸ್ತಿಯನ್ನೆಲ್ಲಾ ನಮಗೆ ಬಹಳ ಅಗ್ಗವಾಗಿ ಗೇಣಿಗೆ ಕೊಡುವರಂತೆ. ಅವರ ಮನೆಯಲ್ಲೇ ನಾವು ವಾಸಿಸಿ ಭೂಮಿ ಸಾಗುವಳಿ ಮಾಡಬೇಕಂತೆ. ಹಾಗಾದರೆ ನಾವೂ ಮುಂದೆ ಸುಖವಾಗಿರುವಂತಾಯಿತು. ನಿಜವಾಗಿಯೂ ಈಗ ಒಮ್ಮೆಯೇ ನಮ್ಮೆಲ್ಲರ ಭಾಗ್ಯೋದಯವಾಗಿ ಬಿಟ್ಟಿದೆ.

ಕಿಟ್ಟು:—ಇದಕ್ಕೆಲ್ಲಾ ರಾಮಭಟ್ಟರೇ ಮುಖ್ಯ ಕಾರಣ. ಅವರ ತಾಯಿಯು ಎಷ್ಟೊಂದು ಗುಣವಂತೆ! ಆ ತಾಯಿಯ ಮಗನೇ ಸರಿ ಅವರು. ಸೋಮು, ನಾವೆಲ್ಲರೂ ಒಟ್ಟಿಗೆ ಸುಂದರಿ ಮದುವೆಗೆ ಮಂಗಳೂರಿಗೆ ಹೋಗಬೇಕು. ಲಕ್ಷ್ಮಿಯೂ ಬರಬೇಕು. ನಿನ್ನ ಆಕ್ಷೇಪವೇನೂ ಇಲ್ಲವಷ್ಟೆ.

ಸೋ:—ನನ್ನ ಆಕ್ಷೇಪವೇನಮ್ಮಾ? ನನ್ನ ಜೀವನವು ಒಮ್ಮೆಯೇ ಮಾಂತ್ರಿಕವಾಗಿ ಬದಲಾವಣೆಯಾಗಲು ಕಾರಣವೇ ಅವಳ ಕಾಗದ. ನನ್ನೊಬ್ಬಳೇ ಒಬ್ಬಾಕೆ ತಂಗಿಯ ಮದುವೆಯಲ್ಲಿ ಭಾಗವಹಿಸುವ ಭಾಗ್ಯವೇ ನನ್ನ ಸುದೈವವೆಂದು ಭಾವಿಸುವೆನಮ್ಮ.

ಕಿಟ್ಟು:—ಮಗು, ನೀನು ಊಟಮಾಡಿ ಎಷ್ಟು ಹೊತ್ತಾಯಿತೋ ಏನೋ. ಊಟ ಮಾಡುವ ಹೊತ್ತು ಮೀರಿತೀಗ. ನಾವೆಲ್ಲರೂ ಒಟ್ಟಿಗೆ ಊಟ ಮಾಡುವ. (ಎಲ್ಲರೂ ಮನೆಯೊಳಗೆ ಹೋಗುವರು.)

ನೋಟ ೭

(ಮನೆ. ಮಂಗಳೂರಿನ ಕದ್ರಿಯಲ್ಲಿ ರಸ್ತೆ ಬಿಟ್ಟು ತುಸು ದೂರವಿರುವ ಅಚ್ಚುಕಟ್ಟಾದ ಸುಂದರ ಕಟ್ಟಡದ ಪೋರ್ಟಿಕೋದಲ್ಲಿ ವೆಂಕಟ್ರಮಣ ಭಟ್ಟನು ಕುರ್ಚಿಯ ಮೇಲೆ ಕುಳಿತಿರುವನು. ಸುಂದರಿಯು ಹಾರ್ಮೋನಿಯಮ್

ಹಿಡಿದು ನೆಲದಲ್ಲಿ ಚಾಪೆಯ ಮೇಲೆ ಕುಳಿತಿರುವಳು. ರಾಮಭಟ್ಟನು ಪೋರ್ಟಿಕೋದ ಜಗಲಿಯ ಮೇಲೆ ಕೂತು, ವೆಂಕಟ್ರಮಣ ಭಟ್ಟನು ಕಟ್ಟಿರುವ ವೈದಿಕ ಭಜನಾ ಹಾಡಿನ ಧಾಟಿಯನ್ನು ಸುಂದರಿಗೆ ತಾಳಹಾಕಿ ಕಲಿಸುತ್ತಿರುವನು. ಸುಂದರಿಯು ಹಾಡನ್ನು ಹಾರ್ಮೋನಿಯಮಿನಲ್ಲಿ ಶೀಘ್ರವಾಗಿ ನುಡಿಸ ಕಲಿಯುವಳು. ಇಷ್ಟರಲ್ಲಿ ಲಕ್ಷ್ಮೀನಾರಾಯಣನು ಎರಡು ಕೈಗಳಲ್ಲೆರಡು ಕಾಗದಗಳನ್ನು ಹಿಡಿದುಕೊಂಡು ಬರುವನು.)

ಸು:—(ಹಾರ್ಮೋನಿಯಮ್ ಬಾರಿಸುವುದನ್ನು ನಿಲ್ಲಿಸಿ) ಓಹೋ, ನೀವು ಯಾವಾಗಿನಿಂದ ಪೋಸ್ಟು ಪೇದೆ ಕೆಲಸ ವಹಿಸಿಕೊಂಡುದು?

ಲ:—ಮತ್ತೇನು ಮಾಡುವುದು ಸುಂದರಿ? ಇನ್‌ಶ್ಯೂರ್ ಬಿಸಿನೆಸ್ ಏನೂ ಆಗುವುದಿಲ್ಲ. ಕಡೆಗೆ ನಿನ್ನ ಗಂಡ ಮಾದರಿ ಹಾಕಿಕೊಟ್ಟ ಹಾದಿ ಇದೆಯಲ್ಲ, ಅದನ್ನೇ ಅನುಸರಿಸಿ, ಪೋಸ್ಟು ಪೇದೆಯಾದರೆ ಪೋಸ್ಟುಪೇದೆಯೆಂದು ಇವತ್ತಿನಿಂದ ಆ ಕೆಲಸ ಮಾಡತೊಡಗಿದ್ದೇನೆ. ಆದಂತಿರಲಿ, ನೀವೀಗ ಸಿನೆಮದ ನಟನಟಿಯರ ಮಾದರಿಯನ್ನನುಸರಿಸ ತೊಡಗಿದುದು ಎಂದಿನಿಂದ ಸುಂದರಿ? ಸುಂದರ ನಾರಿಯೊಬ್ಬಳು ಎಂತಹ ನೀರಸ ಗಂಡು ಹೃದಯವನ್ನಾದರೂ ಎಷ್ಟೊಂದು ಚಮತ್ಕಾರವಾಗಿ, ಮಾಂತ್ರಿಕವಾಗಿ ಬದಲಾಯಿಸಿಬಿಡುವಳು! ಅಬ್ಬಬ್ಬ ನಾರಿಯ ಮಹಿಮೆಯೇ! ರಾಮಭಟ್ಟನ ಮರುಭೂಮಿಯಂತಹ ಒಣ ಹೃದಯದಲ್ಲಿಯೂ ಇಂತಹ ಪ್ರಣಯ ಬುಗ್ಗೆಯು ಒಮ್ಮೆಯೇ ಕಾರಂಜಿಯಂತೆ ಪ್ರಣಯಂರಸವನ್ನು ಹೊರಚಿಮ್ಮುವುದೆಂದು ಯಾರು ಬಗೆದಿದ್ದರು! ನಾನು ಬಂದೆನೆಂದು ನಿಲ್ಲಿಸಿದುದೇ ಸುಂದರಿ ನಿಮ್ಮ ಪ್ರಣಯಗಾನವನ್ನು?

ಸು:—ಛೆ! ಏನು ಮಾತಿದು ನಿಮ್ಮದಣ್ಣ! ಯಾರು ಪ್ರಣಯಗಾನ ಹಾಡುತ್ತಿದ್ದುದು? ಭಟ್ಟರು ನವೀನವಾಗಿ ಕಟ್ಟಿದ ವೈದಿಕ ಭಜನಾ ಗೀತೆಯೊಂದರ ಧಾಟಿಯನ್ನು ನನಗವರು ಕಲಿಸುತ್ತಿದ್ದುದು.

ರಾ:—ನವದಂಪತಿಗಳು ಪ್ರಣಯಗಾನ ಹಾಡುವುದರಲ್ಲೇನೂ ಆಶ್ಚರ್ಯವಿಲ್ಲೆನ್ನುವ. ಅದಂತಿರಲಿ, ನಮ್ಮ ಪ್ರಣಯಕತೆಯನ್ನು **ಪ್ರೇಮವಿಜಯ** ನಾಟಕವಾಗಿ ಬರೆಯಬೇಕೆಂದು ನೀನು ತಮಾಷೆ ಮಾಡುತ್ತಿದ್ದೆಯಲ್ಲ? ಈಗ ನಿನ್ನದು ನನಗಿಂತಲೂ ದೊಡ್ಡ ಪ್ರೇಮವಿಜಯ ನಾಟಕವಾಗುವುದೋ ಏನೋ!

ಲ:—(ಉತ್ಸುಕತೆಯಿಂದ) ಹಾಗಂದರೆ?

ರಾ:—ಹಾಗಂದರೇನೆಂದು ಸುಂದರಿಯೊಡನೆ ಕೇಳು. ಅವಳು ಸುಳ್ಳು ಹೇಳಲಾರಳಷ್ಟೆ. ತಂದೆಯವರಿಗಂತೂ ಈ ವಿಷಯ ಕೇಳಿ ಬಹಳ ಸಂತೋಷವಾಗಿದೆ. ಅವರೀಗ ನಿನಗಿಂತಲೂ ಉಜ್ವಲ ಆರ್ಯ ಸಾಮಾಜಿಕರಾಗಿ ಹೋಗಿದ್ದಾರೆ ನಾರಾಯಣ. 'ಸತ್ಯಾರ್ಥ ಪ್ರಕಾಶವೇ' ಅವರ ಬೈಬಲ್ ಆಗಿಹೋಗಿದೆ.

ಲ:—(ಆಶ್ಚರ್ಯಗೊಂಡು) ಏನು ಸುಂದರಿ?

ಸು:—ಅವರೇ ಹೇಳುವರು; ಅವರೊಡನೆಯೇ ಕೇಳಿ.

ಲ:—ಹೇಳುವುದಾದರೆ ಹೇಳು ರಾಮು. ಇಲ್ಲವಾದರೆ ಈ ಕಾಗದ ಗಳನ್ನು ನಿಮಗೆ ಕೊಡದೇನೇ ಹೋಗಿಬಿಡುವೆನು ಇಲ್ಲಿಂದ.

ರಾ:—ಮದುವೆಯೆಂದೊಡನೆಯೇ ಬಾಯಲ್ಲಿ ನೀರು ಸುರಿಯದ ಮಾನವ ಪ್ರಾಣಿಯಾದರೂ ಯಾವುದು? ಮದುವೆಯೆಂಬ ಶಬ್ದವು ಅದೆಂತಹ ವಿಚಿತ್ರಶಕ್ತಿಯುಳ್ಳದ್ದು! ಎಂತಹ ಸ್ಥಿರ, ನಿಷ್ಠುರ ಮನಸ್ಸನ್ನಾದರೂ ಚಲನಗೊಳಿಸಿ ಬೆಣ್ಣೆ ಮಾಡಿಬಿಡುವುದದು.

ಲ:—ಮದುವೆಯ ಕುರಿತು ನಿನ್ನ ಲೆಕ್ಚರು ಸಾಕು. ಸಂಗತಿಯೇನೆಂದು ಹೇಳುವುದಾದರೆ ಹೇಳು; ಇಲ್ಲವಾದರೆ ಹೋಗುವೆನು. (ಹೊರಡಲನುವಾಗುವನು)

ರಾ:—ನಿನ್ನ ನಟನೆಯೆಲ್ಲಾ ಸಾಕು. ಹೋಗುವುದಾದರೆ ಹೋಗು. ನಿನಗೆ ನಾನು ಮದುವೆ ಪ್ರಸ್ತಾಪದ ಮಾಟ ಮಾಡಿಬಿಟ್ಟರುವಾಗ ಕಾಲು ಬರಬೇಕಲ್ಲವೇ ಹೋಗಲಿಕ್ಕೆ! ಲೈಟ್‌ಹೌಸ್ ಗುಡ್ಡದಲ್ಲಿ ಸಿಕ್ಕಸಿಕ್ಕ ಹುಡುಗಿಯರನ್ನೆಲ್ಲಾ ನೋಡಿನೋಡಿ ಬೇಸತ್ತುಹೋಗಿರುವ ನೀನು ಚೆಲುವೆ ಅರ್ಧಾಂಗಿಯೋರ್ವಳನ್ನು ಆಶಿಸುತ್ತಿರುವುದಿಲ್ಲವೇ?

ಲ:—ಹೌದು, ಅದರಲ್ಲಿ ಮುಚ್ಚುಮರೆಯೇನು? ನೀನು ಮತ್ತು ಸುಂದರಿಯು ಪಡುವ ಸುಖವನ್ನು ಕಂಡ ಮೇಲಂತೂ ಅದೇ ಚಿಂತೆ ರಾತ್ರಿಹಗಲು ನನಗೆ! ತಿಂದದ್ದು ಮೈಗೆಹಿಡಿಯುವುದಿಲ್ಲ! ನೋಡು ರಾಮು, ಇತ್ತಲಾಗಿ ನಾನು ದಿನೇದಿನೇ ಕೃಶವಾಗುತ್ತಿರುವುದಿಲ್ಲವೇ? ನನ್ನ ಆತ್ಮೀಯ ಗೆಳೆಯಗೆಳತಿಯರೆಂದರೆ ನೀವಿಬ್ಬರು. ನಾನು ಪ್ರಣ

ಯರೋಗ ಬಾಧೆಯಿಂದ ಹಾಸಿಗೆ ಹಿಡಿದು ಬೇಗನೆ ಸಾಯದಿರ-ಬೇಕಾದರೆ ನೀವು ನನಗೊಬ್ಬ ಯೋಗ್ಯ ಸಂಗಾತಿನಿಯನ್ನು ಎಲ್ಲಿಂದಾದರೂ ಒದಗಿಸಿ ಕೊಡಲೇಬೇಕು! ಇಲ್ಲವಾದರೆ ನಾಳಿನಿಂದ ನಾನು ನಿಮ್ಮ ಮನೆಬಾಗಿಲಲ್ಲಿಯೇ ಅನ್ನ ಸತ್ಯಾಗ್ರಹಮಾಡುವೆನು!

ರಾ:—ನಿನ್ನ ತಮಾಷೆ ಬಿಟ್ಟು ನಾನು ಹೇಳುವುದನ್ನು ಸ್ವಲ್ಪ ಕಿವಿಕೊಟ್ಟು ಕೇಳು. ತಾನು ಉಜ್ವಲ ಸಮಾಜ ಸುಧಾರಕ, ಹಿಂದು ಸಂಘಟನೆಯ ಪ್ರಬಲ ಪ್ರತಿಪಾದಕ, ದೊಡ್ಡ ಸಮಾಜೋದ್ಧಾರಕನೆಂದು ಕೊಚ್ಚಿಕೊಳ್ಳುತ್ತಿರುವೆಯಲ್ಲ!

ಲ:—ಹೌದು, ನಿನ್ನ ಮತ್ತು ಸುಂದರಿಯ ವಿವಾಹವೇ ಅದಕ್ಕೆ ಸಾಕ್ಷಿ.

ವೆ:—ಬೇರೆಯವರಿಗೆ ಮದುವೆಮಾಡುವುದೇನೂ ದೊಡ್ಡ ಸಂಗತಿಯಲ್ಲ ನಾರಾಯಣ. ಪರೋಪದೇಶ ಮಾಡಿ ಪರರಿಂದ ಕೆಲಸಮಾಡಿಸುವುದಕ್ಕಿಂತ, ತನ್ನ ಉಪದೇಶವನ್ನು ತಾನೇ ಆಚರಣೆಗೆ ತರುವುದು ಅತ್ಯುತ್ತಮ.

ಲ:—ನುಡಿದಂತೆ ನಡೆಯುವುದಕ್ಕೆ ನಾನು ಎಷ್ಟಕ್ಕೂ ಹಿಂಜರಿಯುವವನಲ್ಲೆಂದು ನಿಮಗಿನ್ನೂ ವೇದ್ಯವಾಗಿರುವುದಿಲ್ಲವೇ ಭಟ್ರೆ? ಏನು, ಸಂಗತಿಯೇನೆಂದು ಹೇಳಬಾರದೆ ರಾಮು?

ರಾ:— ಆರ್ಯಸಮಾಜಕ್ಕೆ ಪ್ರತಿ ಆದಿತ್ಯವಾರ ತಪ್ಪದೆ ಬಂದು ಭಜನೆಯಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದ ಆ ಕೋಕಿಲಕಂಠಿ ಹರಿಜನ ಹುಡುಗಿ ಇದ್ದಾಳಲ್ಲ?

ಲ:—ಹೌದು.

ರಾ:—ಅವಳ ರೂಪ ಹೇಗೆ?

ಲ:—ತಕ್ಕಮಟ್ಟಿಗೆ ಚೆನ್ನಾಗಿದ್ದಾಳೆ.

ರಾ:—ತಕ್ಕಮಟ್ಟಿಗೇನು? ನಮ್ಮ ಸುಂದರಿಯಷ್ಟೆ ಸುಂದರಿಯಾಗಿದ್ದಾಳೆ. ಅಲ್ಲವೆ ಸುಂದರಿ?

ಲ.—ಆ ಮಾತೆಲ್ಲಾ ಕಟ್ಟಿಡು. ಸುಂದರಿಯಷ್ಟು ಸುಂದರಿ ಹುಡುಗಿ ಸಿಗುವುದಾದರೆ ನಾನು ಈಗಲೇ ಮದುವೆಮಾಡಿಕೊಳ್ಳುತ್ತೇನೆ. ಯಾವ ಜಾತಿಯಾದರೂ ಚಿಂತೆ ಇಲ್ಲ.

ವೆ:—ಸುಂದರಿಯೋ, ಗುಣವತಿಯೋ?

ಲ:—ಹೌದು, ಸುಂದರಿ ಮಾತ್ರವಲ್ಲ, ಸುಂದರಿಯಷ್ಟೇ ಗುಣವತಿಯೂ ಆಗಿರಬೇಕು

ರಾ:—ಆ ಹರಿಜನ ಹುಡುಗಿ ಬಹಳ ಗುಣವತಿಯಂತೆ. ಸುಂದರಿಗಿಂತಲೂ ಹೆಚ್ಚು ಕಲ್ತವಳು.

ಲ:—ಏನಾಯಿತೀಗ?

ರಾ:—ಆಗುವುದೇನಿಲ್ಲ. ಅವಳು ನಿನ್ನಲ್ಲಿ ಬಹಳ ಅನುರಕ್ತಳಿರುವಳಂತೆ. ಸುಂದರಿಯೊಡನೆ ನಿನ್ನ ಸಂಗತಿಯನ್ನೆಲ್ಲಾ ವಿಚಾರಿಸಿದಳಂತೆ. ಮೊನ್ನೆ ಆದಿತ್ಯವಾರ ನಾನವಳನ್ನು ಪರೀಕ್ಷಿಸಿ ನೋಡಿದೆ. ನಿನ್ನನ್ನೇ ನೋಡುತ್ತಿದ್ದಳವಳು ಆಗಾಗ ಓರೆನೋಟದಿಂದ.

ಲ:—ತಮಾಷೆಯೆಲ್ಲಾ ಸಾಕು. ಈ ಕಾಗದಗಳನ್ನು ಒಡೆದು ಓದಿನೋಡು, ಏನಾದರೂ ಜರೂರು ಇರಬಹುದು.

ರಾ:—ಅಂತಹ ಜರೂರಿನ ಸಂಗತಿಯೇನೂ ಇರಲಿಕ್ಕಿಲ್ಲೆನ್ನುವ. ಈಗ ನೀನು ಆ ಹರಿಜನ ಹುಡುಗಿಯನ್ನು ಮದುವೆಯಾಗುವೆಯೋ ಇಲ್ಲವೋ ಹೇಳು. ಆ ಹುಡುಗಿಯೂ ಪ್ರಣಯರೋಗ ಬಾಧಿತಳಾಗಿದ್ದಾಳಂತೆ. ಸುಂದರಿಯು ನನ್ನನ್ನು ಕೂತುಕೊಳ್ಳಲಿಕ್ಕೆ ಬಿಡುವುದಿಲ್ಲ. ಬೇಗನೆ ನಿನಗೆ ನಮ್ಮದಕ್ಕಿಂತಲೂ ಶ್ರೇಷ್ಠ ಮಾದರಿಯ ಮದುವೆಮಾಡಬೇಕೆಂದವಳ ಉತ್ಕಟೇಚ್ಛೆ. ಅವಳಿಗೆ ನಾಚಿಕೆಯಾಗುವುದಂತೆ ನಿನ್ನೊಡನೆ ಪ್ರಸ್ತಾಪಿಸಲಿಕ್ಕೆ.

ಲ:—ಮೈದಾನಿನಲ್ಲಿ ಮಡ್ಡಮಳಂತೆ ಗಂಡನ ಭುಜಭುಜ ಆನಿಸಿಕೊಂಡು ತಿರುಗಾಡಲಿಕ್ಕೆ ನಾಚಿಕೆಯಾಗುವುದಿಲ್ಲವಂತೆಯೇ?

ರಾ:—ಆ ಮಾತೆಲ್ಲಾ ಹಾಗಿರಲಿ. ಹರಿಜನ ಹುಡುಗಿಯ ಮದುವೆಯ ವಿಷಯಕ್ಕೇನು ಉತ್ತರಕೊಡುವೆಯೆಂದು ಹೇಳು. ಕಾಲಬುಡಕ್ಕೆ ಬಂದಿದೆ ಈಗ ಸತ್ವಪರೀಕ್ಷೆ. ಬೇರೆಯವರಿಗೆಲ್ಲಾ ಉಪದೇಶ ಮಾಡಿದಷ್ಟು ಸುಲಭವಲ್ಲ ಸ್ವತಹ ಮಾಡುವುದು.

ಲ:—ಸುಂದರಿ, ಸತ್ಯಹೇಳು. ಇವನು ಹೇಳುವ ಮಾತೆಲ್ಲಾ ನಿಜವೇ?

ಸು:—ಸತ್ಯವೆಂದು ಹೇಳುತ್ತಾರಲ್ಲ ಅವರು?

ಲ:—ಒಹೋ, ಅವನು ಹೇಳುವುದೇ? ಮೊದಲವನು ಸತ್ಯಂಭಟ್ಟ ನಾಗಿದ್ದ ನೋಡು ಸುಂದರಿ. ನಿನ್ನನ್ನು ಮದುವೆಯಾದ ಮೇಲೆ ಹಸಿ ಹಸಿ ಸುಳ್ಳು ಹೇಳಲಿಕ್ಕೊಂದು ಚೆನ್ನಾಗಿ ಕಲಿತಿದ್ದಾನೆ. ನಾನು ಕೊರಗರ ಹುಡುಗಿಯನ್ನು ಬೇಕಾದರೂ ಮದುವೆಯಾಗಲು ಸಿದ್ಧನಿದ್ದೇನೆ. ಅದಕ್ಕೆಲ್ಲಾ ಹಿಂಜರಿಯುವವ ಲಕ್ಷ್ಮೀನಾರಾಯಣನಲ್ಲ!

ಸು:—ನೀವು ಇನ್ನು ಬೇಗನೆ ಮದುವೆಯಾಗಬೇಕಣ್ಣ.

ವೆ:—ನೀನೊಬ್ಬಾಕೆ ಹರಿಜನ ಹುಡುಗಿಯನ್ನೇ ಹುಡುಕಿ ಮದುವೆಯಾಗಬೇಕು ನಾರಾಯಣ. ನಾನೇ ಆ ಮದುವೆಯ ಪೌರೋಹಿತ್ಯ ವಹಿಸುವೆನು. ಪುರಾಣಕಾಲದಲ್ಲಿ ನಮ್ಮ ಧರ್ಮ ವೃಕ್ಷದ ಸುತ್ತಲೂ ಹುಲುಸಾಗಿ ಬೆಳೆದು ಅದನ್ನು ಸಂಪೂರ್ಣವಾಗಿ ಆವರಿಸಿ ಮರೆಮಾಡಿರುವ ಕಾಟು ಗಿಡಗಳನ್ನೆಲ್ಲಾ ಬೇರು ಸಮೇತ ಕಿತ್ತುಹಾಕಿ,ವೈದಿಕಧರ್ಮ ಕಲ್ಪವೃಕ್ಷವನ್ನು ಪುನರುಜ್ಜೀವಿಸುವ ಧರ್ಮ ವೀರರಾಗಬೇಕು ನಾವು. ಅಂತಹ ಸಾಹಸಕ್ಕೆ ಮುಂದಾದರೆ ಮಾತ್ರ ಹಿಂದು ಧರ್ಮೋದ್ಧಾರವಾಗಬಹುದು. ಹಿಂದು ಸಮಾಜ ಹೃದಯ ವನ್ನು ಕ್ಷಯಕೀಟದಂತೆ ಕೊರೆಯುತ್ತಿರುವ ಅತ್ಯಂತ ಹಾನಿಕಾರಕ ಪೌರಾಣಿಕ ಪದ್ಧತಿಗಳಲ್ಲೊಂದೆಂದರೆ ಜಾತಿಭೇದ. ಅದರ ಮೂಲೋ ತ್ಪಾಟನ ಮಾಡದೆ ಹಿಂದುಧರ್ಮಕ್ಕೆ ಉಳಿಗಾಲವಿಲ್ಲ. ಅದಕ್ಕೆ ಅಂತ ರ್ಜಾತೀಯ, ಮುಖ್ಯವಾಗಿ ನೀಚೋಚ್ಚವೆನಿಸುವ ಜಾತಿಗಳೊಳಗಣ ವಿವಾಹವೇ ಮುಖ್ಯ ಸಾಧನ.

ಲ:—ಭಟ್ರೆ, ನಿಮ್ಮ ಮಾತನ್ನು ನಾನು ಶಿರಸಾವಹಿಸುವೆನು. ನಮಗೆಲ್ಲರಿಗೂ ಬದ್ಧವಿರೋಧಿಯಾಗಿದ್ದ ನೀವು ಎಷ್ಟು ಬೇಗ ಗುರು ಸ್ಥಾನಕ್ಕೇರಿ ಬಿಟ್ಟಿರುವಿರಿ? ರಾಮಸುಂದರಿಯರ ವಿವಾಹ ಸಂದರ್ಭದಲ್ಲಿ ನೀವು ಮಾಡಿದ ಭಾಷಣವು ಮಂಗಳೂರಿನ ಆರ್ಯಸಾಮಾಜಿಕ ರಲ್ಲೆಲ್ಲಾ ನವಹುರುಪನ್ನುಂಟುಮಾಡಿರುವುದು. ನಿಮ್ಮಂಥವರಿಂದ ನಮ್ಮ ಸನಾತನ ವೈದಿಕಧರ್ಮದ ನಿಜವಾದ ಸೇವೆಯಾಗುವುದೆಂಬುದ ರಲ್ಲಿ ಸಂದೇಹವೇ ಇಲ್ಲ. ನಾನೊಬ್ಬ ಹರಿಜನ ಹುಡುಗಿಯನ್ನು

ಮದುವೆಯಾಗಬೇಕೆಂದು ನಿಮ್ಮೆಲ್ಲರ ಇಚ್ಛೆ ಇದ್ದರೆ ಸಾನದಕ್ಕೆ ಸಿದ್ಧನೇ ಇರುವೆನು.

ವೆ:—ಇದೀಗ ಬಹಳ ಸಂತೋಷದ ವಿಷಯ. ಆ ಕುರಿತು ನಾವು ಮುಂದೆ ಯೋಚಿಸಬಹುದು. ನೀವು ತಂದಿರುವ ಕಾಗದಗಳನ್ನು ಒಡೆದು ನೋಡಲೇ ಇಲ್ಲವಲ್ಲ?

ಲ:—ಪೋಸ್ಟ್ ಆಫೀಸಿಗೆ ಹೋಗಿ ಬಹಳ ಕಷ್ಟಪಟ್ಟು ಕಾಗದ ಗಳನ್ನು ತಂದಿದ್ದೇನೆ. ನನ್ನ ಶ್ರಮಕ್ಕೇನಾದರೂ ಪ್ರತಿಫಲ ಕೊಡದೆ ಹಾಗೆಯೇ ಎಷ್ಟು ಮಾತ್ರಕ್ಕೂ ಕೊಡಲಾರೆ ಅವನ್ನು.

ರಾ:—ಏನು ಪ್ರತಿಫಲ ಬೇಕು ಕೇಳು.

ಲ:—ಬೇರೇನಿಲ್ಲ. ನೀನೂ ಸುಂದರಿಯೂ ಸಿನೆಮದ ಪ್ರಣಯಿ ಗಳಂತೆ ಒಟ್ಟು ನಿಂತು ಪ್ರಣಯಗಾನವೊಂದನ್ನೀಗ ಹಾಡಿ ನನ್ನ ಮನ ಸ್ಸಂತೋಷಗೊಳಿಸಬೇಕು.

ಸು:—ನನ್ನಿಂದ ಸಾಧ್ಯವಿಲ್ಲ.

ರಾ:—ನನಗೆ ಪ್ರಣಯಗಾನವೇ ಬರುವುದಿಲ್ಲ.

ಲ:—ಹಾಗಾದರೆ ಕಾಗದ ಕೊಡಲಿಕ್ಕೂ ಸಾಧ್ಯವಿಲ್ಲ.

ವೆ:—ಪ್ರಣಯಗಾನವೇ ಆಗಬೇಕೆಂದೇನು? ವೈದಿಕ ಭಜನಾ ಗೀತೆಯೊಂದನ್ನು ಹಾಡಿದರಾಗದೇ?

ಲ:—ಮತ್ತೇನು ಮಾಡುವುದು? ಅದಾದರೆ ಅದು. ಒಂದೊಂದು ಸೊಲ್ಲು ಒಬ್ಬೊಬ್ಬರು ಹಾಡಬೇಕು.

ಸು:—ಇಬ್ಬರೂ ಒಟ್ಟಿಗೆ ಹಾಡಿದರಾಗದೇ?

ಲ:—ಒಂದು ನಿನಗೆ ಮತ್ತು ಇನ್ನೊಂದು ರಾಮುನಿಗೆ ಬಂದಿರುವ ಕಾಗದಗಳಿವು. ನಿಮ್ಮನಿಮ್ಮ ವಿಳಾಸದ ಕಾಗದ ನಿಮಗೆ ಬೇಕಾದರೆ ನೀವು ಪ್ರತ್ಯಪ್ರತ್ಯೇಕವಾಗಿ ಹಾಡಬೇಕು.

ಜಾನಕಿನಾಥ—ಎಂಬಂತೆ

ಸು:-ಪ್ರಾಣ ವಿಕಾಸ—ದಯಾನಿಧಿಯೆ ನಾಥ || ಪಲ್ಲ ||

ಪ್ರಭು ಸರ್ವ ಸಾಕ್ಷಿ—ವರ ಪ್ರೇಮಮೂರ್ತಿ |

ನೀಡು ಪ್ರಾಣೇಶ-ಪ್ರೇಮ ಪ್ರಸಾದ | ದಯಾನಿಧಿಯೆ ನಾಥ |

ರಾ:—ಜೀವನಾಧಾರ—ಪರಮಾನಂದ ರೂಪ |
ಹೃದಯ ವಿಹಾರಿ—ಮಂಗಲ ಮೂರ್ತಿ |
ಆತ್ಮ ಸಂಯೋಗ—ಯೋಗದಾಯಕ | ಪರಮಾನಂದ ರೂಪ |

ರಾ:—ಆಯ್ತು ಮಹಾರಾಯ. ಇನ್ನಾದರೂ ಕೊಡು ಕಾಗದಗಳನ್ನು. (ಲಕ್ಷ್ಮೀನಾರಾಯಣನು ಇಬ್ಬರ ಕಾಗದಗಳನ್ನೂ ಕೊಡುವನು. ರಾಮಭಟ್ಟನು, ತನ್ನ ಕಾಗದ ಒಡೆದೋದಿ) ಇದು ಸೋಮನ ಕಾಗದ. ಅಹ! ಸೋಮನೀಗ ಎಷ್ಟು ಒಳ್ಳೆಯವನಾಗಿ ಬಿಟ್ಟಿದ್ದಾನೆ. ನಾವೆಲ್ಲ ಊರಿಗೊಮ್ಮೆ ಬರಬೇಕಂತೆ. ಊರ ಜನಸಾಮಾನ್ಯರೆಲ್ಲಾ ನಮ್ಮನ್ನೊಮ್ಮೆ ನೋಡಲು ಆತುರಪಡುತ್ತಿರುವಂತೆ. ಇನ್ನೊಂದು ವಿಶೇಷ ಸಂಗತಿಯಿದೆ ಅಪ್ಪಾ ದುಗ್ಗಪ್ಪಶೆಟ್ರು ಕನಾನೂರು ಜೈಲಿನಿಂದ ಹಿಂದೆ ಬಂದಿದ್ದಾರಂತೆ. ಅವರೀಗ ಮೊದಲಿನ ದುಗ್ಗಪ್ಪ ಶೆಟ್ರೇ ಅಲ್ಲವಂತೆ. ಬಹಳ ಒಳ್ಳೇ ನಡತೆಯವರಾಗಿರುವರಂತೆ. ನಾಗಮ್ಮ ಶೆಟ್ತಿಯರಿಗೂ ಅವರಿಗೂ ಈಗ ರಾಜಿಯಾಗಿ ಅವರು ಬಹಳ ಪ್ರೀತಿಯಿಂದಿರುವರಂತೆ. ಅವರೂ ನಮ್ಮನ್ನೆಲ್ಲಾ ನೋಡಬೇಕೆಂಬ ಆಶೆಯಿಂದಿರುವರಂತೆ.

ಸು:—(ತನ್ನ ಕವರು ಒಡೆದೋದಿ) ಇದು ಲಕ್ಷ್ಮಿಯ ಕಾಗದ.

ಲ:—ಸೈ. ಗಂಡ ಹೆಂಡಿರಿಗೆ ಗಂಡ ಹೆಂಡಿರ ಕಾಗದ!

ರಾ:—ಏನು ಬರೆದಿದ್ದಾಳೆ ಲಕ್ಷ್ಮಿ?

ಸು:—ನಾನೀಗ ದೊಡ್ಡವಳಾಗಿದ್ದೇನಂತೆ. ಬಡವಳಾದ ಅವಳನ್ನು ಮರೆತೇ ಬಿಟ್ಟಿರುವೆನಂತೆ. ಮೊದಲು ನನಗೆ ಅವರೆಲ್ಲಾ ಬೇಕಾಗಿದ್ದರಂತೆ. ಈಗ ಮದುವೆಯಾದ ಮೇಲೆ ಯಾರೂ ಬೇಡವಂತೆ. ತಾಯಿಯು ಯಾವಾಗಲೂ ನನ್ನನ್ನೇ ಹಂಬಲಿಸುತ್ತಿರುವರಂತೆ. ಒಮ್ಮೆ ಅಗತ್ಯ ಊರಿಗೆ ಬರಬೇಕಂತೆ.

ಲ:—ನನಗೂ ಈ ಪಟ್ಟಣದಲ್ಲಿ ಇದ್ದು ಇದ್ದು ಸಾಕಾಗಿದೆ ರಾಮು. ಹಳ್ಳಿಗೆ ಹೋಗಿ ಕೆಲದಿನ ಕಳೆದರಾದೀತೆಂಬ ಇಚ್ಛೆ ನನ್ನಲ್ಲೂ ಇರುವುದು. ಬರುವ ಕ್ರಿಸ್‌ಮಸ್ ರಜೆಯಲ್ಲಿ ಎಲ್ಲರೂ ಒಟ್ಟಿಗೆ ಹೋಗುವ.

ರಾ:—ಈ ವಿಷಯದಲ್ಲಿ ತಂದೆಯವರ ಅಭಿಪ್ರಾಯವೇನು?

ನೆ:— ದುಗ್ಗಪ್ಪಶೆಟ್ರೇ ನಮ್ಮನ್ನೆಲ್ಲಾ ನೋಡಲೊಮ್ಮೆ ಆಶಿಸುವರಾದರೆ ನಮ್ಮ ಊರೇ ಒಳ್ಳೇದಾದ ಹಾಗೆ. ಅವರಿಗೆ ನಾವು ಬೋಧನೆಯಿತ್ತು ಆರ್ಯಸಮಾಜಕ್ಕೆ ಸೇರಿಸಿಕೊಂಡರೆ ನಮಗೆ ಬಹಳ ಪ್ರಯೋಜನವಾದೀತು ನಾರಾಯಣ.

ಲ:— ಆ ಪ್ರಯತ್ನಕ್ಕೆ ನಾನೂ ನನ್ನಿಂದ ಕೂಡಿದಷ್ಟು ಪ್ರಯತ್ನ ಮಾಡುತ್ತೇನೆ. ನಿಮ್ಮ ಊರಲ್ಲೇ ಒಂದು ಆರ್ಯಸಮಾಜದ ಶಾಖೆ ತೆರೆಯುವ. ಯಾವಾಗಲೂ ಸುಧಾರಣೆಯು ಹಳ್ಳಿಗಳಿಂದ ಆರಂಭವಾಗಬೇಕು.

ರಾ:— ಆಯ್ತು ಹಾಗಾದರೆ, ಈಗ ತಿರುಗಾಡಲು ಮೈದಾನಿಗೆ ಹೋಗುವ. (ಹೋಗುವರು)

ಸಮಾಪ್ತಿ

N. P. U. P. I. C. S. K, 72/1000, 31-5-47.

ಕಿರಿಯುರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂಶಯ ಪಿಶಾಚಿ	(ಕೆ. ಕೆ. ಶೆಟ್ಟಿ)	0	8	0
ನಾಡ ಕತೆಗಳು	(ಸಂಕಲನ)	0	3	0
ಕುಶಲವ	(ಕೆ. ಕೆ. ಶೆಟ್ಟಿ)	0	6	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	4	0
ಮಧುವನ	(ಕತಾಸಂಗ್ರಹ)	3	0	0
ಮುಂದಿನ ದೇವರು	(ಕೆ. ಕೆ. ಶೆಟ್ಟಿ)	0	3	0
ವ್ಯಭಿಚಾರಿಣಿ ಯಾರು	(ಕೆ. ಕೆ. ಶೆಟ್ಟಿ)	1	4	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	12	0
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4	0
ಪ್ರೇಮ ವಿಜಯ	(,,)	1	0	0
ರಂಗಭೂಮಿ	(ಎಸ್. ವೆಂಕಟರಾಜ)	0	8	0
ಸೇವಾಪಥ	(ಎಸ್. ಎಲ್ ಸುಬ್ರಹಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರ್‍ಆವ್)	0	14	0
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ. ವಿಟ್ಠಲ ಶೆಣ್ಯೆ, ಬಿ. ಎ. ಎಲ್.ಟಿ.)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹಣ್ಯಂ)	1	0	0
ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	(ಎಂ. ವಿ. ಹೆಗ್ಡೆ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8	0

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ (ಇಂಗ್ಲಿಷ್ ಸ್ವಯಂಬೋಧಿನಿ)	1	4
ಗೀತೆಯ ಕೈಗನ್ನಡಿ (ಭಗವದ್ಗೀತೆಯ ಅನುವಾದ)	0	8
ಬಾಲವಾಙ್ಮಯ (ಬಾಲಸಾಹಿತ್ಯದ ವಿವರಣೆ)	0	3
ಆರೋಗ್ಯ ಪ್ರತಾಪ (ನಾಟಕ)	0	12
ಧರ್ಮಸಂಕಟ (ನಾಟಕ)	0	4
ಕಂಡೂ ಕಾಣದ ನೋಟಗಳು (ಕಥಾ ಸಂಕಲನ)	0	8
ಆಹುತಿ ಇತ್ಯಾದಿ ಕತೆಗಳು (ಕತೆಗಳು)	0	12
ಶ್ರೀಮುಖ (ಕವಿತೆಗಳು)	1	0
ಪಂಚಾರತಿ (ಏಕಾಂಕ ನಾಟಕಗಳ ಸಂಗ್ರಹ)	0	6
ಚಿಗುರು (ಕತೆಗಳ ಸಂಗ್ರಹ)	0	6
ಲೋಪಾಮುದ್ರೆ	0	6
ಪ್ರತೀಕಾರ (ನಾಟಕ)	0	6
ಪ್ರೇಮ ಪ್ರವಾಹ (ಕಥಾಸಂಗ್ರಹ)	0	8
ಅಂತರಂಗದ ಕಥೆಗಳು (ಕಥಾಸಂಗ್ರಹ)	0	12
ಶಂಭುಕ ವಧೆ (ನಾಟಕ)	0	2
ಮುಗುಳು (ಪದ್ಯಸಂಗ್ರಹ)	0	3
ವೀರಭೂಮಿ (ಕಾದಂಬರಿ)	0	2
ಮೀರಾಬಾಯಿ (ನಾಟಕ)	0	10
ಸರಸ್ವತಿ (,,)	0	12
ಆಯುರ್ವೇದ ಸಂಚಿಕೆ	1	0
ಚಲಚ್ಚಿತ್ರ ಪದ್ಯಾವಳಿ	0	3
ಮನೆಮದ್ದು	2	0
ಪರ್ಯಾಯ ಸಂಚಿಕೆ	0	8
ಪಾಪಪೂರಿತ ಪಟ್ಟಣಗಳು	2	0
ಕಾಂಗ್ರೆಸಿನ 60 ವರ್ಷಗಳು	0	8
ಜ್ಯೋತಿಷ ಕಲ್ಪದ್ರುಮ I, II ಭಾಗಗಳು	6	8

ನವಭಾರತ ಪುಸ್ತಕ ಭಂಡಾರ, ಉಡುಪಿ.

'ಕಿರಿಯರ ಪ್ರಪಂಚ'ದ
ಪ್ರಕಟಣೆಗಳು ಸಿಗುವ ಸ್ಥಳಗಳು

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು.
ಎಂ. ಶಂಕರನಾರಾಯಣ ಮಯ್ಯ, ಪುತ್ತೂರು.
ಮನೋಹರ ಗ್ರಂಥ ಭಂಡಾರ, ಧಾರವಾಡ.
ಸಾಹಿತ್ಯ ಮಂದಿರ, ಹುಬ್ಬಳ್ಳಿ.
ವಾಗ್ವಿಲಾಸ ಬುಕ್ ಡಿಪೊ, ಹುಬ್ಬಳ್ಳಿ.
ಉಷಾ ಪ್ರೆಸ್, ಮೈಸೂರು.
ಬಸವೇಶ್ವರ ಪುಸ್ತಕ ಭಂಡಾರ, ಹುಬ್ಬಳ್ಳಿ.
ಕೆನರಾ ಬುಕ್ಸ್ & ನ್ಯೂಸ್ ಏಜನ್ಸಿ, ಬೊಂಬಾಯಿ.
ಮಹಂತೇಶ ಬುಕ್ ಡಿಪೊ, ಬಾಗಲಕೋಟೆ.
ನೂತನ ಪುಸ್ತಕಾಲಯ, ಬಿಜಾಪುರ.
ದಿ ನ್ಯು ಸಪ್ಲೈ ಏಜನ್ಸಿ, ಕುಮಟಾ.
ಜೆ. ಆರ್. ಶೆಣೈ & ಸನ್ಸ್, ಮಂಗಳೂರು.
ಕೆ. ವೆಂಕಟೇಶಯ್ಯ & ಬ್ರದರ್ಸ್, ಶಿವಮೊಗ್ಗಾ.
ಭಕ್ತಾ ಬ್ರದರ್ಸ್, ಕಾಸರಗೋಡು.
ನವಭಾರತ ಬುಕ್ ಡಿಪೊ, ಉಡುಪಿ.